# ಅಧ್ಯಾಯ - 13

# ಶಿಕ್ಷಣ ಮತ್ತು ಕ್ರೀಡೆ

ಪ್ರಾಚೀನ ಕರ್ನಾಟಕದಲ್ಲಿ ಇತರೆಡೆ ಇದ್ದಂತೆ ಮಠಗಳು, ಘಟಿಕಾಸ್ಥಾನಗಳು, ಬ್ರಹ್ಮಪುರಿಗಳು ಮತ್ತು ಅಗ್ರಹಾರಗಳು ಶಿಕ್ಷಣ ಕೇಂದ್ರಗಳಾಗಿದ್ದವು. ಅಗ್ರಹಾರಗಳು ಸ್ವತಂತ್ರವಾದ ವಿಭಿನ್ನ ಊರುಗಳೇ ಆಗಿದ್ದವು. ರಾಜ ರಾಣಿಯರು, ಉನ್ನತ ಅಧಿಕಾರಿಗಳು, ಹಾಗೂ ಶ್ರೀಮಂತರು ವಿದ್ಯಾಪ್ರಸಾರಕ್ಕಾಗಿ ಈ ಅಗ್ರಹಾರಗಳನ್ನು ಸ್ಥಾಪಿಸುತ್ತಿದ್ದರು. ಇದಕ್ಕಾಗಿ ಇತರ ಪ್ರದೇಶಗಳಿಂದ ವಿದ್ವಜ್ಜನರನ್ನು ಕರೆತಂದು, ಅವರಿಗೆ ಜೀವನೋಪಾಯಕ್ಕಾಗಿ ಭೂದಾನ ನೀಡಿ ಒಂದು ಹಳ್ಳಿಯಲ್ಲಿ ನೆಲೆಗೊಳಿಸುತ್ತಿದ್ದರು. ಅಗ್ರಹಾರಗಳು ಬ್ರಾಹ್ಮಣರಿಗಾಗಿಯೇ ದಾನಮಾಡಲ್ಪಟ್ಟ ಹಳ್ಳಿಗಳಾಗಿದ್ದರೂ, ಇಲ್ಲಿ ಇತರೆ ಜನರೂ ವಾಸಿಸುತ್ತಿದ್ದರು. ಇಲ್ಲವೇ ಅಗ್ರಹಾರ ಮಹಾಜನಗಳಿಗೆ ನೀಡಿದ ಭೂಮಿಯಿಂದ ಉಪಗ್ರಾಮ (ಕಾಲುವಳ್ಳಿ)ಗಳಲ್ಲಿ ಇರುತ್ತಿದ್ದರು. ಅಗ್ರಹಾರಗಳು ಉನ್ನತ ಶಿಕ್ಷಣ ಹಾಗೂ ಧಾರ್ಮಿಕ ಚಟುವಟಿಕೆಯ ಕೇಂದ್ರಗಳಾಗಿ ಅಲ್ಲಿಯ ಬ್ರಾಹ್ಮಣರು ಷಟ್ಕರ್ಮ (ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ) ನಿರತರಾಗಿದ್ದು, ವೇದಾದಿ 14 ವಿದ್ಯೆಗಳಲ್ಲಿ ಪಾರಂಗತರಾಗಿರಬೇಕೆಂದು ಇತ್ತು. ಇಂತಹ ಅಗ್ರಹಾರಗಳು ನಾಡಿನಾದ್ಯಂತ ಇದ್ದವು. ಅಗ್ರ + ಆಹಾರ ಎಂದರೆ ಗಣ್ಯರ ವಾಸಸ್ಥಳ ಎಂದು ಅವುಗಳ ಬಗ್ಗೆ ಅರ್ಥ ತಿಳಿದುಕೊಳ್ಳಬಹುದು. ಅಗ್ರಹಾರಗಳಲ್ಲಿ ಶಿಕ್ಷಣ ಪಡೆದ ಗಣ್ಯನಿಗೆ ಪರೀಕ್ಷೆ ನಡೆಸುವ ಕೇಂದ್ರಗಳು ಘಟಿಕಾಸ್ಥಾನಗಳು. ಗದಗು, ಲಕ್ಷ್ಮೇಶ್ವರ, ಪೊಟ್ಟೆಯೂರು (ಹೊಟ್ಟೂರು), ಕೊಟ್ಟುಮಚಿಗೆ ಮುಂತಾದವಲ್ಲಿ ಇಂಥ ಘಟಿಕಾಸ್ಥಾನಗಳು ಇದ್ದವು. ಅಲ್ಲಿ ವಿಶೇಷವಾಗಿ ತ್ರೈಪುರುಷ ದೇವಾಲಯಗಳು ಇದ್ದವು.

ಅಗ್ರಹಾರಗಳು ಸ್ವತಂತ್ರ ಗ್ರಾಮಗಳಾಗಿದ್ದರೆ, ಬ್ರಹ್ಮಪುರಿ ಒಂದು ದೊಡ್ಡ ಊರಲ್ಲಿ ಅಗ್ರಹಾರದ ಬ್ರಾಹ್ಮಣರು ಮಾಡುವ ಕೆಲಸವನ್ನೇ ಮಾಡುವ, ವಿದ್ವಾಂಸರು ವಾಸವಾಗಿದ್ದ ಬ್ರಾಹ್ಮಣರ ಬೀದಿಗಳಾಗಿದ್ದವು. ದೇವಾಲಯಗಳ ಪರಿಸರದಲ್ಲಿ ಮಠಗಳಿದ್ದು ಅಲ್ಲಿ ಗುರುವೂ ಶಿಷ್ಯರೂ ಕೂಡಿಯೇ ಇರುತ್ತಿದ್ದರು. ಅಗ್ರಹಾರದ ಬ್ರಾಹ್ಮಣರಲ್ಲಿ ಒಬ್ಬನಿಗೆ 'ಅಕ್ಕರಿಗೆ ವೃತ್ತಿ' ನೀಡಿ ಬಾಲಕರ ಶಿಕ್ಷಣಕ್ಕೆ ನೇಮಿಸುತ್ತಿದ್ದರು. ಶೈವಧರ್ಮದ ಪ್ರಭಾವ ಹೆಚ್ಚಿದಾಗ ಶಿವಪುರಿಗಳೆಂದೂ ಅಗ್ರಹಾರಗಳನ್ನು ಸ್ಥಾಪಿಸಿದರು. ವೀರಶೈವ ಧರ್ಮವು ಪ್ರಸಾರಕ್ಕೆ ಬಂದು ಎಲ್ಲೆಡೆ ಮೂಡಿದ ಮಠಗಳು ಪ್ರಾಥಮಿಕ ಶಿಕ್ಷಣದ ಕೇಂದ್ರಗಳೂ ಆಗಿ ಬೆಳೆದು ಈ ಶತಮಾನದ ಆರಂಭಕ್ಕೂ ಇದ್ದವು. ಇದಲ್ಲದೆ ಹಿಂದೆ ಆರಂಭವಾದ ಖಾಸಗಿ ಶಾಲೆಗಳಿಗೂ ಓದಿಸುವ ಮಠ, ಸಾಲಿಮಠ, ಕೂಲಿ ಮಠಗಳೆಂದೂ ಕರೆಯುತ್ತಿದ್ದರು.

ಧಾರವಾಡ ಜಿಲ್ಲೆಯಲ್ಲಿ ಬಾದಾಮಿ ಚಾಳುಕ್ಯರ ಕಾಲದಿಂದ ಲಕ್ಷ್ಮೇಶ್ವರ ಮುಂತಾದ ಊರುಗಳಲ್ಲಿ ಅಗ್ರಹಾರಗಳಿದ್ದು ರಾಷ್ಟ್ರಕೂಟರ ಕಾಲದ ಕಾಡಿಯೂರು (ಕಳಸ), ಮಂತ್ರವಾಡಿ, ಶಿಗ್ಗಾಂವಿ, ಶಿಶುವಿನಹಳ್ಳಿ, ನೀರ್ಗುಂದ (ನೀಲಗುಂದ), ಚಿಂಚಿಲು, ಕಿಮುಳೆ, ಮುಂತಾದೆಡೆ ಇದ್ದ ಅಗ್ರಹಾರಗಳ ಉಲ್ಲೇಖವಿದೆ. ಗದಗು ಅಗ್ರಹಾರದಲ್ಲಿ 72, ನರಗುಂದದಲ್ಲಿ 200 ಮಹಾಜನರೂ, ಪುಲಿಗೆರೆಯಲ್ಲಿ 120 ಜನರೂ ಇದ್ದುದೂ ತಿಳಿಯುತ್ತದೆ. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಹೊಂಬಳ (200 ಮಹಾಜನರು), ಜಕ್ಕಲಿ (200), ತಿಳವಳ್ಳಿ

(1000), ಚಿಕ್ಕೆರೂರು (1000), [ಇದು 'ಅನಾದಿ' ಅಗ್ರಹಾರವೆಂದು 1408ರ ಶಾಸನ ಹೇಳುತ್ತಿದ್ದು, ಮಹಾಜನರನ್ನು 'ಸರ್ವಜ್ಞ'ರೆಂದಿದೆ], ಹಾವೇರಿ (400), ಡೋಣಿ (60), ಲೊಕ್ಕಿಗುಂಡಿ (ಲಕ್ಕುಂಡಿ) 1000, ಬೆಂತೂರು (60), ಅಮ್ಮಿನಭಾವಿ (400), ನವಿಲೂರು, ಹುಬ್ಬಳ್ಳಿ ('ಎಲೆಯ ಪೂರ್ವಹಳ್ಳಿ'), ಸೊರಟೂರು ಈ ಎಲ್ಲ ಅಗ್ರಹಾರಗಳಲ್ಲಿ ಚತುರ್ದಶ ವಿದ್ಯಾನಿಪುಣರಾದ ಬ್ರಾಹ್ಮಣ ವಿದ್ವಾಂಸರಿದ್ದುದು ತಿಳಿಯುತ್ತದೆ. 1099 ಚಾಳುಕ್ಯ ಆರನೇಯ ವಿಕ್ರಮಾದಿತ್ಯನ ದಂಡನಾಯಕ ಸೋಮೇಶ್ವರ ಚಟ್ಟೋಪಾಧ್ಯಾಯನು ಲಕ್ಕುಂಡಿಯಲ್ಲಿ ಪ್ರಭಾಕರ ವ್ಯಾಖ್ಯಾನ ಶಾಲೆಯ ನಿರ್ಮಾಣಕ್ಕೆ ದಾನ ನೀಡಿದ ವಿವರ ಗದುಗಿನ ಶಾಸನದಲ್ಲಿ ಇದೆ. ಇಲ್ಲಿ ಕೆಲವೇ ಅಗ್ರಹಾರಗಳ ಹೆಸರು ಹೇಳಿದ್ದು, ಈಗಿನ ಪ್ರತೀ ತಾಲೂಕಿನಲ್ಲೂ ಸರಾಸರಿ 10 ರಿಂದ 15 ಅಗ್ರಹಾರಗಳು ಆಗ ಇದ್ದಿರಬಹುದು. ಅಗ್ರಹಾರಗಳು ವೇದ, ವೇದಾಂಗ, ತರ್ಕ, ವ್ಯಾಕರಣಗಳ ಜೊತೆ ಆಯುರ್ವೇದ, ಜ್ಯೋತಿಷ್ಯ, ನಾಟ್ಯಶಾಸ್ತ್ರ ಮುಂತಾದ ಲೌಕಿಕ ವಿದ್ಯೆಗಳ ಅಧ್ಯಯನ ಕೇಂದ್ರಗಳೂ ಆಗಿದ್ದವು. ಕೃಷಿ ಹಾಗೂ ಬಡಗಿತನ, ಕುಂಬಾರಿಕೆ ಮುಂತಾದ ವೃತ್ತಿಗಳಿಗೂ ಸಂಬಂಧಿಸಿದ ವಿವರ ನೀಡುವ ವರಾಹಮಿಹಿರನ 'ಬೃಹತ್‌ಸಂಹಿತೆ' ಹಾಗೂ ಕ್ಷೇಮೇಂದ್ರನ 'ಲೋಕೋಪಕಾರ' ಮುಂತಾದ ವಿಶ್ವಕೋಶಗಳನ್ನೂ ಅಗ್ರಹಾರ ಪಂಡಿತರು ತಿಳಿದವರಾಗಿ, ನೆರೆಹೊರೆಯ ಜನರಿಗೆ ಮಾರ್ಗದರ್ಶನ ನೀಡಲು ಸಮರ್ಥರಾಗಿದ್ದರು. ಈ ಅಗ್ರಹಾರಗಳಲ್ಲಿ ಎಳೆಯ ಮಕ್ಕಳಿಗೆ ಅಕ್ಷರ, ಗಣಿತದ ಶಿಕ್ಷಣ ನೀಡಲು ಪ್ರತ್ಯೇಕ ವ್ಯವಸ್ಥೆಯಿತ್ತು. ಮಠಗಳನ್ನೂ ಶಾಲೆಗಳನ್ನೂ ಇದಕ್ಕಾಗಿ ಸ್ಥಾಪಿಸುತ್ತಿದ್ದರು. ಲಕ್ಷ್ಮೇಶ್ವರ (ಪುಲಿಗೆರೆ)ದ ರಾಮೇಶ್ವರ ದೇವಾಲಯದಲ್ಲಿ ಕೌಮಾರ ವ್ಯಾಕರಣ ಓದಿಸುವ 'ಉಪಾಧ್ಯಾಯ'ನಿಗೆ ದಾನ ನೀಡಿದ ವಿಚಾರ 1127 ರ ಶಾಸನದಲ್ಲಿ ಇದೆ. ಇಲ್ಲಿ ಪ್ರಾಥಮಿಕಕ್ಕಿಂತ ಸ್ವಲ್ಪ ಮೇಲ್ಪಟ್ಟದ ಶಿಕ್ಷಣದ ಸೂಚನೆ ಇದೆ. ಉಪಾಧ್ಯಾಯನ ಉಲ್ಲೇಖವೂ ಇದೆ. ಎಲೆಯ ಪೂರ್ವಹಳ್ಳಿಯ (ಹುಬ್ಬಳ್ಳಿ) 200ಮಹಾಜನರೂ ನವಿಲೂರ ಕುರುಬಸೇಣಿಗೂ (ಕುರುಬರ ಶ್ರೇಣಿ) ಶಾಲೆಯ ಕಟ್ಟಡವೊಂದನ್ನು ಕಟ್ಟಿದ ವಿಚಾರ 1189ರ ಒಂದು ಶಾಸನ ಹೇಳುತ್ತದೆ. ಪ್ರಾಚೀನ ಕಾಲದಲ್ಲಿ ಈ ಭಾಗದಲ್ಲಿ ಪ್ರಬಲರಾಗಿದ್ದ ಜೈನರೂ ತಮ್ಮ ಬಸದಿ ಮಠಗಳಲ್ಲಿ ಶಿಕ್ಷಣ ನೀಡುತ್ತಿದ್ದಿರಬೇಕು. ಕಾಳಾಮುಖ ಮಠಗಳಂತೂ ಶಿಕ್ಷಣದ ಗಣ್ಯಕೇಂದ್ರಗಳಾಗಿದ್ದು ಮಂತ್ರವಾಡಿ, ಚಿಕ್ಕೆರೂರು ಮುಂತಾದ ಅನೇಕ ಕಾಳಾಮುಖ ಕೇಂದ್ರಗಳು ಜಿಲ್ಲೆಯಲ್ಲಿ ಇದ್ದವು.

ಅಗ್ರಹಾರಗಳು, ಬ್ರಹ್ಮಪುರಿಗಳು ಧಾರ್ಮಿಕ ಶಿಕ್ಷಣಕ್ಕೆ ಮೀಸಲಾಗಿದ್ದರೂ, ಇತರ ಶಿಕ್ಷಣಕ್ಕೂ ಇಲ್ಲಿ ವ್ಯವಸ್ಥೆ ಇತ್ತು. ಶಿಕ್ಷಣವು ಬ್ರಾಹ್ಮಣರಿಗೆ ಮೀಸಲಾಗಿತ್ತು ಎಂದು ಹೇಳಿದಲ್ಲಿ ಅದು ಪೂರ್ಣ ಸತ್ಯವಾಗಲಾರದು. ವೃತ್ತಿ ಶಿಕ್ಷಣವು ಪ್ರತೀ ವೃತ್ತಿಯವರಲ್ಲೂ ಪರಂಪರಾಗತವಾಗಿ ಇರುತ್ತಿತ್ತು. ಓದು, ಬರಹ, ಲೆಕ್ಕ ಅರಿಯಬೇಕಾದ ಆಡಳಿತ ವರ್ಗಕ್ಕೆ ಸೇರಿದವರೂ, ವ್ಯಾಪಾರಿಗಳೂ ಬ್ರಾಹ್ಮಣರಲ್ಲದಿದ್ದರೂ, ಮೇಲೆ ಹೇಳಿದ ಮಠಗಳ ಮೂಲಕ ಇಲ್ಲವೇ ಸ್ವತಃ ಅಧ್ಯಾಪಕರನ್ನು ನೇಮಿಸಿ ಖಾಸಗಿ ಶಿಕ್ಷಣಕ್ಕೆ ವ್ಯವಸ್ಥೆ ಮಾಡಿರುತ್ತಿದ್ದರು. ಇಲ್ಲವೇ ಊರ ಸಾರ್ವಜನಿಕ ಸ್ಥಳದಲ್ಲಿ ಕೂಲಿಮಠಗಳು ಬಲು ಹಿಂದಿನಿಂದಲೂ ರೂಢಿಗೆ ಬಂದು, ಕಲಿಯುವ ಮಕ್ಕಳಿಂದ ನಿಯಮಿತ ಕೂಲಿ ಅಥವಾ ಕಾಣಿಕೆ ಪಡೆದು ಶಿಕ್ಷಣ ನೀಡುತ್ತಿದ್ದಿರಬೇಕು. ಖಾಸಗಿಯಾಗಿ ಮನೆಯಲ್ಲೇ ಉಪಾಧ್ಯಾಯರನ್ನು ನೇಮಿಸಿಕೊಂಡವರು ಮಹಿಳೆಯರಿಗೂ ಶಿಕ್ಷಣ ನೀಡುತ್ತಿದ್ದಿರಬಹುದು.

ರಾಜವಂಶೀಯರಾದ ಚಾಳುಕ್ಯ ಕುವರಿಯರಾದ ಅಕ್ಕಾದೇವಿ, ಮೈಳಲದೇವಿಯರೇ ಅಲ್ಲದೆ, ಗುತ್ತವಂಶದ ಮಲ್ಲದೇವನ ಅರಸಿ ಪದುಮಲದೇವಿ, ಕೋಣವಂತಿ (ಹಿರೇಕೋಣತಿ)ಯ ಸಾವಂತ ಕಾಮಿಸೆಟ್ಟಿಯ ಪತ್ನಿ ವೆಕ್ಕಲೆ ಸೆಟ್ಟಿಕಟ್ಟಿ ಮುಂತಾದ ವಿದ್ಯಾವಂತ ಮಹಿಳೆಯರ ಉಲ್ಲೇಖವಿದೆ. ಅದೇ ರೀತಿ ಖ್ಯಾತ ಚಾಳುಕ್ಯ ಸೇನಾನಿಯ ಪತ್ನಿ ಅತ್ತಿಮಬ್ಬೆ ವಿದ್ಯಾವಂತಳೂ ಗ್ರಂಥ ದಾನಮಾಡಿದವಳೂ ಆಗಿ ಪ್ರಸಿದ್ಧಳಾಗಿದ್ದಾಳೆ. ಶಾಸನೋಲ್ಲೇಖಿತರಾಗದ ವಿದ್ಯಾವಂತ ಮಹಿಳೆಯರ ಹೆಸರುಗಳು ಶಾಸನಗಳಲ್ಲಿ ಮಿಂಚಿವೆ. ನಮಗೆ ವಿವರ ತಿಳಿಯದ ವಿದ್ಯಾವಂತ ಮಹಿಳೆಯರೂ ಇದ್ದಿರಬೇಕು. ಆದರೆ ಸ್ತ್ರೀಯರ ಶಿಕ್ಷಣಕ್ಕೆ ಪುರುಷರಷ್ಟೇ ಪ್ರಾಧಾನ್ಯವಿರಲಿಲ್ಲ.

ಅಗ್ರಹಾರಗಳಲ್ಲಿ ವಿದ್ಯಾರ್ಥಿಗಳಿಗಾಗಲೀ, ಬೋಧಕರಿಗಾಗಲೀ, ಯಾವುದೇ ಕೊರತೆ ಇರಲಿಲ್ಲ. ಹಲವಾರು ಶಾಸನಗಳಲ್ಲಿ ವಿದ್ಯಾರ್ಥಿಗಳಿಗೆ ದೊರೆಯುತ್ತಿದ್ದ 'ಭೈಷಜ್ಯ' ಅಂದರೆ ವೈದ್ಯಕೀಯ ಸೌಲಭ್ಯಗಳ ಉಲ್ಲೇಖವಿದೆ. ಇಲ್ಲಿ ಶಿಸ್ತಿಗೆ ಆದ್ಯತೆ ಇದ್ದು, ಅಶಿಸ್ತಿನ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಲಾಗುತ್ತಿತ್ತು ಎಂದು ರೋಣ ತಾಲೂಕಿನ ಸೂಡಿ ಶಾಸನ ತಿಳಿಸುತ್ತದೆ.

ಪಠ್ಯಕ್ರಮದ ಪ್ರಾಥಮಿಕ ಹಂತದಲ್ಲಿ ಬಾಲಶಿಕ್ಷೆ, ಕರ್ನಾಟಬಾಲಶಿಕ್ಷೆ ಹಾಗೂ ಕನ್ನಡ ಅಕ್ಷರಗಳ ಅಭ್ಯಾಸ, ಉನ್ನತ ಹಂತದಲ್ಲಿ ನ್ಯಾಯ, ತರ್ಕ, ಮೀಮಾಂಸೆ, ಪ್ರಭಾಕರ ಹಾಗೂ ವ್ಯಾಕರಣಗಳು ಬೋಧಿಸಲ್ಪಡುತ್ತಿದ್ದುವೆಂದು ತಿಳಿದು ಬರುತ್ತದೆ.

ಅಗ್ರಹಾರಗಳ ಮೇಲ್ವಿಚಾರಕರನ್ನು ಮಹಾಜನಗಳೆಂದು ಕರೆಯಲಾಗುತ್ತಿದ್ದು ಗ್ರಾಮದ ಆಡಳಿತ, ಶಾಂತಿ, ಸುವ್ಯವಸ್ಥೆ ಕಾಪಾಡುವುದು, ಊರಿಗೆ ಬೇಕಾದ ಸಾರ್ವಜನಿಕ ಸವಲತ್ತು ಒದಗಿಸುವುದು, ಇವರ ಕರ್ತವ್ಯವಾಗಿತ್ತು. ಮಹಾಜನರು ಅಗ್ರಹಾರಗಳನ್ನೇ ಅಲ್ಲದೆ ಇತರ ಶೈಕ್ಷಣಿಕ ಸಂಸ್ಥೆಗಳನ್ನೂ ನಡೆಸುತ್ತಿದ್ದರೆಂದು ಮುಂಡರಗಿ ತಾಲೂಕಿನ ಕ್ರಿ.ಶ. 1124 ರ ಆಲೂರು ಶಾಸನ ತಿಳಿಸುತ್ತದೆ. ಅಗ್ರಹಾರ ಗ್ರಾಮಗಳಲ್ಲಿ ಮಹಾಜನರು ಆಯಾ ಊರಿನ ಸ್ಥಳೀಯ ಆಡಳಿತಕ್ಕೆ ಜವಾಬ್ದಾರರಾಗಿದ್ದು, ಬ್ರಹ್ಮಪುರಿಗಳಲ್ಲಿ ಇರುವವರು ಬ್ರಹ್ಮಪುರಿ ಇರುವ ಊರ ಇತರ ಗ್ರಾಮ ಸಮುದಾಯದೊಂದಿಗೆ ಊರ ಆಡಳಿತದಲ್ಲಿ ಸಹಕರಿಸುತ್ತಿದ್ದರು.

ಮುಸಲ್ಮಾನರ ಆಡಳಿತ ಬಂದಾಗ ಮಸೀದಿಗಳಿಗೆ ಹೊಂದಿ ಮುಖ್ತಬಾ ಅಥವಾ ಮದ್ರಸಾಗಳಿದ್ದು ಅಲ್ಲಿ ಅಕ್ಷರಾಭ್ಯಾಸದ ಜೊತೆ ಧಾರ್ಮಿಕ ಶಿಕ್ಷಣ ನೀಡುತ್ತಿದ್ದರು. ಆಗಲೇ ಅಗ್ರಹಾರದಲ್ಲಿದ್ದ ಅನೇಕ ಬ್ರಾಹ್ಮಣರು ಲೌಕಿಕ ಉದ್ಯೋಗಗಳಲ್ಲಿ - ಸೈನಿಕರಾಗಿ, ಆಡಳಿತಗಾರರಾಗಿ, ಕಾರಕೂನರಾಗಿ, ವ್ಯಾಪಾರಿಗಳಾಗಿ ತಮ್ಮ ಮೂಲ ಕರ್ತವ್ಯ ತ್ಯಜಿಸಲು ಆರಂಭಿಸಿದ್ದರು. ವಿಜಯನಗರ ಕಾಲದಿಂದಲೇ ಇದು ಹೆಚ್ಚಾಗಿ ಆರಂಭವಾಗಿ ಮುಸಲ್ಮಾನರ ಆಡಳಿತ ಕಾಲದಲ್ಲಿ ಅಗ್ರಹಾರಗಳ ಸ್ಥಾಪನೆ, ಅವುಗಳಿಗೆ ಪ್ರೋತ್ಸಾಹ ನಿಂತಿತು. ಅಗ್ರಹಾರದ ಮಹಾಜನರಿಗೆ ಕೊಟ್ಟ ಭೂಮಿ ಮೂರು ನಾಲ್ಕು ತಲೆಮಾರುಗಳಲ್ಲೇ ಕುಟುಂಬಕ್ಕೆ ಸಾಲದಾಗಿ, ಭೂಮಿ ಛೇದನವಾಗುವ, ಇಲ್ಲವೇ ಸಾಲದಾಗುವ ಪ್ರಸಂಗ ಬಂದಾಗ 'ಮಹಾಜನ'ರ ವಂಶಜರು ಅನ್ಯೋದ್ಯೋಗಗಳಿಗೆ ಹೋಗುವುದು ಸಹಜವಾಯಿತು. ಅದರಲ್ಲಿ ಉಪಾಧ್ಯಾಯರಾಗಿ ಕೂಲಿಮಠಕ್ಕೆ ಹೋದವರು ಇರಬಹುದು, ಸರಕಾರೀ ನೌಕರಿಗಾಗಿ ಪರ್ಶಿಯನ್, ಮರಾಠಿ ಕಲಿತವರೂ ಉಂಟು.

ಮರಾಠರ ಆಗಮನವಾದಾಗ ಆಡಳಿತ ಮರಾಠಿಯಲ್ಲಿ ಆಗಲು ಮರಾಠಿ ಕಲಿಸುವ ಕೂಲಿಮಠದ ಉಪಾಧ್ಯಾಯರಿಗೆ 'ಪಂತೋಜಿ' ಎನ್ನುತ್ತಿದ್ದರು. ಹಳೇ ಮೈಸೂರಲ್ಲೂ ಈ ಶಬ್ದ ರೂಢಿಯಲ್ಲಿತ್ತು. ಬ್ರಿಟಿಷರ ಆಗುಮನವಾಗುವ ತನಕ ಶಿಕ್ಷಣವೆಲ್ಲ ಕೂಲಿಮಠಗಳಲ್ಲೂ ಲಿಂಗಾಯಿತರ ಮಠಗಳಲ್ಲೂ ನಡೆಯುತ್ತಿತ್ತು.

ಈ ಶತಮಾನದ ಆರಂಭಕ್ಕೆ ಆಗಿ ಹೋದ ಅನೇಕ ಗಣ್ಯರು, ವಿದ್ವಾಂಸರು ತಮ್ಮ ಶಿಕ್ಷಣ ಸಾಲಿಮಠ ಅಥವಾ ಕೂಲಿಮಠದಲ್ಲಿ ಆರಂಭವಾಯಿತೆಂದು ಹೇಳಿದ್ದಾರೆ. ಡೆಪ್ಯೂಟಿ ಚನ್ನಬಸಪ್ಪನವರ ಬಾಲ್ಯದ ಗುರುಗಳು 'ಸಾಲಿಮಠ' ಎಂಬವರೆಂದು ಡಾ॥ ಸೀಗೀಹಳ್ಳಿ ಹೇಳಿದ್ದಾರೆ. 'ಸಾಲಿ' ಎಂಬ ಅಡ್ಡ ಹೆಸರಿನವರೂ ಉಪಾಧ್ಯಾಯರಾಗಿದ್ದವರೆಂದು ತಿಳಿಯುತ್ತದೆ. ಮುಂದೆ ಗಾಂವಠಿಶಾಲೆಗಳೆಂಬ ವ್ಯವಸ್ಥೆಯು ರೂಢಿಗೆ ಬಂತು. ಬ್ರಿಟಿಷ್ ಸರಕಾರವೇ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದಾಗಲೂ ಈ ಗಾಂವಠಿ ಶಾಲೆಗಳು ಮುಂದುವರಿದವು. 1882-83 ರಲ್ಲಿ ಜಿಲ್ಲೆಯಲ್ಲಿ 36 ಖಾಸಗಿ ಶಾಲೆಗಳಿದ್ದವೆಂದು ಜಿಲ್ಲಾ ಗ್ಯಾಸೆಟಿಯರ್ (1884) ಹೇಳುತ್ತದೆ. ಇವುಗಳಲ್ಲಿ 21 ಜಾಗೀರ್ದಾರರು (ಸಂಸ್ಥಾನಿಕರು) ನಡೆಸುತ್ತಿದ್ದ ಶಾಲೆಗಳು. ಸವಣೂರು ಸಂಸ್ಥಾನದಲ್ಲೇ ಆರು ಶಾಲೆಗಳಿದ್ದವೆಂದು ಹೇಳಿದೆ.

ಗಾಂವಠಿ ಶಾಲೆಗಳಲ್ಲಿ ಬರವಣಿಗೆ 'ಧೂಳಾಕ್ಷರ', ಎಂದರೆ ಬೆರಳಿನಿಂದ ಎದುರು ಹಾಸಿದ ಮಣ್ಣಿನ ಮೇಲೆ ಬರೆಯುವ ಪದ್ಧತಿ ರೂಢಿಯಲ್ಲಿತ್ತು. ಇದಕ್ಕೆ 'ಬಾರಾಖಡಿ' ಎಂಬ ಮರಾಠಿ ಶಬ್ದ ರೂಢಿಯಲ್ಲಿ ಇದೆ. ಶಾಲೆಗೆ ಹೋಗುವ ವಿದ್ಯಾರ್ಥಿ ಮಣ್ಣಿನ ಗಂಟು ಒಯ್ಯಬೇಕಿತ್ತು. (ಅದಕ್ಕೆ 'ಸಾಲೆಗೆ ಮಣ್ಣು ಹೊತ್ತಿದ್ದೆ' ಎಂಬ ಮಾತು ರೂಢಿಯಲ್ಲಿದೆ). ಅಕ್ಷರಾಭ್ಯಾಸವಾದ ಮೇಲೆ ಹಲಗೆ ಬಳಪ ಬಳಕೆಗೆ ಅವಕಾಶವಿತ್ತು. ಮುಸಲ್ಮಾನರ ಕಾಲಕ್ಕೆ ಮೊದಲು ಕಾಗದವಿರದೇ ಇದ್ದಾಗ ಓಲೆಯ ಮೇಲೆ ಕಂಟದಿಂದ ಬರೆಯುತ್ತಿದ್ದು, ಮುಂದೆ ಕಾಗದ ಬಳಕೆಗೆ ಬಂತು. ಧಾರವಾಡ ಜಿಲ್ಲೆಯಲ್ಲಿ ಕೋರೀಕಾಗದ ತಯಾರಿಸುವ ಕೇಂದ್ರಗಳು 16ನೇಯ ಶತಮಾನದಿಂದಲೂ ಇದ್ದವು.

### ಪೂರ್ವ ಪ್ರಾಥಮಿಕ ಶಿಕ್ಷಣ

ಜಿಲ್ಲೆಯ ಹಲವೆಡೆ ಕ್ರೈಸ್ತ ಮಿಷನರಿಗಳಿಂದಲೂ, ಇತರೆ ಖಾಸಗಿ ಸಂಸ್ಥೆಗಳಿಂದಲೂ ಈ ಶತಮಾನದ ಆರಂಭದ ವೇಳೆಗೆ ಕಿಂಡರ್‌ಗಾರ್ಟನ್ ಅಥವಾ ಎಲ್.ಕೆ.ಜಿ. ಹಾಗೂ ಯು.ಕೆ.ಜಿ. ಶಿಕ್ಷಣ ಪ್ರಾರಂಭವಾಗಿತ್ತು. ಇವು ಸಾಮಾನ್ಯವಾಗಿ ಆಂಗ್ಲೋ ವರ್ನ್ಯಾಕ್ಯುಲರ್ ಶಾಲೆಗಳಲ್ಲಿ ಕಂಡುಬರುತ್ತಿತ್ತು. ಪ್ರಾಥಮಿಕ ಶಾಲೆಗಳಲ್ಲೂ ಭಿನ್ನ ಇಯತ್ತೆ, ಅರ್ಧ ಭಿನ್ನ ಇಯತ್ತೆ ಎಂಬ ಆರಂಭಿಕ ವರ್ಗಗಳಿದ್ದವು. ಪ್ರಾಥಮಿಕ ಶಿಕ್ಷಣದ ಮೊದಲನೇ ಇಯತ್ತೆಗೆ ಪೂರ್ವಭಾವಿಯಾಗಿ ಮಕ್ಕಳಿಗೆ ಶಾಲೆಗೆ ಹಾಜರಾಗುವ ಅಭ್ಯಾಸ ಮಾಡಿಸುವುದೇ ಇದರ ಉದ್ದೇಶ; ಇದಲ್ಲದೆ, ಮಕ್ಕಳಿಗೆ ಕಿಂಡರ್‌ಗಾರ್ಟನ್ ತರಬೇತಿಯ ನಂತರ ಪ್ರಾಥಮಿಕ ಶಿಕ್ಷಣದಲ್ಲಿ ತೊಡಗುವುದಕ್ಕೆ ಯಾವುದೇ ಅಡೆತಡೆ ಇರುವುದಿಲ್ಲ.

ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಗೆ ಜಿಲ್ಲೆಯಲ್ಲಿ ಮೂರು ಪ್ರಶಿಕ್ಷಣ ಸಂಸ್ಥೆಗಳಿದ್ದು, ಅವುಗಳಲ್ಲಿ ಧಾರವಾಡದಲ್ಲಿರುವ ಸಂಸ್ಥೆ ಸರಕಾರಿ ಸಂಸ್ಥೆಯಾಗಿರುತ್ತದೆ. ಹುಬ್ಬಳ್ಳಿಯ ಮಹಿಳಾ ವಿದ್ಯಾಪೀಠ ಮತ್ತು ಗದುಗಿನ ಜೆ.ಎನ್. ಪ್ರಶಿಕ್ಷಣ ಸಂಸ್ಥೆ ಖಾಸಗೀ ಸಂಸ್ಥೆಗಳು. ಇದಕ್ಕೆ ಸರಕಾರದ ಅನುದಾನವಿರುವುದಿಲ್ಲ. ಈ ಮೂರು ಸಂಸ್ಥೆಗಳಲ್ಲಿ 1991-92 ನೇ ಸಾಲಿಗೆ ಒಟ್ಟು 535 (376 ಗಂಡು, 159 ಹೆಣ್ಣು) ವಿದ್ಯಾರ್ಥಿಗಳೂ, 1992-93 ನೇ ಸಾಲಿಗೆ 520 (372 ಗಂಡು, 148 ಹೆಣ್ಣು) ವಿದ್ಯಾರ್ಥಿಗಳೂ ವ್ಯಾಸಂಗ ಮಾಡುತ್ತಿದ್ದರು. ಈ ಸಂಸ್ಥೆಗಳಲ್ಲಿ 1991-92 ನೇ ಸಾಲಿಗೆ 109 ಮಂದಿ ಪರೀಕ್ಷೆಗೆ ಹಾಜರಾಗಿ 70 ಮಂದಿ (ಶೇಕಡಾ 64.22) ತೇರ್ಗಡೆಯಾದರೆ, 1992-93 ನೇ ಸಾಲಿಗೆ 131 ಮಂದಿ ಹಾಜರಾಗಿ, 106 ಮಂದಿ (80.92 ಶೇ.) ತೇರ್ಗಡೆಯಾದರು. ಮೇಲಿನ ಎರಡು ವರ್ಷಗಳಿಗೆ ಮೂರೂ ಸಂಸ್ಥೆಗಳಲ್ಲಿ ಕ್ರಮವಾಗಿ ಒಟ್ಟು 13 ಮತ್ತು 20 ಪರಿಶಿಷ್ಟ ಜಾತಿ ಹಾಗೂ ಆರು ಮತ್ತು ನಾಲ್ಕು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿದ್ದರು. ಹಾಗೆಯೇ ಮೇಲ್ಕಂಡ ವರ್ಷಗಳಿಗೆ ಕ್ರಮವಾಗಿ 25 ಮತ್ತು 24 ಮಂದಿ ಒಟ್ಟು ಸಿಬ್ಬಂದಿ ವರ್ಗದವರಿದ್ದರು.

## ಪ್ರಾಥಮಿಕ ಶಿಕ್ಷಣ

ಮುಂಬೈ ಕರ್ನಾಟಕದ ಭಾಗವಾಗಿದ್ದ ಧಾರವಾಡದಲ್ಲಿ ಮೊದಲಿಗೆ ಮರಾಠಿ ಪ್ರಾಬಲ್ಯ ಹೆಚ್ಚಾಗಿ ಇದ್ದುದರಿಂದ, ಮರಾಠಿ ಶಾಲೆಗಳ ಸಂಖ್ಯೆಯೂ ಅಧಿಕವಾಗಿತ್ತು. ವೀರಶೈವ ಮಠಗಳಲ್ಲಿ ಮಾತ್ರ ಕನ್ನಡ ಬಳಕೆಯಲ್ಲಿತ್ತು. ಇಲ್ಲಿ ಕನ್ನಡ, ಸಂಸ್ಕೃತ, ಮರಾಠಿ ಹಾಗೂ ಗಣಿತಗಳನ್ನು ಬೋಧಿಸಲಾಗುತ್ತಿತ್ತು.

'ಬಾಂಬೆ ನೇಟಿವ್ ಎಜುಕೇಶನ್ ಸೊಸೈಟಿ' ಎಂಬ ಅರೆಸರಕಾರಿ ಸಂಸ್ಥೆ 1826 ರಲ್ಲಿ ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ಒಂದೊಂದು ಮರಾಠಿ ಶಾಲೆ ಆರಂಭಿಸಿ, ಸರಕಾರ ಶಿಕ್ಷಣ ಕ್ಷೇತ್ರ ಪ್ರವೇಶ ಮಾಡಿತು. 1855 ರಲ್ಲಿ ಶಿಕ್ಷಣ ಇಲಾಖೆ ರೂಪುಗೊಂಡಿತು. ಈ ವರ್ಷ ಧಾರವಾಡದಲ್ಲಿ 12 ಕನ್ನಡ ಶಾಲೆಗಳಿದ್ದು, ಅವುಗಳಲ್ಲಿ 1341 ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. 1882 ನೇ ವರ್ಷಕ್ಕೆ ಇವುಗಳ ಸಂಖ್ಯೆ 341 ಆಗಿ, ಮಕ್ಕಳ ಸಂಖ್ಯೆ 29,711 ಕ್ಕೆ ಏರಿತು. 1842 ರಲ್ಲಿ ರೋಣದಲ್ಲಿ ಎರಡು-ಸ್ಥಳೀಯ ಶಾಲೆಗಳು (ಲೋಕಲ್ ಶಾಲೆಗಳು) ಇದ್ದುವೆಂದೂ, ಅವುಗಳಲ್ಲಿ ಒಟ್ಟು ಅರವತ್ತು ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಅವರಿಗೆ ದಶಾಜ್ಞೆಗಳು (ಟೆನ್ ಕಮಾಂಡ್‌ಮೆಂಟ್ಸ್) ಕಂಠಸ್ಥವಾಗಿದ್ದುವೆಂದೂ ಬೆಳಗಾವಿಯ ಕಲೆಕ್ಟರನಾಗಿದ್ದ ಟ್‌ನ್‌ಸೆಂಡ್ ವರದಿ ಮಾಡಿದ್ದಾನೆ.

1848 ರಲ್ಲಿ ಧಾರವಾಡದಲ್ಲಿ ಒಂದು ಇಂಗ್ಲಿಷ್ ಶಾಲೆ ಮತ್ತು 1867 ರಲ್ಲಿ ಹೆಣ್ಣುಮಕ್ಕಳ ಶಾಲೆ ಪ್ರಾರಂಭವಾದವು. 1873 ರ ವೇಳೆಗೆ ಹೆಣ್ಣುಮಕ್ಕಳ ಶಾಲೆಗಳ ಒಟ್ಟು ಸಂಖ್ಯೆ 11 ಆಗಿತ್ತು. 1881 ರ ದಶಕದಲ್ಲಿ ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ.6.19 ಆಗಿತ್ತು.

1882 ರಲ್ಲಿ ಜಿಲ್ಲೆಯ ನಾಲ್ಕು ಹಳ್ಳಿಗಳಿಗೆ ಒಂದರಂತೆ ಒಟ್ಟು 356 ಸರಕಾರಿ ಶಾಲೆಗಳಿದ್ದು, ಒಟ್ಟು ಶಿಕ್ಷಕರ ಸಂಖ್ಯೆ 960 ಆಗಿತ್ತು. ಇವಲ್ಲದೆ ಜಿಲ್ಲೆಯಲ್ಲಿ 36 ಇತರೆ ಶಾಲೆಗಳಿದ್ದು, ಇವುಗಳಲ್ಲಿ 20 ಜಹಗೀರ್ (ಸಂಸ್ಥಾನೀ) ಶಾಲೆಗಳು ಮತ್ತು ಉಳಿದ 16 ಸರಕಾರದ ಧನಸಹಾಯದಿಂದ ನಡೆಯುವ ಶಾಲೆಗಳಾಗಿದ್ದವು. ಈ 16 ಶಾಲೆಗಳಲ್ಲಿ ಎಂಟು (ಐದು ಬಾಲಕರು ಮತ್ತು ಮೂರು ಬಾಲಕಿಯರ) ಶಾಲೆಗಳು ಬಾಸೆಲ್ ಮಿಷನ್ ಆಡಳಿತದಲ್ಲಿದ್ದವು. ಇಲಾಖಾ ತಪಾಸಣೆಗೆ ಒಳಪಟ್ಟಿದ್ದ ಉಳಿದ 20 ಶಾಲೆಗಳ ಪೈಕಿ ಆರು ಶಾಲೆಗಳು ಸವಣೂರು ರಾಜ್ಯದಲ್ಲಿ, ಹತ್ತು ಶಾಲೆಗಳು ಮೀರಜ್‌ನ ಲಕ್ಷ್ಮೇಶ್ವರ ವಿಭಾಗದಲ್ಲಿ ಹಾಗೂ ಉಳಿದ ಶಾಲೆಗಳು ಮೀರಜ್ ರಾಜ್ಯದಲ್ಲಿ ಇದ್ದವು. ನಿಮ್ನ ವರ್ಗದವರಿಗಾಗಿ 1882 ರಲ್ಲಿ ಧಾರವಾಡದಲ್ಲಿ 105 ಮಕ್ಕಳಿದ್ದ ಮತ್ತು ಹುಬ್ಬಳ್ಳಿಯಲ್ಲಿ 50 ಮಕ್ಕಳಿದ್ದ ಎರಡು ಶಾಲೆಗಳು ಪ್ರಾರಂಭವಾದವು.

ಧಾರವಾಡದಲ್ಲಿ ಮೊಟ್ಟಮೊದಲ ಬಾಲಕಿಯರ ಶಾಲೆ 1867 ರಲ್ಲಿ ಪ್ರಾರಂಭವಾಯಿತು. ಮುಂದಿನ ಆರು ವರ್ಷಗಳಲ್ಲಿ ಬಾಲಕಿಯರ ಶಾಲೆಗಳ ಸಂಖ್ಯೆ 11 ಆಗಿ, ಒಟ್ಟು ವಿದ್ಯಾರ್ಥಿನಿಯರ ಸಂಖ್ಯೆ 429 ಆಯಿತು. 1880 ರಲ್ಲಿ ಶಾಲೆಗಳ ಸಂಖ್ಯೆ 20 ಹಾಗೂ ವಿದ್ಯಾರ್ಥಿನಿಯರ ಸಂಖ್ಯೆ 979 ಆಗಿ, 1883 ರಲ್ಲಿ ಒಟ್ಟು ಬಾಲಕಿಯರ ಶಾಲೆಗಳು 24 ಆದವು ಹಾಗೂ ಇವುಗಳಲ್ಲಿ 17 ಸರಕಾರಿ, ಮೂರು ಮಿಷನ್ ಮತ್ತು ನಾಲ್ಕು ಎಸ್ಟೇಟ್ ಶಾಲೆಗಳಾಗಿದ್ದವು.

**ಗ್ರಾಮೀಣ ಶಾಲೆಗಳು** : ವ್ಯವಸ್ಥಿತ ಶಿಕ್ಷಣ ನೀತಿ ಜಾರಿಗೆ ಬರುವ ಮೊದಲು ಅಸ್ತಿತ್ವದಲ್ಲಿದ್ದ ಈ ಶಾಲೆಗಳು ಸರಕಾರಿ ಆಡಳಿತಕ್ಕೆ ಒಳಪಟ್ಟಿರಲಿಲ್ಲ. ಇವುಗಳಲ್ಲಿ ಕೈ ಬರಹದ ಕಾಗದ ಓದುವುದು, ಕರಡು ಬರೆಯುವುದು, ಸರಳಬಡ್ಡಿ, ಅಂಕಗಣಿತ ಹಾಗೂ ಬಾಯಿ ಲೆಕ್ಕಗಳನ್ನು ಮಾತ್ರ ಕಲಿಸಲಾಗುತ್ತಿತ್ತು. ವಿದ್ಯಾರ್ಥಿಗಳಿಂದ ವಸೂಲು ಮಾಡುತ್ತಿದ್ದ ಎರಡರಿಂದ ನಾಲ್ಕು ಆಣೆಗಳ ಶುಲ್ಕ ಈ ಶಾಲೆಗಳ ಮಾಸ್ತರರ ಆದಾಯವಾಗಿತ್ತು. ಇದಲ್ಲದೆ ಹಲಗೀ ಪೂಜೆಯ ದಿನ (ಚತುರ್ದಶಿ) ಮಾಸ್ತರರಿಗೆ ಕಾಳುಗಳನ್ನೂ ಒಂದು ದುಡ್ಡನ್ನೂ ನೀಡಲಾಗುತ್ತಿತ್ತು. ಮಾಸ್ತರರು ವಿದ್ಯಾರ್ಥಿಗಳ ಮನೆಯಲ್ಲಿ ವಾರಕ್ಕೊಮ್ಮೆ ಊಟ ಮಾಡುತ್ತಿದ್ದರು. ಈ ಶಾಲೆಗಳಲ್ಲಿ 1882 ರ ವೇಳೆಗೆ ಸುಮಾರು 150 ನಿಮ್ನವರ್ಗದ ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಈ ಗಾಂವಠಿ ಶಾಲೆಗಳಿದ್ದ ಹಳ್ಳಿಗಳಲ್ಲಿ ಸರಕಾರಿ ಶಾಲೆಗಳು ಪ್ರಾರಂಭವಾದಾಗ ಇವುಗಳ ಸಂಖ್ಯೆ ಕ್ರಮೇಣ ಕಡಿಮೆಯಾಯಿತು.

ಧಾರವಾಡದಲ್ಲಿ 1848 ರಲ್ಲಿ ಸರಕಾರೀ ಇಂಗ್ಲಿಷ್ ಶಾಲೆ ಪ್ರಾರಂಭವಾಗಿ ಜಿಲ್ಲೆಯಲ್ಲಿ ಇಂಗ್ಲಿಷ್ ಶಿಕ್ಷಣಕ್ಕೆ ನಾಂದಿ ಹಾಡಿತು. ಧಾರವಾಡ ವಿಭಾಗದ ಅಸಿಸ್ಟಂಟ್ ಕಲೆಕ್ಟರನಾಗಿದ್ದ ವಾಲ್ಟರ್ ಎಲಿಯಟ್ ಮರಾಠಿ ಶಾಲೆಗಳನ್ನು ಇಲ್ಲಿ ಆರಂಭಿಸಿದ್ದು (1826) ಸೂಕ್ತವಲ್ಲವೆಂದು ವಾದಿಸಿ, 1831 ರಲ್ಲಿ ಧಾರವಾಡದಲ್ಲಿ ಒಂದು ಕನ್ನಡ ಶಾಲೆಯನ್ನು ಪ್ರಾರಂಭಿಸಿ ಮೂರು ವರ್ಷಗಳ ಕಾಲ ಒಬ್ಬನೇ ಅದರ ವೆಚ್ಚವನ್ನು ಭರಿಸಿ, ನಡೆಸಿದನು. ಕನ್ನಡ ಶಿಕ್ಷಣ ಹಾಗೂ ಪಠ್ಯಪುಸ್ತಕಗಳ ರಚನೆ ಕುರಿತಂತೆ ಎಲಿಯಟ್‌ನ ಸೂಚನೆಗಳು ಸ್ವೀಕೃತವಾಗಿ, ಅವನ ನೇತೃತ್ವದಲ್ಲಿಯೇ 'ಈಸೋಪನ ನೀತಿ ಕಥೆಗಳು' 'ಗಣಿತ ಪುಸ್ತಕ ಪೂರ್ಣಾಂಕ' ಮತ್ತು 'ಶಾಲಾ ಪದ್ಧತಿ' ಎಂಬ ಮೂರು ಪುಸ್ತಕಗಳು ಬಳ್ಳಾರಿಯ ಮಿಷನ್ ಪ್ರೆಸ್‌ನಲ್ಲಿ ಮುದ್ರಿತವಾಗಿ ಮುಂಬಯಿ ರಾಜ್ಯದ ಮೊಟ್ಟಮೊದಲ ಕನ್ನಡ ಪುಸ್ತಕಗಳಾದವು. 1882ರ ಮುಂಬೈ ಪ್ರಾಂತ್ಯದ ಆಡಳಿತ ವರದಿಯ ಪ್ರಕಾರ ದಕ್ಷಿಣದ ಪ್ರಾಂತ್ಯಗಳ ಪೈಕಿ ಧಾರವಾಡ ಜಿಲ್ಲೆ ಶೈಕ್ಷಣಿಕವಾಗಿ ಮುಂದುವರೆದಿತ್ತು. ಈ ವರ್ಷ ಧಾರವಾಡ, ಲಕ್ಷ್ಮೇಶ್ವರ, ಸವಣೂರುಗಳಲ್ಲಿ 150 ವಿದ್ಯಾರ್ಥಿನಿಯರ ಮೂರು ಹೆಣ್ಣುಮಕ್ಕಳ ಶಾಲೆಗಳಿದ್ದು, ಇಡೀ ಪ್ರಾಂತ್ಯಕ್ಕೆ ಇವು ಉತ್ತಮ ಶಾಲೆಗಳಾಗಿದ್ದವು. 'ಸದರ್ನ್ ಮರಾಠಾ' ಪ್ರದೇಶದ ಜನರ ಭಾಷೆ ಕನ್ನಡವಾದುದರಿಂದ ಕನ್ನಡದಲ್ಲಿಯೇ ಆಡಳಿತ ಮತ್ತು ಶಿಕ್ಷಣ ಕಾರ್ಯ ನಡೆಯಬೇಕೆಂಬ ಮಹತ್ವಪೂರ್ಣ ನಿರ್ಣಯವನ್ನು ಮುಂಬಯಿ ಸರಕಾರ 1835 ರಲ್ಲಿ ಕೈಗೊಂಡಿತು. ಇದರಿಂದ ಸರಕಾರಿ ಕನ್ನಡ ಶಾಲೆಗಳ ಸಂಖ್ಯೆ ಬೆಳೆಯಿತು.

ಮುಂಬೈ ಶಿಕ್ಷಣ ಇಲಾಖೆ 1840 ರಿಂದ 1855 ರ ವರೆಗೆ 'ಬೋರ್ಡ್ ಆಫ್ ಎಜುಕೇಷನ್' ಆಡಳಿತದಲ್ಲಿತ್ತು. ಆಡಳಿತಾನುಕೂಲಕ್ಕಾಗಿ ಇಡೀ ಪ್ರಾಂತ್ಯವನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಕರ್ನಾಟಕದ ನಾಲ್ಕು ಜಿಲ್ಲೆಗಳನ್ನೊಳಗೊಂಡ ಸದರ್ನ್ ವಿಭಾಗಕ್ಕೆ 1864 ರಲ್ಲಿ ಆಲನ್ ವಿಲಿಯಂ ರಸೆಲ್ ಇನ್ಸ್‌ಪೆಕ್ಟರನಾಗಿ ನೇಮಕಗೊಂಡು, ಪ್ರಾದೇಶಿಕ ಭಾಷೆಯಾದ ಕನ್ನಡದ ಸ್ಥಾನ ಕಾಪಾಡಲು ಆಸ್ಥೆ ವಹಿಸಿದನು. ಕನ್ನಡ ಬಲ್ಲ ಶಿಕ್ಷಕರ ನೇಮಕಾತಿ ಹಾಗೂ ಕನ್ನಡ ಪಠ್ಯಗಳ ಪೂರೈಕೆಯ ಬಗ್ಗೆ ವಿಶೇಷ ಆಸಕ್ತಿ ವಹಿಸಿದನು. ಸವಣೂರಿನ ಪ್ರಾಥಮಿಕ ಶಾಲೆಯಲ್ಲಿ 1912 ರ ವೇಳೆಗೆ ಐದರವರೆಗೆ ಮಾತ್ರ ಇಯತ್ತೆಗಳಿದ್ದವು. ಮುಂದಿನ ಶಿಕ್ಷಣಕ್ಕೆ ಮಕ್ಕಳು ಹುಬ್ಬಳ್ಳಿ, ಧಾರವಾಡಗಳಿಗೆ ಹೋಗಬೇಕಿತ್ತು. ಈ ತೊಂದರೆ ತಪ್ಪಿಸಲು ನವಾಬರು 1917 ರಲ್ಲಿ ಈ ಶಾಲೆಯನ್ನು ಪ್ರೌಢಶಾಲೆಯಾಗಿ ಪರಿವರ್ತಿಸಿ, 'ಮಜೀದ್ ಹೈಸ್ಕೂಲ್' ಎಂದು ಹೆಸರಿಟ್ಟರು. ಇಲ್ಲಿ 1919ರಲ್ಲಿ ಮೊದಲ ಮೆಟ್ರಿಕ್ ಪರೀಕ್ಷೆಯಾಯಿತು. ರಸೆಲ್‌ನ ಮಾರ್ಗದರ್ಶನದಲ್ಲಿ ವೆಂಕಟರಂಗೋ ಕಟ್ಟಿ ಹಾಗೂ ಮಡಿವಾಳೇಶ್ವರ ತುರಮರಿಯವರು ಕನ್ನಡ ಪಠ್ಯಪುಸ್ತಕಗಳನ್ನು ತಯಾರಿಸಿದರು.

**ರಾಷ್ಟ್ರೀಯ ಶಾಲೆಗಳು** : ವಂಗಭಂಗ ಚಳುವಳಿಯ ಕಾಲಕ್ಕೆ ಧಾರವಾಡದಲ್ಲಿ ಆಲೂರು ವೆಂಕಟರಾಯರ ಯತ್ನದಿಂದ ರಾಷ್ಟ್ರೀಯ ಶಾಲೆ ಆರಂಭವಾಯಿತು. ಹುಬ್ಬಳ್ಳಿಯಲ್ಲಿ ಬುರ್ಸೆ ಎಂಬವರು ಇದೇ ರೀತಿ ರಾಷ್ಟ್ರೀಯ ಶಾಲೆ ಆರಂಭಿಸಿದರು. ನವಲಗುಂದ, ಅಗಡಿ, ನರಗುಂದಗಳಲ್ಲೂ ಇಂಥ ಶಾಲೆಗಳಿದ್ದವು. ಪರ್ನಿಶಿಯಸ್ ಎಜುಕೇಶನ್ ಎಂದು 1910 ರಲ್ಲಿ ಸರಕಾರ ಅದನ್ನು ಪ್ರತಿಬಂಧಿಸಲು, ಅವು ಮುಚ್ಚಿದವು.

ಮುಂದೆ ಅಸಹಕಾರ ಪರ್ವದಲ್ಲಿ ಧಾರವಾಡ, ಗದಗ, ಹಾವೇರಿ, ಮಿಶ್ರಿಕೋಟಿ ಮುಂತಾದಲ್ಲಿ ಇಂಥ ಶಾಲೆಗಳು ಮತ್ತೆ ಹುಟ್ಟಿದವು. ಗದುಗಿನಲ್ಲಿ ಮೊರಬ್ ಎಂಬವರ ಮನೆಯಲ್ಲಿಯೇ ಇಂತಹ ಒಂದು ಶಾಲೆ ಪ್ರಾರಂಭವಾಯಿತು. ನಂತರದಲ್ಲಿ ಇಲ್ಲಿ ಹೈಸ್ಕೂಲು ಸಹ ಪ್ರಾರಂಭವಾಯಿತು. ಇಲ್ಲಿ ಡಂಬಳ ವೆಂಕಟರಾವ್, ಡಂಬಳ ನಾರಾಯಣರಾವ್, ಎಸ್.ವಿ. ಮಳಗಿ ಮುಂತಾದವರು ಶಿಕ್ಷಕರಾಗಿದ್ದರು. ಈ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಕನ್ನಡ ಜೈಮಿನಿ ಭಾರತ, ಕುಮಾರವ್ಯಾಸಭಾರತ, ಗಿರಿಜಾಕಲ್ಯಾಣ, ಸೋಮೇಶ್ವರ

ಶತಕ, ರಾಜಶೇಖರ ವಿಲಾಸ ಇವೆಲ್ಲ ಮುಖೋದ್ಗತವಾಗಿದ್ದವು. ಅಲ್ಲದೆ ಇಂಗ್ಲಿಷ್ ಮತ್ತು ಸಂಸ್ಕೃತದ ಪ್ರಮುಖ ಕೃತಿಗಳ ಪರಿಚಯವೂ ಇದ್ದಿತು. ಈ ಶಾಲೆಗಳು ಧಾರವಾಡ ಕರ್ನಾಟಕ ರಾಷ್ಟ್ರೀಯ ವಿದ್ಯಾಪೀಠದಿಂದ ನಡೆಯುತ್ತಿದ್ದವು. ಇವುಗಳ ಪರೀಕ್ಷೆಯನ್ನು ಶಿಕ್ಷಣಾಧಿಕಾರಿಗಳಾಗಿದ್ದ ವಿನಾಯಕ ಬಾಬಾ ಜೋಷಿ ನಡೆಸುತ್ತಿದ್ದರು. ಇದೇ ವೇಳೆಗೆ ಗದಗ ಬೆಟಗೇರಿಯಲ್ಲಿ ಐದು ರಾಷ್ಟ್ರೀಯ ಪ್ರಾಥಮಿಕ ಶಾಲೆಗಳು ಪ್ರಾರಂಭವಾದವು. ಮುಷ್ಟಿಫಂಡ್ ಮೂಲಕ ನಡೆಯುತ್ತಿದ್ದ ಈ ಶಾಲೆಗಳ ಧಾನ್ಯ ಸಂಗ್ರಹಣಾ ಕಾರ್ಯವನ್ನು ವೈದ್ಯ ನಾರಾಯಣರಾವ್, ಉಮಚಗಿ ಗೋಪಾಳರಾವ್ ಮುಂತಾದವರು ನಡೆಸುತ್ತಿದ್ದರು. ಧಾರವಾಡದಲ್ಲಿ ಆರಂಭವಾದ ಪ್ರೌಢಶಾಲೆಯಲ್ಲಿ ಬೇಂದ್ರೆ, ದಿವಾಕರ, ಶಂ.ಬಾ.ಜೋಷಿ ಮುಂತಾದವರು ಅಧ್ಯಾಪಕರಾಗಿದ್ದರು.

ಮುಂಬೈ ಸರಕಾರದ ವಿದ್ಯಾಖಾತೆಯಲ್ಲಿ ಅತ್ಯುನ್ನತ ಸ್ಥಾನ ಗಳಿಸಿದ ಕನ್ನಡಿಗ ಡೆಪ್ಯುಟಿ ಶಿಕ್ಷಣಾಧಿಕಾರಿ ಚೆನ್ನಬಸಪ್ಪ, ಪ್ರಾಥಮಿಕ ಶಿಕ್ಷಣ ಮತ್ತು ಕನ್ನಡದ ಏಳ್ಗೆಗಾಗಿ ಶ್ರಮವಹಿಸಿದರು. ಇವರ ಕಾಲದಲ್ಲಿ ಕನ್ನಡ ಶಾಲೆಗಳ ಸಂಖ್ಯೆಯಲ್ಲಿ ಸಾಕಷ್ಟು ಹೆಚ್ಚಳವಾಯಿತು. ಜನಸಾಮಾನ್ಯರು ಕನ್ನಡವನ್ನೇ ಬಳಸಬೇಕೆಂದು ಇವರು ತಾಕೀತು ಮಾಡಿದರಲ್ಲದೆ, ಶಿಕ್ಷಕರು ಶಾಲೆಗಳಲ್ಲಿ ಕನ್ನಡದ ಅಂಕಿ ಮತ್ತು ಮಗ್ಗಿಯನ್ನು ಮಕ್ಕಳಿಗೆ ಕಲಿಸುವಂತೆ ಆದೇಶವಿತ್ತರು. ಕನ್ನಡ ಬಳಕೆಯನ್ನು ಆಚರಣೆಗೆ ತರದ ಶಿಕ್ಷಕರಿಗೆ ಒಂದೆರಡು ಆಣೆಗಳ ದಂಡವನ್ನೂ ವಿಧಿಸಿದ್ದರು. ಧಾರವಾಡದಲ್ಲಿ ಆರಂಭವಾದ ನಾರ್ಮಲ್ (ಶಿಕ್ಷಕರ) ತರಬೇತಿ ಶಾಲೆಗೆ (1856) ಇವರು ಪ್ರಿನ್ಸಿಪಾಲ್ ಆಗಿ, ಮುಂದೆ ಶಿಕ್ಷಣಾಧಿಕಾರಿಗಳೂ ಆದರು. ನಾರ್ಮಲ್ ಶಾಲೆ ಮುಂದೆ ಕಾಲೇಜಾಗಿ ಶೈಕ್ಷಣಿಕ ಪ್ರಗತಿಗೆ ಬಹಳ ಸಾಧಕವಾಯಿತು. ಎಲಿಯಟ್ ಅವರು ಆರಂಭಿಸಿದ ಕಾರ್ಯ ತೀವ್ರಗತಿಯಿಂದ ಮುಂದುವರಿಯಲು ಇವರು ಮುಖ್ಯ ಕಾರಣಕರ್ತರು.

ರೋಣ ತಾಲೂಕಿನ ಜಕ್ಕಲಿಯಲ್ಲಿ 1867 ರಲ್ಲಿ 25 ಗಂಡು ಮಕ್ಕಳ ಸರಕಾರಿ ಕನ್ನಡ ಶಾಲೆ ಪ್ರಾರಂಭವಾಯಿತು. 1882 ರಲ್ಲಿ ಮಕ್ಕಳ ಸಂಖ್ಯೆ 100 ಕ್ಕೆ ಏರಿ, 1893 ರಲ್ಲಿ ಇಲ್ಲಿಗೆ ಹೆಣ್ಣು ಮಕ್ಕಳ ಸೇರ್ಪಡೆಯಾಯಿತು. 1911 ರಲ್ಲಿ ಈ ಶಾಲೆಯಲ್ಲಿ 143 ಗಂಡು ಹಾಗೂ 13 ಹೆಣ್ಣು ಮಕ್ಕಳಿದ್ದು, ಇವರ ಪೈಕಿ ಮೂರು ಗಂಡು ಮಕ್ಕಳು ಮುಲ್ಕಿ ಪರೀಕ್ಷೆಗೆ ಹಾಜರಾಗಿ ಅದರಲ್ಲಿ ಇಬ್ಬರು ಉತ್ತೀರ್ಣರಾದರು. (ಏಳನೇಯ ತರಗತಿಯ ಕೊನೆಗೆ ಮುಲ್ಕಿಪರೀಕ್ಷೆ ಎಂಬ ಸಾರ್ವತ್ರಿಕ ಪರೀಕ್ಷೆ ಆಗ ಇತ್ತು). ಗದಗ-ಬೆಟಗೇರಿಯ ಮುನಿಸಿಪಲ್ ಸ್ಕೂಲ್ ಬೋರ್ಡ್ 1925 ರಲ್ಲಿ ಸ್ಥಾಪನೆಯಾಯಿತು.

**ಆಡಳಿತ :** ರಾಜ್ಯದ ಏಕೀಕರಣ ಕಾಲಕ್ಕೆ ಜಿಲ್ಲೆಯ ಶೈಕ್ಷಣಿಕ ಆಡಳಿತ ಮುಂಬೈ ಡಿ.ಇ.ಓ. ಅವರಿಂದ ನಡೆಸಲ್ಪಡುತ್ತಿತ್ತು. ಪ್ರಾಥಮಿಕ ಶಿಕ್ಷಣದ ಮೇಲ್ವಿಚಾರಣೆ, ಇಲಾಖೆಯ ಸರಕಾರಿ ಪ್ರಾಥಮಿಕ ಶಾಲೆಗಳ ಹಾಗೂ ತರಬೇತಿ ಸಂಸ್ಥೆಗಳ ಆಡಳಿತ, ಇಲಾಖೆಯ ಹತೋಟಿಯಲ್ಲಿದ್ದ ಇತರೆ ಪ್ರೌಢಶಾಲೆಗಳ, ಕೃಷಿ, ವಾಣಿಜ್ಯ, ತಾಂತ್ರಿಕ ಶಾಲೆಗಳ ಆಡಳಿತ ಇವೆಲ್ಲವನ್ನೂ ಡಿ.ಇ.ಓ. ನಿರ್ವಹಿಸಬೇಕಿತ್ತು. ಇವರ ಸಹಾಯಕ್ಕಾಗಿ ಹಲವಾರು ಇನ್ಸ್‌ಪೆಕ್ಟರುಗಳಿದ್ದು, ಅವರು ದೈಹಿಕ ಶಿಕ್ಷಣ, ದೃಶ್ಯ ಶಿಕ್ಷಣ, (ಈಗಿನ ವಾಕ್-ಶ್ರವಣ ಶಿಕ್ಷಣ) ವಾಣಿಜ್ಯ ಶಿಕ್ಷಣಗಳ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರು.

ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಧಾರವಾಡದ ಡೆಪ್ಯುಟಿ ಎಜುಕೇಷನ್ ಆಫೀಸರ್ ಸರಕಾರದ ಮುಖ್ಯ ತನಿಖಾಧಿಕಾರಿಯಾಗಿದ್ದರು. ಇಂಥ ಹುದ್ದೆಯಲ್ಲಿದ್ದು ಬಿರುಸಾಗಿ ದುಡಿದವರು ಚೆನ್ನಬಸಪ್ಪನವರು. ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಇವರೇ ಮಾನ್ಯತೆ ನೀಡುತ್ತಿದ್ದರು. 1900-01 ರಲ್ಲಿ ಜಿಲ್ಲೆಯಲ್ಲಿದ್ದ ಪ್ರಾಥಮಿಕ ಶಾಲೆಗಳ ಸಂಖ್ಯೆ 549. ಇವುಗಳಲ್ಲಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 23,330 ಆಗಿತ್ತು. ಅವರಲ್ಲಿ 1826 ಹೆಣ್ಣುಮಕ್ಕಳಿದ್ದರು. 1920-21 ರಲ್ಲಿ ಶಾಲೆಗಳ ಸಂಖ್ಯೆ 764 ಆಗಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 44,005 ಆಯಿತು. ಹೆಣ್ಣು ಮಕ್ಕಳ ಸಂಖ್ಯೆ 12,303 ಆಯಿತು. ಜಿಲ್ಲೆಯಲ್ಲಿ 1952-53 ರಲ್ಲಿ 1 ರಿಂದ 7 ರವರೆಗೆ ತರಗತಿಗಳನ್ನು ಹೊಂದಿದ್ದ ಒಟ್ಟು 1,554 ಪ್ರಾಥಮಿಕ ಶಾಲೆಗಳಿದ್ದವು. ಇವುಗಳಲ್ಲಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ 151 ಶಾಲೆಗಳಿದ್ದವು. ಒಂದರಿಂದ ನಾಲ್ಕನೇ ತರಗತಿಗಳಲ್ಲಿ 82,533 ಗಂಡು ಮತ್ತು 50,615 ಹೆಣ್ಣುಮಕ್ಕಳು ಹಾಗೂ ಐದರಿಂದ ಏಳನೇ ತರಗತಿಗಳಲ್ಲಿ 19,697 ಗಂಡು ಮತ್ತು 3,536 ಹೆಣ್ಣು ಮಕ್ಕಳು - ಹೀಗೆ ಒಟ್ಟು 1,56,381 ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಇವುಗಳಲ್ಲಿನ ಒಟ್ಟು ಶಿಕ್ಷಕರ ಸಂಖ್ಯೆ 4,227 ಆಗಿದ್ದು, ಇವರಲ್ಲಿ 593 ಮಂದಿ ಮಹಿಳೆಯರಾಗಿದ್ದರು. ಒಟ್ಟು ಶಿಕ್ಷಕ ವೃಂದದಲ್ಲಿ 1,979 ಗಂಡಸರು ಮತ್ತು 396 ಹೆಂಗಸರು ಮಾತ್ರ ಶಿಕ್ಷಕ ತರಬೇತಿ ಹೊಂದಿದ್ದರು. ಈ ವರ್ಷ ಜಿಲ್ಲೆಯಲ್ಲಿ ಒಟ್ಟು 10 ತರಬೇತಿ ಕೇಂದ್ರಗಳಿದ್ದು ಇವುಗಳಲ್ಲಿ ಏಳು (ಒಂದು ಸರಕಾರಿ ಮತ್ತು ಆರು ಖಾಸಗಿ) ಕೇಂದ್ರಗಳು ಗಂಡಸರಿಗೂ, ಮೂರು (ಒಂದು ಸರಕಾರಿ ಮತ್ತು ಎರಡು ಖಾಸಗಿ) ಕೇಂದ್ರಗಳು ಹೆಂಗಸರಿಗೂ ಇದ್ದು, ಒಟ್ಟು 618 (371 ಗಂಡಸರು, 247 ಹೆಂಗಸರು) ಇವುಗಳಲ್ಲಿ ತರಬೇತಿ ಪಡೆದರು.

ಈ ವರ್ಷ ಧಾರವಾಡ, ಗದಗ ಮತ್ತು ಹುಬ್ಬಳ್ಳಿ ಮುನಿಸಿಪಾಲಿಟಿಗಳ ಹತೋಟಿಯಲ್ಲಿ ಒಟ್ಟು 107 ಪ್ರಾಥಮಿಕ ಶಾಲೆಗಳಿದ್ದವು. ಇವಲ್ಲದೆ ಮುನಿಸಿಪಾಲಿಟಿ ಸರಹದ್ದಿನಲ್ಲಿ 28 ಖಾಸಗಿ ಶಾಲೆಗಳದ್ದವು. ಈ ಎರಡು ರೀತಿಯ ಶಾಲೆಗಳಲ್ಲಿ ಕ್ರಮವಾಗಿ 25,475 ಮತ್ತು 5,353 ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಮುಂಬೈ ಜಿಲ್ಲಾ ಲೋಕಲ್ ಬೋರ್ಡ್ ಕಾನೂನಿನಂತೆ (1923) ಜಿಲ್ಲಾ ಸ್ಕೂಲ್ ಬೋರ್ಡ್‌ಗಳೂ ಚುನಾಯಿತ ಸದಸ್ಯರನ್ನು ಒಳಗೊಂಡು ಪ್ರಾಥಮಿಕ ಶಿಕ್ಷಣದ ಜವಾಬ್ದಾರಿ ವಹಿಸಿಕೊಂಡವು.

ಧಾರವಾಡದ ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್ ಬ್ಯಾಡಗಿ, ಹಾವೇರಿ ಮತ್ತು ರಾಣೆಬೆನ್ನೂರು ಮುನಿಸಿಪಾಲಿಟಿಗಳಲ್ಲಿ 1943 ನೇ ಜೂನ್ ತಿಂಗಳಲ್ಲಿ ಕಡ್ಡಾಯ ಶಿಕ್ಷಣವನ್ನು 6ರಿಂದ 11 ವರ್ಷದ ಮಕ್ಕಳಿಗೆ ಜಾರಿಗೆ ತಂದಿತು. ಈ ವರ್ಷ ಮೇಲಿನ ಮುನಿಸಿಪಾಲಿಟಿಗಳಲ್ಲಿ ಶಾಲೆಗೆ ದಾಖಲಾಗಬೇಕಾದ ವಯಸ್ಸಿನ ಮಕ್ಕಳ ಸಂಖ್ಯೆ 23,738 (13,143 ಗಂಡು, 10,595 ಹೆಣ್ಣು) ಇದ್ದರೂ, ಇವರಲ್ಲಿ ಒಟ್ಟು 18,653 ಮಂದಿ ಮಾತ್ರ ಶಾಲೆಗಳಲ್ಲಿ ದಾಖಲಾಗಿದ್ದರು.

ಪ್ರಾಥಮಿಕ ಶಿಕ್ಷಣ ಸುಧಾರಣೆಗೆ ಮುಂಬೈ ರಾಜ್ಯದ ಡಿ.ಪಿ.ಐ. ಆಗಿದ್ದ ಡಿ.ಸಿ.ಪಾವಟೆಯವರು ಮಹತ್ವದ ಕಾಣಿಕೆ ನೀಡಿದರು. ಶಿಕ್ಷಕರ ಆಯ್ಕೆಗೆ ಒಂದು ಆಯ್ಕೆ ಸಮಿತಿ ರಚನೆ, ಅವರ ಅರ್ಹತೆ ಹೆಚ್ಚಿಸಿಕೊಳ್ಳಲು ಅವಕಾಶಗಳ ಕಲ್ಪನೆ, ಸಂಬಳ ಹೆಚ್ಚಳ, ಉತ್ತಮ ಪಠ್ಯಪುಸ್ತಕಗಳ ಆಯ್ಕೆ, ವಿದ್ಯಾರ್ಥಿಗಳಲ್ಲಿ ವಿದ್ಯಾಭಿರುಚಿ ಬೆಳೆಸಿಕೊಳ್ಳಲು ಉಚಿತ ಊಟ, ಪುಸ್ತಕ ಮತ್ತು ಬಟ್ಟೆ ವಿತರಣೆ, ಮಾಧ್ಯಮಿಕ ಶಾಲೆಗಳಲ್ಲಿ ರದ್ದುಗೊಳಿಸಿದ್ದ ಇಂಗ್ಲಿಷ್ ಅಭ್ಯಾಸದ ಪುನರಾರಂಭ - ಇವೇ ಮುಂತಾದ ನಿರ್ಧಾರಗಳನ್ನು ಕೈಗೊಂಡರು.

ನಿರ್ದಿಷ್ಟ ಶೈಕ್ಷಣಿಕ ಪ್ರಗತಿ ಸಾಧಿಸಲು ಹಂತಹಂತವಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಜಾರಿಗೆ ಮುಂಬೈ ಸರ್ಕಾರ 1947 ರಲ್ಲಿ ಕಡ್ಡಾಯ ಶಿಕ್ಷಣ ನೀತಿ ಜಾರಿಗೆ ತಂದಿತು. ಪ್ರತೀ ಮಗುವಿಗೆ ಕನಿಷ್ಠ ಏಳು ವರ್ಷಗಳ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ನೀಡುವುದೇ ಇದರ ಉದ್ದೇಶವಾಗಿತ್ತು. ಈ ಕೆಲಸವನ್ನು ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್‌ಗಳಿಗೆ ಮತ್ತು ಅಧಿಕೃತ ಮುನಿಸಿಪಾಲಿಟಿಗಳಿಗೆ ವಹಿಸಲಾಯಿತು. ಆಗ ಧಾರವಾಡ, ಹುಬ್ಬಳ್ಳಿ, ಗದಗ್-ಬೆಟಗೇರಿ ಮುನಿಸಿಪಾಲಿಟಿಗಳು ಅಧಿಕೃತ ಮುನಿಸಿಪಾಲಿಟಿಗಳಾಗಿದ್ದವು.

ಜಿಲ್ಲೆಯಲ್ಲಿ 1958 ರಲ್ಲಿ ಒಂದರಿಂದ ಏಳನೇ ತರಗತಿಯುಳ್ಳ ಒಟ್ಟು 1,554 ಪ್ರಾಥಮಿಕ ಶಾಲೆಗಳಿದ್ದವು. ಇವುಗಳಲ್ಲಿ 151 ಹೆಣ್ಣು ಮಕ್ಕಳ ಶಾಲೆಗಳಾಗಿದ್ದವು. ಜಿಲ್ಲಾ ಶಾಲಾ ಮಂಡಳಿ ಶಾಲೆಗಳು 697, ಅನುದಾನಿತ ಶಾಲೆಗಳು ನಾಲ್ಕು, ಮುನಿಸಿಪಲ್ ಶಾಲೆಗಳು 149, ಶಾಲಾ ಮಂಡಳಿಗಳಿಂದ ಅನುದಾನ ಪಡೆದ ಶಾಲೆಗಳು 676, ಮುನಿಸಿಪಾಲಿಟಿಯಿಂದ ಅನುದಾನ ಪಡೆದ ಶಾಲೆಗಳು 27, ಹಾಗೂ ಅನುದಾನ ರಹಿತ ಶಾಲೆ ಒಂದು - ಹೀಗೆ ಹಂಚಿದ್ದವು. ಮೇಲ್ಕಂಡ ಒಟ್ಟು 1,554 ಶಾಲೆಗಳಲ್ಲಿ ಭಾಷಾವಾರು ಹಂಚಿಕೆ ಈ ರೀತಿ ಇದ್ದಿತು: ಕನ್ನಡ ಶಾಲೆಗಳು 1,359 (711 ಸಾರ್ವಜನಿಕ, 648 ಖಾಸಗಿ); ಉರ್ದು ಶಾಲೆಗಳು 173 (127 ಸಾರ್ವಜನಿಕ, 46 ಖಾಸಗಿ); ಮರಾಠಿ ಶಾಲೆಗಳು 12 (ಒಂಬತ್ತು ಸಾರ್ವಜನಿಕ, ಮೂರು ಖಾಸಗಿ); ಇಂಗ್ಲಿಷ್ ಶಾಲೆಗಳು ಮೂರು (ಖಾಸಗಿ); ತೆಲುಗು ಶಾಲೆಗಳು ಎರಡು (ಖಾಸಗಿ); ತಮಿಳು ಶಾಲೆಗಳು ಮೂರು (ಒಂದು ಸಾರ್ವಜನಿಕ, ಎರಡು ಖಾಸಗಿ) ಹಾಗೂ ಗುಜರಾತಿ ಶಾಲೆಗಳು ಎರಡು (ಖಾಸಗಿ).

**ಟ್ರೈನಿಂಗ್ ಕಾಲೇಜು: ಧಾರವಾಡ**

ಮರಾಠೀ ಪ್ರಭಾವಕ್ಕೆ ಒಳಗಾಗಿದ್ದ ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲೆಗಳ ಅವಶ್ಯಕತೆ ಹೆಚ್ಚಾಗಿತ್ತು. ಕನ್ನಡ ಶಾಲೆಗಳಲ್ಲಿ ಪಾಠ ಹೇಳಲು ಶಿಕ್ಷಕರನ್ನು ತರಬೇತಿಗೊಳಿಸುವುದಕ್ಕಾಗಿ ಈ ಸಂಸ್ಥೆ 1856 ರಲ್ಲಿ 'ನಾರ್ಮಲ್ ಸ್ಕೂಲ್' ಎಂಬ ಹೆಸರಿನಲ್ಲಿ ಪ್ರಾರಂಭವಾಯಿತು. ಇದರ ಪ್ರಥಮ ಮುಖ್ಯಸ್ಥರಾಗಿ ಡೆಪ್ಯುಟಿ ಚೆನ್ನಬಸಪ್ಪ ಕಾರ್ಯ ನಿರ್ವಹಿಸಿ, ಶಿಕ್ಷಕರ ತರಬೇತಿಗೆ ಹೊಸ ಆಯಾಮ ತಂದುಕೊಟ್ಟರು. ದಕ್ಷಿಣ ವಿಭಾಗದ ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಕಛೇರಿ ಬೆಳಗಾವಿಯಲ್ಲಿ ಇದ್ದುದರಿಂದ, ಈ ಶಾಲೆ 1861 ರಲ್ಲಿ ಬೆಳಗಾವಿಗೆ ಸ್ಥಳಾಂತರಿಸಲ್ಪಟ್ಟಿತು. ಬೆಳಗಾವಿಯಲ್ಲಿದ್ದಾಗ ನಾರ್ಮಲ್ ಸ್ಕೂಲ್ ಟ್ರೇನಿಂಗ್ ಕಾಲೇಜಾಗಿ (1864), ಅದಕ್ಕೆ ಚೆನ್ನಬಸಪ್ಪನವರೇ ಪ್ರಿನ್ಸಿಪಾಲರಾದರು. ಮುಂದೆ 1866 ರಲ್ಲಿ ಚೆನ್ನಬಸಪ್ಪನವರು ಡೆಪ್ಯುಟಿ ಇನ್ಸ್‌ಪೆಕ್ಟರ್ ಆದಾಗ ವೆಂಕಟ ರಂಗೋಕಟ್ಟಿ ಎಂಬ ಖ್ಯಾತ ವಿದ್ವಾಂಸರು ಇದರ ಪ್ರಿನ್ಸಿಪಾಲರಾದರು (1866). ಈ ಸಂಸ್ಥೆ 1875 ರಲ್ಲಿ ಪುನಃ ಧಾರವಾಡಕ್ಕೆ ವರ್ಗಾವಣೆಗೊಂಡಿತು. ಇನ್ನೊಬ್ಬ ಪ್ರಸಿದ್ಧ ಲೇಖಕ ಗಂಗಾಧರ ಮಡಿವಾಳೇಶ್ವರ ತುರಮರಿ 1848 ರಿಂದ 1877 ರ ವರೆಗೆ ಜಿಲ್ಲೆಯ ವಿವಿಧೆಡೆಗಳಲ್ಲಿ ಶಿಕ್ಷಕರಾಗಿದ್ದು,

ಸ್ವಪ್ರಯತ್ನದಿಂದ ಇಂಗ್ಲಿಷ್ ಕಲಿತು, 1865 ರಲ್ಲಿ ಸರಕಾರೀ ಭಾಷಾಂತರಕಾರರಾದರು. ಇವರ ಪಾಂಡಿತ್ಯವನ್ನು ಗುರ್ತಿಸಿ 1872 ರಲ್ಲಿ ಇವರನ್ನು ಟ್ರೈನಿಂಗ್ ಕಾಲೇಜಿನ ಉಪಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಸರಕಾರದ ಧನಸಹಾಯದಿಂದ ಇವರು 'ಶಬ್ದಮಂಜರಿ' ಎಂಬ ಕನ್ನಡ ಕೋಶವನ್ನು ರಚಿಸಿದರು. ಇದೇ ಕಾಲಕ್ಕೆ ಶಾ.ರಾ. ಕಿತ್ತೂರರು ಬೆಳಗಾವಿಯ ಸರ್ದಾರ್ ಹೈಸ್ಕೂಲಿನಿಂದ ಇಲ್ಲಿಗೆ ಕನ್ನಡ ಶಿಕ್ಷಕರಾಗಿ ವರ್ಗಾಯಿಸಲ್ಪಟ್ಟರು. ಇವರಿಂದ ಖ್ಯಾತ ಜರ್ಮನ್ ಮಿಷನರಿಗಳಾದ ಕಿಟ್ಟೆಲ್ ಮತ್ತು ವರ್ಥ್ ಅವರುಗಳು ಕನ್ನಡ ಕಲಿತರೆಂದು ತಿಳಿದುಬರುತ್ತದೆ. 1864 ರ ವೇಳೆಗೆ ಬೆಳಗಾವಿಯ ಕಾಲೇಜಿನಲ್ಲಿ 12 ಮತ್ತು 14 ವಿದ್ಯಾರ್ಥಿಗಳ ಎರಡು ವರ್ಗಗಳಿದ್ದವು. ಇವರಲ್ಲಿ ಅರ್ಧದಷ್ಟು ಮಂದಿ ಕೊಂಕಣಿಗಳಾಗಿದ್ದರು. ಈ ವರ್ಷ ಹುಯಿಲಗೋಳ ಭುಜಂಗರಾಯರು, ರೊದ್ದ ಶ್ರೀನಿವಾಸರಾಯರು, ವೆಂಕಟರಂಗೋಕಟ್ಟಿಯವರಂತಹ ಖ್ಯಾತನಾಮರು ಇದರ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಗ್ವಾಲಿಯರ್, ಜೈಪುರ ಮತ್ತು ಆಗ್ರಾ ಘರಾನಾಗಳ ಸಂಗಮ ಹೊಂದಿದ್ದ ಭಾಸ್ಕರ ಬುವಾ ಬಖಲೆ 1908 ರಲ್ಲಿ ಇಲ್ಲಿ ಸಂಗೀತ ಶಿಕ್ಷಕರಾಗಿದ್ದರು. ಟ್ರೇನಿಂಗ್ ಕಾಲೇಜು ಆ ಕಾಲದಲ್ಲಿ ಇಂದಿನ ವಿಶ್ವವಿದ್ಯಾಲಯದಂತೆ ಕಾರ್ಯ ನಿರ್ವಹಿಸಿ ಧಾರವಾಡ ಜಿಲ್ಲೆಯ ಸಕಲವಿಧ ಶೈಕ್ಷಣಿಕ, ಸಾಂಸ್ಕೃತಿಕ ಪ್ರಗತಿಗೆ ಕಾರಣವಾಯಿತು.

ಕರ್ನಾಟಕದಲ್ಲಿ ಕನ್ನಡ ಚಳವಳಿ ಪ್ರಾರಂಭಿಸಿದ ಡೆಪ್ಯುಟಿ ಚೆನ್ನಬಸಪ್ಪನವರು ಮುಖ್ಯಸ್ಥರಾಗಿದ್ದಾಗ ಪ್ರಾರಂಭಗೊಂಡ, ಅತ್ಯಂತ ದೀರ್ಘಕಾಲ ಬದುಕಿ ಉಳಿದಿರುವ ಶೈಕ್ಷಣಿಕ ಪತ್ರಿಕೆಯಾದ 'ಮಠ ಪತ್ರಿಕೆ' (1865)ಯು ಸಂಸ್ಥೆಯ ಒಂದು ಅಂಗವಾಗಿ ಈಗಲೂ 'ಜೀವನ ಶಿಕ್ಷಣ' ಎಂಬ ಹೆಸರಿನಲ್ಲಿ ಸಂಸ್ಥೆಯ ಸ್ವಂತ ಮುದ್ರಣಾಲಯದಲ್ಲಿ ಪ್ರಕಟಗೊಳ್ಳುತ್ತಿದೆ. ಮಾಸಿಕ 10,000 ಪ್ರತಿಗಳು ಮುದ್ರಿಸಲ್ಪಡುತ್ತಿದ್ದು, ಎಲ್ಲಾ ಶಾಲೆಗಳಿಗೂ ತಲುಪುತ್ತಿವೆ. ಈ 'ಮಠ ಪತ್ರಿಕೆ' ಶಿಕ್ಷಣ ಇಲಾಖೆಯ ಗೆಜೆಟ್‌ನಂತಿದ್ದು ಶಿಕ್ಷಕರಿಗೆ ಮಾರ್ಗದರ್ಶನ, ಸೂಚನೆ ಸ್ಫೂರ್ತಿ ನೀಡುತ್ತಿತ್ತು.

ಸಂಸ್ಥೆಗೆ ಹೊಂದಿಕೊಂಡಂತೆ 1875 ರಲ್ಲಿ ಪ್ರಾರಂಭಗೊಂಡ ಪಾಠಾಭ್ಯಾಸ ಶಾಲೆ (ಪ್ರಾಕ್ಟಿಸಿಂಗ್ ಸ್ಕೂಲ್) ಕೆಲಸ ಮಾಡುತ್ತಿದೆ. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮೂಲಕ ಸಂಪೂರ್ಣ ಕೇಂದ್ರಸರ್ಕಾರದ ಅನುದಾನ ಪಡೆಯುತ್ತಿರುವ ಈ ಸಂಸ್ಥೆಗೆ ಮುಖ್ಯಸ್ಥರಾಗಿ ಉಪನಿರ್ದೇಶಕರ ದರ್ಜೆಯ ಪ್ರಾಚಾರ್ಯರು, ಏಳು ವಿವಿಧ ವಿಭಾಗಗಳ ಸ್ವತಂತ್ರ ವಿಭಾಗೀಯ ಮುಖ್ಯಸ್ಥರೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಶಾಲೆಗಳಲ್ಲಿ ಹಾಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಮಾತ್ರ ಪ್ರವೇಶಾವಕಾಶವಿರುವ ಈ ಸಂಸ್ಥೆ ಸುಮಾರು 25 ಮಂದಿ ಶಿಕ್ಷಕರನ್ನು ಹೊಂದಿದೆ. ವಿವಿಧ ಶಾಲೆಗಳಿಂದ ನಿಯೋಜನೆ ಮೇರೆಗೆ ಕಳುಹಿಸಲ್ಪಟ್ಟ ಶಿಕ್ಷಕರ ಅವಶ್ಯಕತೆಗಳಿಗೆ ಅನುಗುಣವಾಗಿ ಇಲ್ಲಿ ವಿವಿಧ ಶಿಸ್ತುಗಳಲ್ಲಿ ತರಬೇತಿ ನೀಡಲಾಗುತ್ತದೆ. ತರಬೇತಿಯ ಪಠ್ಯಕ್ರಮವೂ ಇಲ್ಲಿ ತಯಾರಿಸಲ್ಪಡುತ್ತದೆ. ಇದಕ್ಕೆ ಹೊಂದಿಕೊಂಡಂತೆ 120 ವಿದ್ಯಾರ್ಥಿಗಳಿರುವ ಒಂದು ಪ್ರಾಥಮಿಕ ಶಿಕ್ಷಣ ತರಬೇತಿ ಕೇಂದ್ರ, 800 ಮಕ್ಕಳ ಒಂದು ಪ್ರಾಥಮಿಕ ಶಾಲೆ, ಒಂದು ಚಿತ್ರ ಕಲಾ ಶಾಲೆ ಇವೆ. ತನ್ನದೇ ಆದ ವಿದ್ಯಾರ್ಥಿನಿಲಯ ಹೊಂದಿರುವ ಈ ಸಂಸ್ಥೆ 180 ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಕಲ್ಪಿಸುತ್ತದೆ. ಇದರ ಆಡಳಿತಕ್ಕೆ ಒಳಪಡುವ ಡೆಪ್ಯುಟಿ ಚೆನ್ನಬಸಪ್ಪ ಪ್ರಾಥಮಿಕ ಶಿಕ್ಷಣ ದತ್ತಿ ಈವರೆಗೆ ಸುಮಾರು 30 ಶೈಕ್ಷಣಿಕ ಪುಸ್ತಕಗಳನ್ನು ಪ್ರಕಟಿಸಿದೆ.

ಸಂಸ್ಥೆ 1993-94 ರ ವೇಳೆಗೆ 80 ತರಬೇತಿ ಕಾರ್ಯಕ್ರಮಗಳನ್ನು ನಡೆಸಿದ್ದು, 3,600 ಸೇವಾನಿರತ ಶಿಕ್ಷಕರಿಗೆ ತರಬೇತಿ ನೀಡಿತ್ತು. ಪ್ರಸ್ತುತ ಶಾಲೆಯ ಆವರಣವನ್ನು 'ಶಿಕ್ಷಣ ಸಂತಸ' - ಅಂದರೆ ಶಿಕ್ಷಣ ಸಂಪನ್ಮೂಲ ತರಬೇತಿ ಸಮುದಾಯ ಎಂದು ಕರೆಯಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯಡಿ 1993 ರಿಂದ ಸಂಸ್ಥೆಯನ್ನು 'ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ' ಎಂದು ಹೆಸರಿಸಲಾಗಿದೆ. ಖಾಸಗಿ ಸಂಸ್ಥೆಗಳಿಗೂ ಶಿಕ್ಷಣ ಸಂಸ್ಥೆ ತೆರೆಯಲು ಸರಕಾರ ಅನುಮತಿ ನೀಡಿದ ನಂತರ 1944 ರಲ್ಲಿ ನವಲಗುಂದ ಟ್ರೈನಿಂಗ್ ಕಾಲೇಜು ಮತ್ತು 1947 ರಲ್ಲಿ ಬಾಸೆಲ್‌ಮಿಷನ್ ಟ್ರೈನಿಂಗ್ ಕಾಲೇಜುಗಳು ಪ್ರಾರಂಭವಾದವು.

**ಶಿಕ್ಷಕಿಯರ ತರಬೇತಿ ಸಂಸ್ಥೆ ಧಾರವಾಡ:** ಇದು ರಾಜ್ಯದ ಪ್ರಪ್ರಥಮ ಶಿಕ್ಷಕಿಯರ ತರಬೇತಿ ಸಂಸ್ಥೆಯಾಗಿದ್ದು, ಧಾರವಾಡದಲ್ಲಿ 1895 ರಲ್ಲಿ ಒಂಬತ್ತು ವಿದ್ಯಾರ್ಥಿನಿಯರೊಂದಿಗೆ ಪ್ರಾರಂಭವಾಯಿತು. ಸ್ತ್ರೀ ಶಿಕ್ಷಣ ಹೆಚ್ಚು ಜನಪ್ರಿಯಗೊಂಡಂತೆ ತರಬೇತಿ ಹೊಂದಿದ ಶಿಕ್ಷಕಿಯರ ಕೊರತೆಯೂ ಕಂಡು, ಇವರಿಗಾಗಿಯೇ ಈ ತರಬೇತಿ ಶಾಲೆ ಪ್ರಾರಂಭಗೊಂಡಿತು. ಜಿಲ್ಲೆಯ ಶಿಕ್ಷಣಾಧಿಕಾರಿಗಳಾಗಿದ್ದ

ರೊಡ್ಡ ಶ್ರೀನಿವಾಸರಾಯರು ಮತ್ತು ಸಹಸ್ರಬುದ್ಧೆಯವರ ಮಾರ್ಗದರ್ಶನದಲ್ಲಿ 'ಟ್ರೈನಿಂಗ್ ಕ್ಲಾಸ್' ಎಂಬ ಹೆಸರಿನಿಂದ ಪ್ರಾರಂಭವಾಗಿ 1903ರಲ್ಲಿ 'ಫೀಮೇಲ್ ನಾರ್ಮಲ್ ಸ್ಕೂಲ್' ಎಂಬ ಹೆಸರು ಹೊಂದಿತು. ಸ್ವಾತಂತ್ರ್ಯ ಕಾಲದವರೆಗೂ ಇಲ್ಲಿ ಬ್ರಿಟಿಷ್ ಮಹಿಳೆಯರೇ ಪ್ರಿನ್ಸಿಪಾಲರಾಗಿದ್ದರು. ಬಾಲಕೃಷ್ಣ ರಂಗೋ ಕದಡಿ ಇಲ್ಲಿನ ಪ್ರಥಮ ಭಾರತೀಯ ಪ್ರಾಚಾರ್ಯರು. ಇದಕ್ಕೆ 1908ರಲ್ಲಿ 'ಮಹಿಳೆಯರ ಸರ್ಕಾರಿ ತರಬೇತಿ ಸಂಸ್ಥೆ' ಎಂಬ ಹೆಸರಿಡಲಾಯಿತು. 1958ರಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಕಿಯರ ತರಬೇತಿ ವಿಭಾಗವನ್ನು 15 ಶಿಕ್ಷಕ ವಿದ್ಯಾರ್ಥಿನಿಯರೊಂದಿಗೆ ಪ್ರಾರಂಭಿಸಿ, ಪೂರ್ವ ಪ್ರಾಥಮಿಕ ವಲಯಕ್ಕೂ ವಿಸ್ತಾರಮಾಡಲಾಯಿತು. ಈ ಭಾಗದ ಉರ್ದು ಶಿಕ್ಷಕಿಯರು ತರಬೇತಿಗಾಗಿ ಪುಣೆಗೆ ಹೋಗಬೇಕಾಗಿತ್ತು. ಈ ತೊಂದರೆ ನಿವಾರಿಸಲು ಇಲ್ಲಿ ಉರ್ದು ಶಿಕ್ಷಕಿಯರಿಗಾಗಿ ತರಬೇತಿ ವರ್ಗವನ್ನು ತೆರೆಯಲಾಯಿತು. ಈವರೆಗೆ ಸಂಸ್ಥೆ 6,000 ಕ್ಕೂ ಹೆಚ್ಚಿನ ಶಿಕ್ಷಕಿಯರಿಗೆ ತರಬೇತಿ ನೀಡಿರುತ್ತದೆ. ಪ್ರಸ್ತುತ ಸಂಸ್ಥೆಯಲ್ಲಿ ಟಿ.ಸಿ.ಎಚ್. ಕನ್ನಡ ಮತ್ತು ಉರ್ದು ತರಬೇತಿ, ಪೂರ್ವ ಪ್ರಾಥಮಿಕ ಶಿಕ್ಷಕಿಯರ ತರಬೇತಿ ಹಾಗೂ ಪೂರ್ವ ಪ್ರಾಥಮಿಕ ತರಗತಿಗಳನ್ನೊಳಗೊಂಡ ಮಾದರಿ ಪ್ರಾಯೋಗಿಕ ಪ್ರಾಥಮಿಕ ಶಾಲೆ ಎಂಬ ಮೂರು ವಿಭಾಗಗಳಿದ್ದು, 170ಶಿಕ್ಷಕ ವಿದ್ಯಾರ್ಥಿನಿಯರೂ, ಎರಡೂ ಶಾಲೆಗಳಲ್ಲಿ ಒಟ್ಟು 800 ಮಕ್ಕಳೂ ವ್ಯಾಸಂಗ ಮಾಡುತ್ತಿದ್ದಾರೆ.

### ಪ್ರಾಥಮಿಕ ಶಿಕ್ಷಕರ ತರಬೇತಿ

1856ರಲ್ಲಿ ಸ್ಥಾಪನೆಗೊಂಡ 'ನಾರ್ಮಲ್ ಸ್ಕೂಲ್' ಟ್ರೇನಿಂಗ್ ಕಾಲೇಜಾದುದು, ಮಹಿಳೆಯರ ಟ್ರೇನಿಂಗ್ ಕಾಲೇಜ್ ಹಾಗೂ ಉರ್ದು ಶಿಕ್ಷಕರ ತರಬೇತಿ ವಿಭಾಗ ಆರಂಭಗೊಂಡ ಬಗ್ಗೆ ಹಿಂದೆ ಹೇಳಿದೆ. ಇದಲ್ಲದೆ ಹಲವಾರು ಖಾಸಗಿ ಸಂಸ್ಥೆಗಳೂ ಪ್ರಾಥಮಿಕ ಪ್ರಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವುದರ ಮೂಲಕ ಶಿಕ್ಷಕರ ತರಬೇತಿಗೆ ಉತ್ತಮ ಪ್ರೋತ್ಸಾಹ ನೀಡಿವೆ. ಹುಬ್ಬಳ್ಳಿಯಲ್ಲಿ ಸ್ವಾತಂತ್ರ್ಯಯೋಧ ಸರದಾರ್ ವೀರಣಗೌಡ ಪಾಟೀಲರು ಆರಂಭಿಸಿದ ಮಹಿಳಾ ವಿದ್ಯಾಪೀಠ ಇಲ್ಲಿ ಉಲ್ಲೇಖನೀಯ. ಇದರ ಆಶ್ರಯದಲ್ಲಿ ಅಕ್ಕಮಹಾದೇವಿ ಟ್ರೇನಿಂಗ್ ಕಾಲೇಜ್ ಆರಂಭವಾಯಿತು (1949). ಉಳಿದ ಎಂಟು ಖಾಸಗಿ ಸಂಸ್ಥೆಗಳ ಪೈಕಿ ಐದು ಅನುದಾನಿತ ಮತ್ತು ಮೂರು ಅನುದಾನ ರಹಿತ ಸಂಸ್ಥೆಗಳಾಗಿವೆ. ಎಲ್ಲಾ ಹತ್ತು ಸಂಸ್ಥೆಗಳಲ್ಲಿ 1991-92 ನೇ ಸಾಲಿಗೆ 1,056 ಮಂದಿ (439 ಗಂಡು, 617 ಹೆಣ್ಣು) ವ್ಯಾಸಂಗ ಮಾಡುತ್ತಿದ್ದರು. 1992-93 ನೇ ಸಾಲಿಗೆ ಈ ಸಂಖ್ಯೆ ಒಟ್ಟು 1,319 (437 ಗಂಡು, 882 ಹೆಣ್ಣು) ಆಯಿತು. ಪರೀಕ್ಷೆಗೆ ಹಾಜರಾದವರಲ್ಲಿ 1991-92 ನೇ ಸಾಲಿನ 451 ಮೊದಲ ವರ್ಷದ ವಿದ್ಯಾರ್ಥಿಗಳಲ್ಲಿ 177 ಮಂದಿ (ಶೇ. 72.24) ತೇರ್ಗಡೆಯಾದರೆ, ಎರಡನೇ ವರ್ಷದ 381 ಮಂದಿಯಲ್ಲಿ 214 (ಶೇ. 56.17) ಮಂದಿ ತೇರ್ಗಡೆಯಾದರು. 1992-93 ನೇ ಸಾಲಿಗೆ ಮೊದಲ ವರ್ಷ 439 ಮಂದಿ ಹಾಜರಾಗಿ 258 ಮಂದಿ (ಶೇ. 58.77) ತೇರ್ಗಡೆಯಾದರೆ, ಎರಡನೇ ವರ್ಷ 437 ಮಂದಿಯಲ್ಲಿ 327 (ಶೇ. 74.83) ಮಂದಿ ಉತ್ತೀರ್ಣರಾದರು. ಇವರಲ್ಲಿ 92-93 ನೇ ಸಾಲಿಗೆ ಕನ್ನಡ ಮಾಧ್ಯಮದವರು 330, ಇಂಗ್ಲಿಷ್ ಮಾಧ್ಯಮದವರು 86 ಮತ್ತು ಉರ್ದು ಮಾಧ್ಯಮದವರು 29 ಮಂದಿ ಮೊದಲನೇ ವರ್ಷದಲ್ಲಿದ್ದರೆ, ಎರಡನೇ ವರ್ಷಕ್ಕೆ 320 ಕನ್ನಡ, 88 ಇಂಗ್ಲಿಷ್ ಮತ್ತು 29 ಉರ್ದು ಮಾಧ್ಯಮದ ವಿದ್ಯಾರ್ಥಿಗಳಿದ್ದರು.

1991-92 ನೇ ಸಾಲಿಗೆ ಮೊದಲ ವರ್ಷದ ತರಗತಿಯಲ್ಲಿ 37 ಪರಿಶಿಷ್ಟ ಜಾತಿ ಗಂಡು, 15 ಪರಿಶಿಷ್ಟ ಜಾತಿ ಹೆಣ್ಣು, 13 ಪರಿಶಿಷ್ಟ ವರ್ಗದ ಗಂಡು, 14 ಪರಿಶಿಷ್ಟ ವರ್ಗದ ಹೆಣ್ಣು ಶಿಕ್ಷಕ ವಿದ್ಯಾರ್ಥಿಗಳು ಇದ್ದರೆ, ಎರಡನೇ ವರ್ಷಕ್ಕೆ 25 ಪರಿಶಿಷ್ಟ ಜಾತಿ ಗಂಡು, 22 ಪರಿಶಿಷ್ಟ ಜಾತಿ ಹೆಣ್ಣು, 13 ಪರಿಶಿಷ್ಟ ವರ್ಗದ ಗಂಡು, 12 ಪರಿಶಿಷ್ಟ ವರ್ಗದ ಹೆಣ್ಣು ಇದ್ದರು. ಮರುಸಾಲಿಗೆ (92-93) ಈ ಸಂಖ್ಯೆ - ಮೊದಲನೇ ವರ್ಷಕ್ಕೆ 19 ಪರಿಶಿಷ್ಟ ಜಾತಿ ಗಂಡು, 22 ಪರಿಶಿಷ್ಟ ಜಾತಿ ಹೆಣ್ಣು, ಆರು ಪರಿಶಿಷ್ಟ ವರ್ಗದ ಗಂಡು, ಆರು ಪರಿಶಿಷ್ಟ ವರ್ಗದ ಹೆಣ್ಣು, ಎರಡನೇ ವರ್ಷಕ್ಕೆ 23 ಪರಿಶಿಷ್ಟ ಜಾತಿ ಗಂಡು, 17 ಪರಿಶಿಷ್ಟ ಜಾತಿ ಹೆಣ್ಣು, ಐದು ಪರಿಶಿಷ್ಟ ವರ್ಗದ ಗಂಡು, ಒಂಬತ್ತು ಪರಿಶಿಷ್ಟ ವರ್ಗದ ಹೆಣ್ಣು ಆಗಿತ್ತು. ಎಲ್ಲಾ ಸಂಸ್ಥೆಗಳಲ್ಲಿ ಒಟ್ಟು 113 ಶಿಕ್ಷಕ ಸಿಬ್ಬಂದಿ 91-92 ನೇ ಸಾಲಿಗೂ, 108 ಮಂದಿ 92-93 ನೇ ಸಾಲಿಗೂ ಇದ್ದರು.

**ಪ್ರಾಥಮಿಕ ಶಿಕ್ಷಣ ಪ್ರಗತಿ**

1960 ರಿಂದ 1990 ಮೂರು ದಶಕಗಳ ಅವಧಿಯಲ್ಲಿ ಜಿಲ್ಲೆಯ ಶೈಕ್ಷಣಿಕ ರಂಗದಲ್ಲಿ ಮಹತ್ವಪೂರ್ಣ ಅಭಿವೃದ್ಧಿಯಾಗಿದೆ. ಜಿಲ್ಲೆಯ 17 ತಾಲೂಕುಗಳಲ್ಲದೆ, ಶೈಕ್ಷಣಿಕ ಆಡಳಿತಕ್ಕಾಗಿ ಹುಬ್ಬಳ್ಳಿ ಶಹರ ವಲಯ ಮತ್ತು ಗದಗ ಶಹರ ವಲಯಗಳನ್ನು ನಿರ್ಮಿಸಲಾಗಿದ್ದು, ಇದನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರು ನೋಡಿಕೊಳ್ಳುತ್ತಾರೆ. 1960ರಲ್ಲಿ ಜಾರಿಯಾದ ಕರ್ನಾಟಕ ಲೋಕಲ್ ಬೋರ್ಡ್ ಮತ್ತು ವಿಲೇಜ್ ಪಂಚಾಯತ್ ಆ್ಯಕ್ಟ್ (1959) ನಂತೆ ಜಿಲ್ಲಾ ಸ್ಕೂಲ್ ಬೋರ್ಡ್‌ಗಳು ರದ್ದಾಗಿ, ಪ್ರಾಥಮಿಕ ಶಿಕ್ಷಣ ಸರಕಾರದ ನೇರ ವ್ಯಾಪ್ತಿಗೆ ಬಂತು.

1991-92 ನೇ ಸಾಲಿಗೆ ಜಿಲ್ಲೆಯಲ್ಲಿ 2,149 ಪ್ರಾಥಮಿಕ ಶಾಲೆಗಳಿದ್ದು, ಅವುಗಳಲ್ಲಿ 902 ಕಿರಿಯ ಪ್ರಾಥಮಿಕ ಶಾಲೆಗಳು, (ವರ್ಗ 1 ರಿಂದ 4) ಮತ್ತು 1,247 ಹಿರಿಯ (ಏಳನೇಯ ತರಗತಿವರೆಗೆ) ಪ್ರಾಥಮಿಕ ಶಾಲೆಗಳು ಸೇರಿವೆ. ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 834 ಸರಕಾರಿ ಶಾಲೆಗಳಾಗಿದ್ದು, ಉಳಿದ 68 ಖಾಸಗಿ ಶಾಲೆಗಳಾಗಿದ್ದವು. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 1,162 ಸರಕಾರಿ ಶಾಲೆಗಳಾಗಿದ್ದರೆ, ಉಳಿದ 85 ಖಾಸಗಿ ಶಾಲೆಗಳಾಗಿರುತ್ತವೆ. ಒಟ್ಟು 902 ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 777 ಶಾಲೆಗಳು ಗ್ರಾಮಾಂತರ ಪ್ರದೇಶಗಳಲ್ಲಿದ್ದು, ಉಳಿದ 125 ಶಹರ ಪ್ರದೇಶದಲ್ಲಿದ್ದವು. ಒಟ್ಟು 1,247 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 895 ಗ್ರಾಮಾಂತರ ಪ್ರದೇಶದಲ್ಲಿದ್ದು, ಉಳಿದ 352 ಶಾಲೆಗಳು ಶಹರ ಪ್ರದೇಶದಲ್ಲಿದ್ದವು. ಮೇಲ್ಕಾಣಿಸಿದ 2,149 ಪ್ರಾಥಮಿಕ ಶಾಲೆಗಳಲ್ಲಿ 5,65,868 ಮಕ್ಕಳು ದಾಖಲಾಗಿದ್ದು, ಅವರಲ್ಲಿ 3,05,059 ಗಂಡು ಮಕ್ಕಳು ಹಾಗೂ 2,60,809 ಹೆಣ್ಣುಮಕ್ಕಳು ಸೇರಿದ್ದರು. ಒಟ್ಟು ದಾಖಲಾತಿಯಲ್ಲಿ 65,893 ಪರಿಶಿಷ್ಟ ಜಾತಿಯವರು ಮತ್ತು 23,425 ಪರಿಶಿಷ್ಟ ವರ್ಗದ ಮಕ್ಕಳು ಇದ್ದರು. ಜಿಲ್ಲೆಯ ಒಟ್ಟು 1,672 ಗ್ರಾಮಾಂತರ ಪ್ರಾಥಮಿಕ ಶಾಲೆಗಳಲ್ಲಿ 3,64,510 ಮಕ್ಕಳು ದಾಖಲಾಗಿದ್ದು, ಅವುಗಳಲ್ಲಿ 45,000 ಮಕ್ಕಳು ಪರಿಶಿಷ್ಟ ಜಾತಿಗೂ 17,536 ಮಕ್ಕಳು ಪರಿಶಿಷ್ಟ ವರ್ಗಕ್ಕೂ ಸೇರಿದ್ದರು.

ಒಟ್ಟು ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆ ಮೇಲಿನ ಸಾಲಿಗೆ 9,529 ಆಗಿದ್ದು, ಅವರಲ್ಲಿ 6,583 ಪುರುಷರು, 2,946 ಸ್ತ್ರೀಯರು ಇದ್ದರು. ಇವರಲ್ಲಿ 1,037 ಪರಿಶಿಷ್ಟ ಜಾತಿಗೂ, 136 ಪರಿಶಿಷ್ಟ ವರ್ಗಕ್ಕೂ ಸೇರಿದ್ದರು. ಒಟ್ಟು ಶಿಕ್ಷಕರಲ್ಲಿ 1,814 ಮಂದಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲೂ 7,715 ಮಂದಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲೂ ಕೆಲಸ ಮಾಡುತ್ತಿದ್ದರು. ಕಿರಿಯ ಪ್ರಾಥಮಿಕ ಶಿಕ್ಷಕರ ಪೈಕಿ 1,774 ಮಂದಿ ತರಬೇತಿ ಹೊಂದಿದ್ದರೆ, ಹಿರಿಯ ಪ್ರಾಥಮಿಕ ಶಿಕ್ಷಕರ ಪೈಕಿ 7,586 ಮಂದಿ ತರಬೇತಿ ಹೊಂದಿದ್ದರು. ಅಂದರೆ, ಜಿಲ್ಲೆಯ ಒಟ್ಟು ಶಿಕ್ಷಕರಲ್ಲಿ ಶೇ.98.2 ರಷ್ಟು ತರಬೇತಿ ಹೊಂದಿದ ಶಿಕ್ಷಕರಾಗಿದ್ದರು. ಜಿಲ್ಲೆಯ ಒಟ್ಟು 1996 ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ 1691 ಶಾಲೆಗಳು ಸ್ವಂತ ಕಟ್ಟಡಗಳನ್ನು ಹೊಂದಿದ್ದವು. ಹಾಗೆಯೇ 153 ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ 58 ಶಾಲೆಗಳು ಸ್ವಂತ ಕಟ್ಟಡಗಳನ್ನು ಹೊಂದಿದ್ದವು.

ಮುಂದಿನ ಕೋಷ್ಟಕಗಳಲ್ಲಿ (ಪು 700 ರಿಂದ 705ರ ವರೆಗೆ) 1991-92 ರಿಂದ 1993-94 - ಈ ಮೂರು ವರ್ಷಗಳಿಗೆ ಶಾಲೆ ಬಿಟ್ಟ ಮಕ್ಕಳ ವಿವರ, ಪ್ರಾಥಮಿಕ ಶಿಕ್ಷಕರ ವಿವರ, ಮಧ್ಯಾಹ್ನ ಭೋಜನದ ಫಲಾನುಭವಿಗಳ ವಿವರ, ಉಚಿತ ಪಠ್ಯ ಹಾಗೂ ಸಮವಸ್ತ್ರದ ಹಂಚಿಕೆಯ ವಿವರ ಮತ್ತು 1993-94 ನೇ ಸಾಲಿಗೆ ಒಂದರಿಂದ ಏಳನೇ ತರಗತಿಯವರೆಗೆ ತಾಲೂಕುವಾರು ಮಕ್ಕಳ ಸಂಖ್ಯೆಯನ್ನು ನೀಡಲಾಗಿದೆ. ಇದು ಜಿಲ್ಲಾ ಶಿಕ್ಷಣ ಅಧಿಕಾರಿಗಳು ನೀಡಿದ ಮಾಹಿತಿಯಾಗಿದೆ.

**ಮಾಧ್ಯಮಿಕ ಶಿಕ್ಷಣ** : ಪ್ರಾಥಮಿಕ ಶಿಕ್ಷಣದ ಎರಡನೇ ಹಂತವಾದ ಮಾಧ್ಯಮಿಕ ಶಿಕ್ಷಣಕ್ಕೆ ಸಾಕಷ್ಟು ಪ್ರಾಧಾನ್ಯತೆ ಇದ್ದಿತು. 1848ರಲ್ಲಿ ಆರಂಭವಾದ ಧಾರವಾಡ ಇಂಗ್ಲೀಷು ಶಾಲೆ ಇದೇ ಗುಂಪಿನದು. ಕ್ರೈಸ್ತ ಪಾದ್ರಿಗಳೂ ಹಲವಾರು ಮಾಧ್ಯಮಿಕ ಶಾಲೆಗಳನ್ನು ಜಿಲ್ಲೆಯ ಹಲವೆಡೆ ಸ್ಥಾಪಿಸಿದ್ದರು. ಈಗ ಈ ಶಾಲೆಗಳು ಅಸ್ತಿತ್ವದಲ್ಲಿ ಇಲ್ಲ, ಅವು ಪ್ರೌಢಶಾಲೆಗಳಾಗಿ ಮಾರ್ಪಟ್ಟಿವೆ. ಇವುಗಳಲ್ಲಿ ಹಾವೇರಿಯ ಪುರಸಭೆ ಮಾಧ್ಯಮಿಕ ಶಾಲೆ ಮೂರು ವರ್ಗಗಳೊಡನೆ 1892 ರಲ್ಲಿ ಸ್ಥಾಪಿಸಲ್ಪಟ್ಟಿತು. 1922 ರಲ್ಲಿ ಆಂಗ್ಲೋ-ವರ್ನಾಕ್ಯುಲರ್ ಶಾಲೆಯಾಗಿ ನಗರ ಸಭೆಯ ಆಡಳಿತಕ್ಕೊಳಪಟ್ಟಿತು. ನಂತರದಲ್ಲಿ ಈ ಮೂರು ವರ್ಗಗಳು ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ್ ಆಡಳಿತಕ್ಕೂ, ಹೊಸದಾಗಿ ಸ್ಥಾಪನೆಯಾದ ನಾಲ್ಕು ಹಾಗೂ ಐದನೇ ತರಗತಿಗಳು ನಗರ ಸಭೆಯ ಆಡಳಿತಕ್ಕೂ ಒಳಪಟ್ಟವು.

1924 ಹಾಗೂ 1925 ರಲ್ಲಿ ಕ್ರಮವಾಗಿ ಆರು ಮತ್ತು ಏಳನೇ ತರಗತಿಗಳು ಪ್ರಾರಂಭಿಸಲ್ಪಟ್ಟವು. ಈ ಶತಮಾನದ ಆರಂಭದಲ್ಲಿ ಜಿಲ್ಲೆಯಲ್ಲಿ ಇಂಗ್ಲಿಷ್ ಕಲಿಸುವ ಐದು ಮಿಡ್ಲ್‌ಸ್ಕೂಲ್‌ಗಳಿದ್ದು, ಅವುಗಳಲ್ಲಿ ಒಟ್ಟು 203 ಗಂಡು ಮತ್ತು 85 ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಸ್ಥಳೀಯ ಭಾಷೆ ಕಲಿಸುವ ವರ್ನ್ಯಾಕ್ಯುಲರ್ ಮಿಡ್ಲ್ ಸ್ಕೂಲ್‌ಗಳು ಆರು ಇದ್ದು ಇವುಗಳಲ್ಲಿ ಒಟ್ಟು 352 ಮಕ್ಕಳಿದ್ದರು. ಮೊದಲ ಗುಂಪಿನ ಶಾಲೆಗಳ ಸಂಖ್ಯೆ 1921 ರಲ್ಲಿ ಅಷ್ಟೇ ಇದ್ದು, ಮಕ್ಕಳ ಸಂಖ್ಯೆ 424 ಕ್ಕೆ ಏರಿತು. ಎರಡನೇ ಗುಂಪಿನ ಶಾಲೆಗಳ ಸಂಖ್ಯೆ ಒಂಬತ್ತು ಆಗಿ, ಮಕ್ಕಳ ಸಂಖ್ಯೆ 404 ಆಯಿತು.

ಗದಗಿನಲ್ಲಿ ನಗರ ಸಭೆ 1885 ರಲ್ಲಿ ಒಂದು ಇಂಗ್ಲಿಷ್ ಮಾಧ್ಯಮಿಕ ಶಾಲೆ ಆರಂಭಿಸಿತು. ಇಲ್ಲಿ 1900 ರಲ್ಲಿ ವಿದ್ಯಾದಾನ ಸಮಿತಿಯು ಮಾಧ್ಯಮಿಕ ಶಾಲೆ ಪ್ರಾರಂಭವಾಗಿ, ಬೇಂದ್ರೆ, ಗಜೇಂದ್ರಗಡ್ಕರ್, ಅಡವಿ ಹಾಗೂ ಹುನಗುಂದ್ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. 1946 ರಲ್ಲಿ ಇಲ್ಲಿ ಪ್ರಾರಂಭವಾದ ಮಾಡೆಲ್ ಸೆಕೆಂಡರಿ ಮಿಡ್ಲ್ ಸ್ಕೂಲ್ 1952 ರಲ್ಲಿ ಪ್ರೌಢಶಾಲೆಯಾಯಿತು.

### ಶಿಕ್ಷಣ ಕ್ಷೇತ್ರಕ್ಕೆ ಮಿಷನರಿಗಳ ಸೇವೆ

ಬಾಸೆಲ್ ಮಿಷನ್ನಿನ ಕಾರ್ಯಾಚರಣೆ ಧಾರವಾಡದಲ್ಲಿ 1836 ರಲ್ಲಿ ಪ್ರಾರಂಭವಾಯಿತು. ಇವರ ಮೂಲೋದ್ದೇಶ ಧರ್ಮೋಪದೇಶವಾದರೂ, ಇವರಿಂದ ಶಿಕ್ಷಣ ಕ್ಷೇತ್ರಕ್ಕೆ ಮಹತ್ತರ ಕಾಣಿಕೆ ದೊರೆಯಿತು. ಧಾರವಾಡದಲ್ಲಿ ಮಿಷನರಿ ಕಾರ್ಯಾಚರಣೆಗಾಗಿ ಮೊದಲು ಸಾಮ್ಯೂಯಲ್ ಹೆಬಿಕ್ ಹಾಗೂ ರೆ. ಮೊಗ್ಲಿಂಗ್‌ರನ್ನು ನೇಮಿಸಲಾಯಿತು. 1837 ರಲ್ಲಿ ಧಾರವಾಡ ಮತ್ತು 1839 ರಲ್ಲಿ ಹುಬ್ಬಳ್ಳಿ ಪಟ್ಟಣಗಳು ಬಾಸೆಲ್ ಮಿಷನ್ನಿನ ಅಧಿಕೃತ ಠಾಣ್ಯಗಳೆಂದು ಪರಿಗಣಿಸಲ್ಪಟ್ಟವು. ಬಾಸೆಲ್ ಮಿಷನ್ನಿನಿಂದ ಪ್ರಾರಂಭಿಸಲ್ಪಟ್ಟ ಮೊದಲ ಶಾಲೆಗಳು ಬೆಟಗೇರಿ, ಉಣಕಲ್, ಹಾವೇರಿ, ಇಟಗಿ, ಕಲಘಟಗಿ, ರಾಣೆಬೆನ್ನೂರ, ಮೋಟೆಬೆನ್ನೂರ ಮತ್ತು ಬೆಳಗೇರಿಗಳಲ್ಲಿದ್ದವು. ಬಾಸೆಲ್ ಮಿಷನ್ನಿನ ಶಾಲೆಗಳಲ್ಲಿ ಕ್ರೈಸ್ತ ಮಕ್ಕಳಿಗೆ ಶಿಕ್ಷಣ ಉಚಿತವಾಗಿತ್ತು. ಮೊಗ್ಲಿಂಗ್ 1838 ರಲ್ಲಿ ಧಾರವಾಡದ ಬಜಾರದಲ್ಲಿ ಒಬ್ಬ ಬ್ರಾಹ್ಮಣನ ಮನೆ ಬಾಡಿಗೆಗೆ ಪಡೆದು ಅಲ್ಲಿ ಇಂಗ್ಲಿಷ್ ಶಾಲೆಯೊಂದನ್ನು ಪ್ರಾರಂಭಿಸಿದನು. ಇದರಲ್ಲಿ ಕೆಲವು ಯೂರೋಪಿಯನ್ ಮತ್ತು ತಮಿಳು ಕ್ರೈಸ್ತ ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಹಾಗೆಯೇ 1846 ರಲ್ಲಿ ಒಂದು ಹೆಣ್ಣು ಮಕ್ಕಳ ಬೋರ್ಡಿಂಗ್ ಶಾಲೆ ಪ್ರಾರಂಭವಾಗಿ ಅದರಲ್ಲಿ ಒಟ್ಟು 14 ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು. ರೆ.ಮೊಗ್ಲಿಂಗ್ ಪ್ರಾರಂಭಿಸಿದ ಇಂಗ್ಲಿಷ್ ಶಾಲೆಯ ಹೊರತಾಗಿ, ಎಲ್ಲ ಮಿಷನರಿಗಳೂ ಕನ್ನಡ ಶಾಲೆಗಳನ್ನೇ ತೆರೆದು ಅವುಗಳಲ್ಲಿ ತಾವೂ ಬೋಧನೆ ಮಾಡುತ್ತಿದ್ದರು. 1837 ರಲ್ಲಿ ರೆ.ಲೆಹ್ನರ್ ದಂಪತಿಗಳು ಧಾರವಾಡದ ಸುತ್ತಮುತ್ತಲ ಹಳ್ಳಿಗಳಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸಿದರು. ಶ್ರೀಮತಿ ಲೆಹ್ನರ್ ಬಾಲಕಿಯರ ಬೋರ್ಡಿಂಗ್ ಶಾಲೆಗಳ ಮೇಲ್ವಿಚಾರಣೆ ಮಾಡುವುದರೊಂದಿಗೆ ಮಕ್ಕಳಿಗೆ ಕನ್ನಡ, ಇಂಗ್ಲಿಷ್ ಮತ್ತು ಹೊಲಿಗೆ ಕೆಲಸಗಳನ್ನು ಕಲಿಸುತ್ತಿದ್ದರು.

ಹುಬ್ಬಳ್ಳಿಯ ಬಜಾರಿನ ಸಮೀಪ 1839 ರಲ್ಲಿ 50 ಮಕ್ಕಳಿದ್ದ ಕನ್ನಡ ಶಾಲೆಯೊಂದು ರೆ.ಸುಪ್ಪರ್‌ನ ಮೇಲ್ವಿಚಾರಣೆಯಲ್ಲಿ ನಡೆಯುತ್ತಿತ್ತು. ಇದರಲ್ಲಿ ಲಿಂಗಾಯಿತ ಶಿಕ್ಷಕರು ಪಾಠ ಹೇಳುತ್ತಿದ್ದರು. ಏಪ್ರಿಲ್ 1842 ರಲ್ಲಿ ಹೊಸ ಹುಬ್ಬಳ್ಳಿಯಲ್ಲಿ ರೆ.ಸುಪ್ಪರ್ ಮೊಟ್ಟಮೊದಲ ಬಾಲಕಿಯರ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರೆಂದೂ, ಆಗಸ್ಟ್‌ನಲ್ಲಿ ಹಳೇ ಹುಬ್ಬಳ್ಳಿಯಲ್ಲಿ ಇಂತಹ ಮತ್ತೊಂದು ಶಾಲೆಯನ್ನು ಸ್ಥಾಪಿಸಿದನೆಂದೂ, ಇವುಗಳಲ್ಲಿ ತಲಾ 12 ಮಕ್ಕಳಿದ್ದರೆಂದೂ ತಿಳಿದು ಬರುತ್ತದೆ. 1844 ರ ವೇಳೆಗೆ ಈ ಶಾಲೆಗಳ ಸಂಖ್ಯೆ ಜಿಲ್ಲೆಯಲ್ಲಿ 13 ಆಗಿತ್ತು. 1880 ರಲ್ಲಿ ಗದಗ ಬೆಟಗೇರಿ, ಸಿದ್ದನಭಾವಿ, ಗಮ್ಮಗೋಳಗಳಲ್ಲಿ ಕೃಷಿ ತರಬೇತಿ ಕೇಂದ್ರಗಳು ಸ್ಥಾಪಿಸಲ್ಪಟ್ಟು, ಇವುಗಳಲ್ಲಿ ಫೋಲ್ಬನ್, ಜಾನ್ ಸ್ಪಾಹೆಲಿನ್ ಮುಂತಾದ ಬಾಸೆಲ್ ಮಿಷನ್ ತಜ್ಞರು ಅಧ್ಯಾಪಕರಾಗಿದ್ದರು. ರೆ.ಹರ್ಮನ್ ರೀಷ್ ಶಾಲಾ ಇನ್ಸ್‌ಪೆಕ್ಟರಾಗಿ 1895 ರಲ್ಲಿ ನೇಮಕಗೊಂಡನು. ಇದೇ ವರ್ಷ ರೆ. ಚೆನ್ನಪ್ಪಹಳ್ಳಿ ಬೆಟಗೇರಿ ಶಾಲೆಗಳ ಮೇಲ್ವಿಚಾರಕನಾದನು. 1914 ರಲ್ಲಿ ಬಾಸೆಲ್ ಮಿಷನ್ ಧಾರವಾಡದಲ್ಲಿ ಪ್ರಾರಂಭಿಸಿದ ಸ್ಟೂಡೆಂಟ್ಸ್ ಹೋಂಗೆ ರೆ.ನಿಧಾನಪ್ಪ ರಾಮತಾಳ ಹೌಸ್‌ಫಾದರ್ ಆಗಿ 1925 ರ ವರೆಗೆ ಸೇವೆ ಸಲ್ಲಿಸಿದನು. 1906 ರಲ್ಲಿ ಬಾಸೆಲ್ ಮಿಷನ್ ವತಿಯಿಂದ ಬೆಟಗೇರಿಯಲ್ಲಿ ಎರಡು ಶಿಶುವಿಹಾರಗಳು, ಒಂದು ಪ್ರೌಢಶಾಲೆ ಹಾಗೂ ಒಂದು ಅನಾಥಾಶ್ರಮ ಪ್ರಾರಂಭವಾಯಿತು. ಧಾರವಾಡ ಜಿಲ್ಲೆಯಲ್ಲಿ ಪ್ರಥಮ ಹೈಸ್ಕೂಲನ್ನು 1863 ರಲ್ಲಿ ಈ ಸಂಸ್ಥೆ ಧಾರವಾಡದಲ್ಲಿ ಆರಂಭಿಸಿತು. ಧಾರವಾಡ ಜಿಲ್ಲೆಯಲ್ಲಿ ಶಿಕ್ಷಣಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಮಿಷನರಿಗಳಲ್ಲಿ ಖ್ಯಾತ ವಿದ್ವಾಂಸರಾದ ವೈಗೆಲ್, ಜೆಗ್ಲರ್, ಮೋಗ್ಲಿಂಗ್ ಹಾಗೂ ಕಿಟೆಲ್ ಉಲ್ಲೇಖನೀಯರು. ಜೆಗ್ಲರ್ ಧಾರವಾಡ

## ಕೋಷ್ಟಕ 13.1 : ಜಿಲ್ಲೆಯಲ್ಲಿ ಮೂರು ವರ್ಷಗಳಿಗೆ ಶಾಲೆ ಬಿಟ್ಟ ಮಕ್ಕಳ ಅಂಕಿಗಳು

| | ತಾಲೂಕು : ರೇಂಜು | 1991-92 | | | 1992-93 | | | 1993-94 | | |
|---|---|---|---|---|---|---|---|---|---|---|
| | | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. |
| 1. | ಬ್ಯಾಡಗಿ | 314 - 612 | 179 - 150 | 148 - 217 | 300 - 580 | 170 - 140 | 140-200 | 288-550 | 160-130 | 130-190 |
| 2. | ಧಾರವಾಡ ತಾ: | | | | ಮಾಹಿತಿ ಕಳುಹಿಸಿಲ್ಲ | | | | | |
| 3. | ಗದಗ ಶಹರ | 58 - 12 | 04 - 02 | - ಇಲ್ಲ - | 19 - 17 | 01 - 02 | - ಇಲ್ಲ - | 18-02 | - ಇಲ್ಲ - | 01-02 |
| 4. | ಗದಗ ಗ್ರಾ | 330 - 92 | 83 - 32 | 35 - 15 | 760 - 311 | 110 - 114 | 117 - 98 | 183-288 | 32-29 | 56-28 |
| 5. | ಹಾನಗಲ್ | 2000 - 3002 | - ನೀಡಿಲ್ಲ - | | 3003-2806 | - ನೀಡಿಲ್ಲ - | | 2237-1737 | - ನೀಡಿಲ್ಲ - | |
| 6. | ಹಾವೇರಿ | 674 - 718 | 325 - 396 | 122 - 207 | 568 - 633 | 216 - 239 | 106 - 194 | 415-329 | 210-187 | 96-113 |
| 7. | ಹಿರೇಕೆರೂರು | 575 - 538 | 174 - 118 | 128 - 85 | 680 - 522 | 200 - 158 | 130-100 | 475-429 | 85-64 | 78-72 |
| 8. | ಹು-ಧಾ ಮಹಾನಗರ | - | | | | ಮಾಹಿತಿ ಕಳುಹಿಸಿಲ್ಲ - | | | | |
| 9. | ಹುಬ್ಬಳ್ಳಿ ತಾ: | 1150 - 1750 | 300 - 350 | 270 - 290 | 1506 - 1717 | 275 - 330 | 260-275 | 1500-1675 | 270-300 | 250-260 |
| 10 | ಕಲಘಟಗಿ | 1821 - 1662 | -ನೀಡಿಲ್ಲ - | 1914-1676 | - ನೀಡಿಲ್ಲ - | | 1161-1210 | - ನೀಡಿಲ್ಲ - | | |
| 11. | ಕುಂದಗೋಳ | | | | | - ಮಾಹಿತಿ ಕಳುಹಿಸಿಲ್ಲ - | | | | |
| 12. | ಮುಂಡರಗಿ | | | | | - ಮಾಹಿತಿ ಕಳುಹಿಸಿಲ್ಲ - | | | | |
| 13. | ನರಗುಂದ | 69 - 44 | 09 - 05 | 06 - 04 | 36 - 27 | 10 - 07 | 04 - 03 | 94 - 69 | 07-08 | 05-04 |
| 14. | ನವಲಗುಂದ | | | | | - ಮಾಹಿತಿ ಕಳುಹಿಸಿಲ್ಲ - | | | | |
| 15. | ರಾಣೇಬೆನ್ನೂರು | 3460 - 2925 | 685 - 590 | 496 - 364 | 2820-1880 | 445-280 | 1781-1662 | 175-125 | 96-88 | |
| 16. | ರೋಣ | 100 - 160 | 30 - 10 | 10 - 10 | 160-150 | 20-15 | 10-15 | 110-100 | 25-15 | 15-17 |
| 17. | ಸವಣೂರು | 780-115 | 300 - 110 | 98 - 75 | 603-810 | 245-175 | 149-115 | 650-900 | 203-150 | 115-119 |
| 18. | ಶಿಗ್ಗಾಂವಿ | | | | | | | | | |
| 19. | ಶಿರಹಟ್ಟಿ | 76 - 48 | 21 - 16 | 03-09 | 64-27 | 32 - 13 | 08-12 | 58-32 | 39-21 | 11-09 |

## ಕೋಷ್ಟಕ 13.2 : ಮೂರು ವರ್ಷಗಳಿಗೆ ಜಿಲ್ಲೆಯ ಪ್ರಾಥಮಿಕ ಶಿಕ್ಷಕರ ಅಂಕಿಗಳು.

| ತಾಲೂಕು : ರೇಂಜು | 1991-92 | | | 1992-93 | | | 1993-94 | | |
|---|---|---|---|---|---|---|---|---|---|
| | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ |
| 1. ಬ್ಯಾಡಗಿ | 280 - 40 | 45 - 09 | 12 - 02 | 260-62 | 50-10 | 07-02 | 261-64 | 44 - 14 | 08-02 |
| 2. ಧಾರವಾಡ ತಾ: | 308 - 214 | 35 - 28 | 14 - 09 | 305-209 | 31 - 44 | 17 - 11 | 283 - 216 | 27-27 | 09-05 |
| 3. ಗದಗ ಶಹರ | 237 - 204 | 13 - 19 | 12 - 03 | 239-227 | 15 - 19 | 12 - 03 | 246-230 | 15-21 | 14-03 |
| 4. ಗದಗ ಗ್ರಾ | 347 - 49 | 43 - 15 | 25 - 06 | 351 - 52 | 42 - 10 | 20 - 03 | 336-64 | 46-09 | 24-05 |
| 5. ಹಾನಗಲ್ | 398-877 | 30-08 | ನೀಡಿಲ್ಲ | 385-60 | 39-14 | ನೀಡಿಲ್ಲ | 451-95 | 54-23 | ನೀಡಿಲ್ಲ |
| 6. ಹಾವೇರಿ | 377-138 | 31-09 | 08-02 | 372-137 | 38-08 | 07-04 | 412-149 | 41-12 | 09-05 |
| 7. ಹಿರೇಕೆರೂರು | 585-92 | 65-03 | 12-02 | 490-111 | 58-04 | 10-02 | 522-113 | 59-04 | 14-03 |
| 8. ಹು-ಧಾ ಮಹಾನಗರ | 443-1030 | 34-62 | 13-16 | 377-1105 | 43076 | 14-16 | 492-1084 | 45-72 | 19-24 |
| 9. ಹುಬ್ಬಳ್ಳಿ ತಾ: | 216-163 | 10-08 | 11-03 | 231-188 | 17-13 | 11-05 | 246-187 | 19-10 | 12-05 |
| 10. ಕಲಘಟಗಿ | 182-91 | 26-13 | 06-01 | 163-78 | 27-06 | 07-01 | 166-98 | 22-10 | 10-02 |
| 11. ಕುಂದಗೋಳ | 272-105 | 32-09 | 11-03 | 253-104 | 32-09 | 12-02 | 247-96 | 27-08 | 11-01 |
| 12. ಮುಂಡರಗಿ | 218-61 | 34-13 | 08-05 | 198-51 | 29-12 | 13-04 | 192-62 | 36-12 | 12-05 |
| 13. ನರಗುಂದ | 175-32 | 16-04 | 10-03 | 183-26 | 20-06 | 11-03 | 187-25 | 20-05 | 15-01 |
| 14. ನವಲಗುಂದ | 348-65 | 43-20 | 05-03 | 349-78 | 27-05 | 21-06 | 352-85 | 37-06 | 22-06 |
| 15. ರಾಣೇಬೆನ್ನೂರು | 530-140 | 45-21 | 21-05 | 536-146 | 40-21 | 16-07 | 555-179 | 32-15 | 48-16 |
| 16. ರೋಣ | 599-91 | 30-10 | 78-32 | 618-91 | 30-10 | 80-36 | 619-95 | 32-11 | 81-37 |
| 17. ಸವಣೂರು | 225-52 | 26-08 | 09- ಇಲ್ಲ | 213-45 | 24-09 | 10-02 | 206-64 | 27-11 | 11-02 |
| 18. ಶಿಗ್ಗಾಂವಿ | | | | | | | | | |
| 19. ಶಿರಹಟ್ಟಿ | 313-76 | 45-10 | 15-01 | 305-79 | 45-09 | 23-03 | 315-97 | 48-08 | 25-02 |

## ಕೋಷ್ಟಕ 13.3 : ಜಿಲ್ಲೆಯಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯ ಫಲಾನುಭವಿಗಳ ಸಂಖ್ಯೆ - ಮೂರು ವರ್ಷಗಳಿಗೆ

| | | 1991-92 | | | 1992-93 | | | 1993-94 | | |
|---|---|---|---|---|---|---|---|---|---|---|
| | ತಾಲೂಕು : ರೇಂಜು | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. |
| 1. | ಬ್ಯಾಡಗಿ | 3854-3146 | 1030-675 | 730-260 | 3705-2295 | 1031-691 | 717-253 | 6821-6456 | 967-745 | 1027-1073 |
| 2. | ಧಾರವಾಡ ತಾ: | 5660 | 1115 | 63 | 5440 | 1150 | 92 | 24888 | 2096 | 2027 |
| 3. | ಗದಗ ಶಹರ | | | | - ಉಪಹಾರ ಯೋಜನೆ ಇಲ್ಲ - | | | | | |
| 4. | ಗದಗ ಗ್ರಾ. | 2532-2068 | 543-281 | 67 - 35 | | - ಇಲ್ಲ - | | | | |
| 5. | ಹಾನಗಲ್ | 2434-2566 | 1580-1716 | ನೀಡಿಲ್ಲ | 2649-2351 | 510-446 | ನೀಡಿಲ್ಲ | 1997-1703 | 204-183 | ನೀಡಿಲ್ಲ |
| 6. | ಹಾವೇರಿ | 2717-1883 | 890-755 | 350-260 | 1062-928 | 416-364 | 317-296 | | - ಯೋಜನೆ ಇಲ್ಲ - | |
| 7. | ಹಿರೇಕೆರೂರು | 4420-3700 | 625-500 | 264-198 | 3391-2609 | 451-384 | 180-139 | - | ಯೋಜನೆ ಇಲ್ಲ - | |
| 8. | ಹು-ಧಾ ಮಹಾನಗರ | 8438-1562 | 1516-620 | 105-68 | 4581-4419 | 1508-1444 | 576-578 | | - ಯೋಜನೆ ಇಲ್ಲ - | |
| 9. | ಹುಬ್ಬಳ್ಳಿ ತಾ: | 547-543 | 57-46 | 28-14 | 1043-957 | 73-79 | 73-65 | 9489-8181 | 820-631 | 605-402 |
| 10. | ಕಲಘಟಗಿ | | | | | - ಮಾಹಿತಿ ಬಂದಿಲ್ಲ | | | | |
| 11. | ಕುಂದಗೋಳ | 3741-3259 | 725-560 | 767-530 | 2580-2420 | 568-538 | 505-480 | 8875-7791 | 834-721 | 1150-604 |
| 12. | ಮುಂಡರಗಿ | | | | | - ಮಾಹಿತಿ ನೀಡಿಲ್ಲ - | | | | |
| 13. | ನರಗುಂದ | 3427-2193 | 510-264 | 289 - 143 | 1749-1241 | 467-304 | 203-146 | 4213-3949 | 370-347 | 270-208 |
| 14. | ನವಲಗುಂದ | 2826-1786 | 1100-808 | 395-401 | 2073-1869 | 446-333 | 543-403 | 9440-8629 | 751-662 | 847-751 |
| 15. | ರಾಣೆಬೆನ್ನೂರು | 19600-12400 | 4452-3108 | 3695-2810 | 20100-11900 | 4280-3210 | 3860-3116 | 14862-12113 | 3220-2190 | 2896-2006 |
| 16. | ರೋಣ | 1200-800 | 300-378 | 100-68 | 1200-800 | 300-378 | 100-68 | 13782-11105 | 1205-967 | 1674-1559 |
| 17. | ಸವಣೂರು | 1750-1250 | 388-288 | 274-246 | 1149-851 | 147-108 | 20-08 | | - ಯೋಜನೆ ಇಲ್ಲ - | |
| 18. | ಶಿಗ್ಗಾಂವಿ | | | | | | | | | |
| 19. | ಶಿರಹಟ್ಟಿ | | | | | - ಉಪಹಾರ ಯೋಜನೆ ಇಲ್ಲ - | | | | |

## ಕೋಷ್ಟಕ 13.4 : ಜಿಲ್ಲೆಯಲ್ಲಿ ಮೂರು ವರ್ಗಗಳ ಉಚಿತ ಪಠ್ಯ ಪುಸ್ತಕ ವಿತರಣೆಯ ಅಂಕಿಗಳು

| | | 1991-92 | | | 1992-93 | | | 1993-94 | | |
|---|---|---|---|---|---|---|---|---|---|---|
| | ತಾಲೂಕು : ರೇಂಜು | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ |
| 1. | ಬ್ಯಾಡಗಿ | 3017-2008 | 2017-1000 | 1000-1008 | 2640-2065 | 1435-948 | 1205-1117 | 2344-2018 | 1206-952 | 1138-1066 |
| 2. | ಧಾರವಾಡ ತಾ: | ನೀಡಿಲ್ಲ | 1920-1510 | 1450-1140 | ನೀಡಿಲ್ಲ | 1450-1140 | 1147-875 | ನೀಡಿಲ್ಲ | 1452-1150 | 1148-901 |
| 3. | ಗದಗ ಶಹರ | 1556-1400 | 1193-989 | 178-224 | 1638-1498 | 1172-1034 | 258-263 | ನೀಡಿಲ್ಲ | 1188-1073 | 261-158 |
| 4. | ಗದಗ ಗ್ರಾ | 17043-11594 | 582-143 | 436-128 | 18237-13335 | 491-152 | 397-149 | 18958-13539 | 382-159 | 386-139 |
| 5. | ಹಾನಗಲ್ | - ಮಾಹಿತಿ ಸರಿಯಾಗಿ ನೀಡಿಲ್ಲ - | | | | | | | | |
| 6. | ಹಾವೇರಿ | 10615-8426 | 5065-3718 | 2719-1965 | 9196-6125 | 6033-4118 | 3163-4007 | 10847-7457 | 3069-1789 | 1510-1073 |
| 7. | ಹಿರೇಕೆರೂರು | - ಮಾಹಿತಿ ಸರಿಯಾಗಿ ನೀಡಿಲ್ಲ | | | | | | | | |
| 8. | ಹು-ಧಾ ಮಹಾನಗರ | 978-1178 | à ನೀಡಿಲ್ಲ - | 3123-2396 | - ನೀಡಿಲ್ಲ - | - ನೀಡಿಲ್ಲ - | | | | |
| 9. | ಹುಬ್ಬಳ್ಳಿ ತಾ: | ನೀಡಿಲ್ಲ | 960-776 | 502-350 | ನೀಡಿಲ್ಲ | 556-523 | 370-276 | ನೀಡಿಲ್ಲ | 1026-890 | 727-509 |
| 10. | ಕಲಘಟಗಿ | - ಮಾಹಿತಿ ಸರಿಯಾಗಿ ನೀಡಿಲ್ಲ - | | | | | | | | |
| 11. | ಕುಂದಗೋಳ | - ಮಾಹಿತಿ ಸರಿಯಾಗಿ ನೀಡಿಲ್ಲ - | | | | | | | | |
| 12. | ಮುಂಡರಗಿ | - ಮಾಹಿತಿ ಸರಿಯಾಗಿ ನೀಡಿಲ್ಲ - | | | | | | | | |
| 13. | ನರಗುಂದ | 2036-1972 | 893-685 | 528-351 | 1284-923 | 731-608 | 453-315 | 2292-1794 | 718-645 | 465-336 |
| 14. | ನವಲಗುಂದ | - ಮಾಹಿತಿ ಸರಿಯಾಗಿ ನೀಡಿಲ್ಲ | | | | | | | | |
| 15. | ರಾಣೆಬೆನ್ನೂರು | 10650-11580 | 3160-2990 | 2800-2150 | 11000-10900 | 3050-2860 | 2080-1865 | 12850-10310 | 3210-275 | 2680-1985 |
| 16. | ರೋಣ | 3020-2020 | - ನೀಡಿಲ್ಲ - | | 3450-2972 | - ನೀಡಿಲ್ಲ - | | 3675-3845 | - ನೀಡಿಲ್ಲ - | |
| 17. | ಸವಣೂರು | 1805-1160 | 905-503 | 900-577 | 1298-822 | 643-410 | 655-412 | 2421-1728 | 1761-1361 | 660-412 |
| 18 | ಶಿಗ್ಗಾಂವ್ | 1317-889 | 527-383 | 129-84 | 1776-1440 | 1314-1077 | 512-392 | 2696-2075 | 2075-830 | 621-453 |
| 19. | ಶಿರಹಟ್ಟಿ | 4735-3415 | 1741-1051 | 811-855 | 6039-5290 | 2011-1194 | 1342-1465 | 9649-7617 | 503-207 | 359-261 |

## ಕೋಷ್ಟಕ 13.5: ಜಿಲ್ಲೆಯಲ್ಲಿ ಮೂರು ವರ್ಷಗಳಿಗೆ ಉಚಿತ ಸಮವಸ್ತ್ರ ವಿತರಣೆಯ ವಿವರ.

| | 1991-92 | | | 1992-93 | | | 1993-94 | | |
|---|---|---|---|---|---|---|---|---|---|
| ತಾಲೂಕು : ರೇಂಜು | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. | ಒಟ್ಟು ಗಂ. ಹೆ. | ಪ.ಜಾತಿ ಗಂ. ಹೆ. | ಪ.ವರ್ಗ ಗಂ. ಹೆ. |
| 1. ಬ್ಯಾಡಗಿ | 2007-2008 | 1007-1008 | 1000-1000 | 2640-2065 | 1435-948 | 1205-1117 | | - ಸರಬರಾಜಾಗಿಲ್ಲ - | |
| 2. ಧಾರವಾಡ ತಾ: | ನೀಡಿಲ್ಲ | 1920-1510 | 1450-1140 | ನೀಡಿಲ್ಲ | 1450-1140 | 1147-875 | | ನೀಡಿಲ್ಲ | |
| 3. ಗದಗ ಶಹರ | 1099-1400 | 834-989 | 142-224 | 1156-1482 | 864-1034 | 163-263 | ನೀಡಿಲ್ಲ | 868-1073 | 156-158 |
| 4. ಗದಗ ಗ್ರಾ | | 638-338 | 369-298 | 2801 | 2462 | 769-375 | 331-304 | - ನೀಡಿಲ್ಲ - | |
| 5. ಹಾನಗಲ್ | | | | | - ಮಾಹಿತಿ ಸರಿಯಾಗಿ ನೀಡಿಲ್ಲ - | | | | |
| 6. ಹಾವೇರಿ | 5070-3880 | 2956-2253 | 2114-16267 | 6850-4550 | 3187-1524 | 1718-1426 | | - ಇಲ್ಲ - | |
| 7. ಹಿರೇಕೆರೂರು | 3960-3040 | 3267-2416 | 693-624 | 4113-3828 | 2003-1924 | 2110-1904 | 3931-3387 | 1979-1722 | 1852-1665 |
| 8. ಹು-ಧಾ ಮಹಾನಗರ | 6030-6770 | - ನೀಡಿಲ್ಲ - | | 4028-3784 | - ನೀಡಿಲ್ಲ - | | 3905-1360 | - ನೀಡಿಲ್ಲ - | |
| 9. ಹುಬ್ಬಳ್ಳಿ ತಾ: | - ಸರಬರಾಜಾಗಿಲ್ಲ - | | - ನೀಡಿಲ್ಲ - | | 871-830 | 502-420 | ನೀಡಿಲ್ಲ | 900-835 | 510-430 |
| 10. ಕಲಘಟಗಿ | | | | | - ಮಾಹಿತಿ ನೀಡಿಲ್ಲ - | | | | |
| 11. ಕುಂದಗೋಳ | | | | | - ಮಾಹಿತಿ ನೀಡಿಲ್ಲ - | | | | |
| 12. ಮುಂಡರಗಿ | | | | | - ಮಾಹಿತಿ ನೀಡಿಲ್ಲ - | | | | |
| 13. ನರಗುಂದ | 2816-1621 | 944-549 | 376-347 | 1450-1076 | 356-415 | 242-270 | 727-614 | 319-314 | 203-258 |
| 14. ನವಲಗುಂದ | 1722-1293 | 1100-808 | 395-401 | 2030-1610 | 1047-736 | 362-360 | 4260-3195 | 1376-954 | 683-565 |
| 15. ರಾಣೆಬೆನ್ನೂರು | 16500-12800 | 2985-2110 | 1730-1210 | 16800-11986 | 3250-2090 | 1680-1170 | 17666-13817 | 3180-2620 | 1450-3350 |
| 16. ರೋಣ | 11400-9490 | - ನೀಡಿಲ್ಲ - | | 13260-12150 | - ನೀಡಿಲ್ಲ - | | 15690-14110 | - ನೀಡಿಲ್ಲ - | |
| 17. ಸವಣೂರು | 1790-1210 | 800-660 | 990-550 | 1785-1230 | 855-660 | 930-570 | 2384-1852 | 1722-1382 | 662-470 |
| 18. ಶಿಗ್ಗಾಂವ್ | | | | | - ಮಾಹಿತಿ ನೀಡಿಲ್ಲ - | | | | |
| 19. ಶಿರಹಟ್ಟಿ | 4735-3415 | 1741-1051 | 811-855 | 6039-[illegible]290 | 2011-1194 | 1342-1465 | 9649-7617 | 503-207 | 359-261 |

**ಕೋಷ್ಟಕ 13.6 : ಜಿಲ್ಲೆಯಲ್ಲಿ 1993-94 ನೇ ಸಾಲಿಗೆ 1 ರಿಂದ 7 ನೇ ತರಗತಿಯಲ್ಲಿದ್ದ ಮಕ್ಕಳ ಸಂಖ್ಯೆ**

| ತಾಲೂಕು ರೇಂಜುಗಳು | ತರಗತಿ - 1 ಗಂ. | ತರಗತಿ - 1 ಹೆಂ. | ತರಗತಿ - 2 ಗಂ. | ತರಗತಿ - 2 ಹೆ. | ತರಗತಿ - 3 ಗಂ. | ತರಗತಿ - 3 ಹೆ. | ತರಗತಿ - 4 ಗಂ. | ತರಗತಿ - 4 ಹೆ. | ತರಗತಿ - 5 ಗಂ. | ತರಗತಿ - 5 ಹೆ. | ತರಗತಿ - 6 ಗಂ. | ತರಗತಿ - 6 ಹೆ. | ತರಗತಿ - 7 ಗಂ. | ತರಗತಿ - 7 ಹೆ. |
|---|---|---|---|---|---|---|---|---|---|---|---|---|---|---|
| 1. ಬ್ಯಾಡಗಿ | 1789 | 1786 | 1708 | 1743 | 1854 | 1651 | 1700 | 1510 | 1232 | 903 | 1024 | 658 | 839 | 604 |
| 2. ಧಾರವಾಡ ತಾ: | 4364 | 4301 | 3659 | 3576 | 3451 | 3130 | 2718 | 2181 | 2122 | 1527 | 1548 | 1137 | 1380 | 825 |
| 3. ಗದಗ ಶಹರ | 1997 | 1689 | 2034 | 1881 | 1935 | 1727 | 1921 | 1609 | 1766 | 1364 | 1380 | 1229 | 1197 | 1037 |
| 4. ಗದಗ ತಾ: | 2647 | 2606 | 2735 | 2464 | 2768 | 2270 | 2216 | 1830 | 1836 | 1240 | 1426 | 863 | 1142 | 694 |
| 5. ಹಾನಗಲ್ | 3806 | 3109 | 3444 | 2998 | 3218 | 3117 | 2564 | 2505 | 1802 | 1396 | 1233 | 1210 | 1040 | 932 |
| 6. ಹಾವೇರಿ | 3929 | 3891 | 3607 | 3338 | 3731 | 3206 | 3089 | 2423 | 2243 | 1772 | 1553 | 1492 | 1425 | 1154 |
| 7. ಹಿರೇಕೆರೂರು | 3053 | 3050 | 3106 | 3007 | 3158 | 2883 | 2755 | 2328 | 2195 | 1837 | 1731 | 1417 | 1457 | 1162 |
| 8. ಹು-ಧಾಮಹಾನಗರ | 7704 | 6964 | 7550 | 6839 | 8820 | 6851 | 7044 | 6519 | 6698 | 6027 | 5791 | 5295 | 5143 | 4552 |
| 9. ಹುಬ್ಬಳ್ಳಿ ತಾ: | 2561 | 2546 | 2723 | 2359 | 2700 | 2542 | 2400 | 2291 | 2030 | 1941 | 1540 | 1380 | 1359 | 1045 |
| 10. ಕಲಘಟಗಿ | 2404 | 2244 | 2024 | 1873 | 1651 | 1531 | 1465 | 1181 | 1137 | 771 | 838 | 548 | 700 | 431 |
| 11 ಕುಂದಗೋಳ | 3369 | 2157 | 2275 | 2200 | 2173 | 2064 | 2049 | 1790 | 1574 | 1442 | 1178 | 929 | 973 | 757 |
| 12 ಮುಂಡರಗಿ | 1213 | 1314 | 1754 | 1645 | 1641 | 1470 | 1363 | 1142 | 985 | 717 | 695 | 540 | 778 | 466 |
| 13. ನರಗುಂದ | 1365 | 1235 | 1398 | 1286 | 1280 | 1073 | 988 | 812 | 876 | 548 | 666 | 395 | 562 | 321 |
| 14. ನವಲಗುಂದ | 2182 | 2236 | 2620 | 2432 | 2371 | 2195 | 2168 | 1835 | 1622 | 1215 | 1305 | 918 | 1045 | 693 |
| 15. ರಾಣಿಬೆನ್ನೂರು | 3519 | 3261 | 4287 | 3756 | 4150 | 4195 | 3623 | 2943 | 2887 | 2234 | 2636 | 1773 | 2098 | 1296 |
| 16. ರೋಣ | 3383 | 3245 | 3310 | 3102 | 3251 | 2894 | 3076 | 2679 | 2343 | 1796 | 1700 | 1061 | 1398 | 854 |
| 17. ಸವಣೂರು | 2386 | 2444 | 2007 | 1692 | 2039 | 1616 | 1524 | 1189 | 1094 | 755 | 823 | 608 | 660 | 382 |
| 18. ಶಿಗ್ಗಾಂವಿ | 2176 | 2404 | 2170 | 2418 | 2169 | 2066 | 1802 | 1720 | 1062 | 1105 | 1041 | 965 | 813 | 688 |
| 19. ಶಿರಹಟ್ಟಿ | 3023 | 2899 | 2718 | 2464 | 2528 | 2193 | 2245 | 1757 | 1881 | 1475 | 1306 | 953 | 1098 | 818 |
| ಒಟ್ಟು | 56870 | 53381 | 55129 | 51073 | 54888 | 48676 | 46710 | 40244 | 37385 | 30065 | 29414 | 23371 | 25108 | 18711 |

ಹೈಸ್ಕೂಲ್ ಪ್ರಿನ್ಸಿಪಾಲರಾಗಿ (1870-83) ಸೇವೆ ಸಲ್ಲಿಸುವುದರ ಜೊತೆ ವಿದ್ಯಾವರ್ಧಕ ಸಂಘದ ಅಧ್ಯಕ್ಷರೂ ಆಗಿದ್ದರು. 1883-84 ರಲ್ಲಿ ಕಿಟೆಲ್ ಇದರ ಪ್ರಿನ್ಸಿಪಾಲರಾಗಿದ್ದರು. ಟಿ.ಎಸ್. ವೆಂಕಟಯ್ಯನವರು ಮುಂದೆ ಈ ಶಾಲೆಯಲ್ಲಿ ಕೆಲಕಾಲ ಕನ್ನಡ ಅಧ್ಯಾಪಕರಾಗಿ ದುಡಿದರು. ಇದಲ್ಲದೆ 1945 ರಲ್ಲಿ ಧಾರವಾಡದಲ್ಲಿ ಬಾಲಕಿಯರ ಪ್ರೌಢಶಾಲೆ, 1947 ರಲ್ಲಿ ಟ್ರೇನಿಂಗ್ ಶಾಲೆಯನ್ನೂ ಇವರು ತೆರೆದರು.

## ಪ್ರೌಢ ಶಿಕ್ಷಣ

ಬಾಸೆಲ್‌ಮಿಷನ್ ಜಿಲ್ಲೆಯ ಪ್ರಥಮ ಪ್ರೌಢಶಾಲೆಯನ್ನು 1863 ರಲ್ಲಿ ಧಾರವಾಡದಲ್ಲಿ ಸ್ಥಾಪಿಸಿತು. ಜಮಖಂಡಿ ಸಂಸ್ಥಾನಕ್ಕೆ ಸೇರಿದ ಕುಂದಗೋಳದಲ್ಲಿ 1877 ರಲ್ಲಿ ಹರಭಟ್ ಪ್ರೌಢಶಾಲೆ ಸ್ಥಾಪನೆಯಾಯಿತು. ಮುಂದೆ ಧಾರವಾಡದ ಕಾಮನಕಟ್ಟೆಯಲ್ಲಿ 1882ರಲ್ಲಿ ವಿಕ್ಟೋರಿಯಾ ಹೈಸ್ಕೂಲು ಆರಂಭವಾಯಿತು. (ಸ್ವಾತಂತ್ರ್ಯಾನಂತರ ಇದರ ಹೆಸರು 'ವಿದ್ಯಾರಣ್ಯ ಹೈಸ್ಕೂಲು' ಎಂದಾಯಿತು). ಇದರ ಪ್ರಾರಂಭಿಕ ಸದಸ್ಯರಾದ ಶಂಭುರಾವ್ ಕಿರ್ಲೋಸ್ಕರ್, ಕೃಷ್ಣರಾವ್ ಗದಗ್‌ಕರ್ ಹಾಗೂ ಹನುಮಂತಾಚಾರ್ಯ ಮೊರಬ ಇವರು ಸೇರಿ, 1901 ರಲ್ಲಿ 'ಕರ್ನಾಟಕ ಎಜುಕೇಷನ್ ಸೊಸೈಟಿ' ಸ್ಥಾಪಿಸಿ, ವಿಕ್ಟೋರಿಯಾ ಹೈಸ್ಕೂಲನ್ನು ಇದರ ಆಡಳಿತಕ್ಕೆ ಒಳಪಡಿಸಿಕೊಂಡರು. 1912ರಲ್ಲಿ ಹುಕ್ಕೇರಿಕರ್ ರಾಮರಾಯರು ಈ ಶಾಲೆಯ ಮುಖ್ಯೋಪಾಧ್ಯಾಯರಾದರು. ಬೇಂದ್ರೆ, ದಿವಾಕರ್, ಶಂ.ಬಾ.ಜೋಶಿ ಇಲ್ಲಿ ಅಧ್ಯಾಪಕರಾಗಿ ಇದ್ದರು. ಹುಬ್ಬಳ್ಳಿಯಲ್ಲಿ ಸೆಂಟ್ ಮೇರಿಸ್ ಪ್ರೌಢಶಾಲೆ 1890 ರಲ್ಲಿ, ಹಾವೇರಿಯಲ್ಲಿ ಮುನಿಸಿಪಲ್, ಧಾರವಾಡದಲ್ಲಿ ವಿದ್ಯಾರಣ್ಯ, ಕರ್ನಾಟಕ ಹಾಗೂ ಕೆ.ಇ. ಬೋರ್ಡ್ ಹೈಸ್ಕೂಲು ಹೀಗೆ ಮೂರು ಶಿಕ್ಷಣ ಸಂಸ್ಥೆಗಳು ಕೆ.ಇ. ಬೋರ್ಡ್‌ನ ಆಡಳಿತಕ್ಕೆ ಸೇರಿದ್ದು ಸ್ವಾತಂತ್ರ್ಯಯೋಧ ಡಾ|| ಎನ್.ಬಿ. ಕಬ್ಬೂರರು ಈ ಸಂಸ್ಥೆಯ ಅಧ್ಯಕ್ಷರಾಗಿ ದೀರ್ಘಕಾಲ ದುಡಿದರು. ತದನಂತರ ರಾಜ್ಯ ಪುನರ್ವಿಂಗಡಣೆಯವರೆಗೆ ಪ್ರಾರಂಭವಾದ ಪ್ರೌಢಶಾಲೆಗಳೆಂದರೆ - ಲ್ಯಾಮಿಂಗ್‌ಟನ್ ಹೈಸ್ಕೂಲು ಹುಬ್ಬಳ್ಳಿ (1904), ನ್ಯೂ ಇಂಗ್ಲಿಷ್ ಪ್ರೌಢಶಾಲೆ, ಹುಬ್ಬಳ್ಳಿ (1909), ಕಾನ್ವೆಂಟ್ ಪ್ರೌಢಶಾಲೆ, ಹುಬ್ಬಳ್ಳಿ (1911), ಆಂಗ್ಲೋ-ಉರ್ದು ಹೈಯರ್ ಸೆಕೆಂಡರಿ ಶಾಲೆ, ಹುಬ್ಬಳ್ಳಿ (1917), ಆರ್.ಎಲ್.ಎಸ್. ಹೈಸ್ಕೂಲು ಧಾರವಾಡ (1922), ಕೆ.ಇ. ಬೋರ್ಡ್ ಪ್ರೌಢಶಾಲೆ, ಧಾರವಾಡ (1936), ಸಿಟಿ ಹೈಸ್ಕೂಲ್, ಹುಬ್ಬಳ್ಳಿ (1937), ಕಲ್ಮೇಶ್ವರ ಪ್ರೌಢಶಾಲೆ, ಹೊಳೆ ಆಲೂರು (1941), ಮಾಮಲೆದೇಸಾಯಿ ಪ್ರೌಢಶಾಲೆ, ಶಿಗ್ಗಾಂವಿ (1946), ಪಿ.ಎಸ್.ಬಿ.ಡಿ. ಹೆಣ್ಣು ಮಕ್ಕಳ ಪ್ರೌಢಶಾಲೆ, ಲಕ್ಷ್ಮೇಶ್ವರ (1946), ಆರ್.ವಿ. ಪ್ರೌಢಶಾಲೆ, ನರೇಗಲ್ (1946), ಜಗದ್ಗುರು ಗಂಗಾಧರ ಪ್ರೌಢಶಾಲೆ, ಹುಬ್ಬಳ್ಳಿ (1946), ಮಾಡೆಲ್ ಪ್ರೌಢಶಾಲೆ, ಗದಗ-ಬೆಟಗೇರಿ (1946), ಫಾತಿಮಾ ಪ್ರೌಢಶಾಲೆ, ಹುಬ್ಬಳ್ಳಿ (1948), ಡಿ.ಆರ್. ತಂಬಾಕದ ಪ್ರೌಢಶಾಲೆ, ಹಿರೇಕೆರೂರು (1952), ಬಾಸೆಲ್ ಮಿಷನ್ ಹೈಯರ್ ಸೆಕೆಂಡರಿ ಸ್ಕೂಲ್, ಹುಬ್ಬಳ್ಳಿ (1953), ಹಾಗೂ ಸರಕಾರಿ ಪ್ರೌಢಶಾಲೆ, ಕರಜಗಿ (1955). (ಮೇಲ್ಕಂಡ ಪಟ್ಟಿಯಲ್ಲಿ ತಮ್ಮ ಶಾಲೆಯ ಸ್ಥಾಪನಾ ವರ್ಷವನ್ನು ಅಥವಾ ಯಾವುದೇ ಮಾಹಿತಿಯನ್ನು ಕಳುಹಿಸದ ಶಾಲೆಗಳನ್ನು ಸೇರಿಸಿಲ್ಲ). ಈ ಶತಮಾನದ ಆರಂಭಕ್ಕೆ ಜಿಲ್ಲೆಯ ಮೂರು ಬ್ರಿಟಿಷ್ ತಾಲೂಕುಗಳಲ್ಲಿ ಪ್ರೌಢಶಾಲೆಗಳಿದ್ದು, ಅವುಗಳಲ್ಲಿ ಒಟ್ಟು 637 ವಿದ್ಯಾರ್ಥಿಗಳಿದ್ದರು. ಈ ಶಾಲೆಗಳ ಪೈಕಿ ಒಂದು ಸರಕಾರಿ ಶಾಲೆಯಾಗಿದ್ದು (ಧಾರವಾಡ) ಅದರಲ್ಲಿ 247 ವಿದ್ಯಾರ್ಥಿಗಳಿದ್ದರು. ಉಳಿದ ಎರಡು ಶಾಲೆಗಳಲ್ಲಿ ಒಂದು ಅನುದಾನಿತ ಶಾಲೆಯಾಗಿದ್ದರೆ ಮತ್ತೊಂದು ಅನುದಾನರಹಿತ ಶಾಲೆಯಾಗಿತ್ತು. 1913, 1917, 1919 ಹಾಗೂ 1920ರಲ್ಲಿ ತಲಾ ಒಂದೊಂದು ಪ್ರೌಢಶಾಲೆ ಪ್ರಾರಂಭವಾಗಿ, ಅವುಗಳಲ್ಲಿ 1920ರಲ್ಲಿ ಒಟ್ಟು 2,604 ವಿದ್ಯಾರ್ಥಿಗಳಿದ್ದರು. ಧಾರವಾಡದ ಶಿಕ್ಷಣ ಕ್ಷೇತ್ರದಲ್ಲಿ ಎಸ್.ಎಸ್. ಬಸವನಾಳರು ಸಲ್ಲಿಸಿದ ಸೇವೆ ಗಣ್ಯವಾದುದು. ದೀರ್ಘಕಾಲ ಅವರು ಧಾರವಾಡದ ಆರ್.ಎಲ್.ಎಸ್. ಹೈಸ್ಕೂಲಿನ ಪ್ರಿನ್ಸಿಪಾಲರಾಗಿದ್ದು ಸಾಹಿತ್ಯ, ಸಹಕಾರ ರಂಗಗಳಲ್ಲೂ ದುಡಿದರು.

ರಾಜ್ಯ ಏಕೀಕರಣಕ್ಕೆ ಮೊದಲು ಪ್ರೌಢಶಿಕ್ಷಣದ ಪರೀಕ್ಷಾ ಮಂಡಳಿಯ ಕಾರ್ಯಾಲಯ ಪುಣೆಯಲ್ಲಿ ಇತ್ತು. ಪ್ರೌಢಶಾಲೆಗಳಲ್ಲಿ ಒಂದರಿಂದ ಏಳರವರೆಗೆ ತರಗತಿಗಳಿದ್ದು, ಮೊದಲ ಮೂರು ತರಗತಿಗಳನ್ನು ಮಾಧ್ಯಮಿಕ ಎಂದೂ, ನಂತರದ ನಾಲ್ಕನ್ನು ಪ್ರೌಢ ತರಗತಿಗಳೆಂದೂ ಪರಿಗಣಿಸಲಾಗುತ್ತಿತ್ತು. 1938 ರ ವರೆಗೆ ಶಿಕ್ಷಣ ಮಾಧ್ಯಮದ ಭಾಷೆ ಇಂಗ್ಲಿಷ್ ಆಗಿದ್ದು, ನಂತರ ಪ್ರಾಂತೀಯ ಭಾಷೆಗಳೂ ಮಾಧ್ಯಮ ಭಾಷೆಗಳಾದವು. ಶಿರಹಟ್ಟಿಯಲ್ಲಿ 1954 ರಲ್ಲಿ ಡಬಾಲಿ ಹೈಸ್ಕೂಲು ಸ್ಥಾಪನೆಯಾಗಿ, 1958 ರಲ್ಲಿ ಅದು ಕೃಷಿ ವಿಷಯ ಬೋಧಿಸಲ್ಪಡುವ ವಿವಿಧೋದ್ದೇಶ ಶಾಲೆಯಾಯಿತು.

1952-53 ನೇ ಸಾಲಿಗೆ ಜಿಲ್ಲೆಯಲ್ಲಿ ಒಟ್ಟು 43 ಪ್ರೌಢಶಾಲೆಗಳಿದ್ದು, ಇವುಗಳಲ್ಲಿ ಎರಡು ಕೇಂದ್ರ ಸರಕಾರದ ಆಡಳಿತಕ್ಕೆ ಒಳಪಟ್ಟಿದ್ದರೆ ಐದು ಶಾಲೆಗಳು ಹೆಣ್ಣುಮಕ್ಕಳಿಗಾಗಿಯೇ ಇದ್ದವು. ಇದರಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರ ಆಡಳಿತದಲ್ಲಿದ್ದ ಒಂದು ತಾಂತ್ರಿಕ ಪ್ರೌಢಶಾಲೆಯೂ ಸೇರಿತ್ತು. ಮುಂಬೈ ರಾಜ್ಯದಲ್ಲಿ ಎಂಟರಿಂದ ಹನ್ನೊಂದನೇಯ ತರಗತಿಗಳು ಹೈಸ್ಕೂಲ್ ತರಗತಿಗಳಾಗಿದ್ದವು. ಏಳನೇಯ ತರಗತಿಯ ಮೂಲ್ಕಿ ಪರೀಕ್ಷೆ ಪಾಸಾದವರು ಹೈಸ್ಕೂಲು ಸೇರಿ ಮುಂದೆ ನಾಲ್ಕು ವರ್ಷದಲ್ಲಿ ಎಸ್.ಎಸ್.ಸಿ. ಪರೀಕ್ಷೆಗೆ ಹಾಜರಾಗುತ್ತಿದ್ದರು. ರಾಜ್ಯ ಪುನರ್ಘಟನೆಯ ನಂತರ, 1970-71 ರಿಂದ ಹೈಸ್ಕೂಲು ವರ್ಗಗಳು 8, 9 ಮತ್ತು 10 ಕ್ಕೆ ಮಿತವಾಗಿ, ಎರಡು ವರ್ಷದ ಕಾಲೇಜ್ ಪೂರ್ವ ತರಗತಿಗಳನ್ನು (ಪಿ.ಯು.ಸಿ) ಜಾರಿ ಮಾಡಿದರು. ಜಿಲ್ಲೆಯಲ್ಲಿ 1993-94 ನೇ ಸಾಲಿಗೆ ಒಟ್ಟು 480 ಪ್ರೌಢಶಾಲೆಗಳಿದ್ದವು. ಈ ಶಾಲೆಗಳಿಂದ ಇತ್ತೀಚಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಫಲಿತಾಂಶಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ 13.7: 1990 ರಿಂದ 1994 ರವರೆಗೆ ಧಾರವಾಡ ಜಿಲ್ಲೆಯ ನಾಲ್ಕು ವರ್ಷಗಳ ಎಸ್ಸೆಸ್ಸೆಲ್ಸಿ ಫಲಿತಾಂಶ ವಿವರ.**

| ವರ್ಷ | ಪರೀಕ್ಷೆಗೆ ಕುಳಿತವರು | | | ತೇರ್ಗಡೆಯಾದವರು | | | ಶೇಕಡಾ ಫಲಿತಾಂಶ |
|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | |
| 1990-91 ಏಪ್ರಿಲ್ | 21,819 | 10,248 | 32,067 | 15,243 | 7,591 | 22,834 | 71.20 |
| 1990-91 ಅಕ್ಟೋಬರ್ | 3,169 | 1,073 | 4,242 | 634 | 283 | 917 | 21.61 |
| 1991-92 ಏಪ್ರಿಲ್ | 23,293 | 11,012 | 34,305 | 16,777 | 8,412 | 25,189 | 73.42 |
| 1991-92 ಅಕ್ಟೋಬರ್ | 2,605 | 882 | 3,487 | 746 | 302 | 1,048 | 30.05 |
| 1992-93 | | | | | | | |
| ಏಪ್ರಿಲ್ ಓಲ್ಡ್ ಸ್ಕೀಂ | 21,725 | 11,288 | 33,013 | 14,727 | 8,434 | 23,070 | 69.88 |
| ನ್ಯೂ ಸ್ಕೀಂ | 4,411 | 1,376 | 5,787 | 1,238 | 627 | 1,865 | 21.58 |
| 1992-93 | | | | | | | |
| ಅಕ್ಟೋಬರ್ ಓಲ್ಡ್ ಸ್ಕೀಂ | 2,463 | 884 | 3,347 | 403 | 175 | 578 | 17.26 |
| ನ್ಯೂ ಸ್ಕೀಂ | 1,381 | 395 | 1,776 | 234 | 72 | 306 | 17.22 |
| 1993-94 | | | | | | | |
| ಏಪ್ರಿಲ್ ಓಲ್ಡ್ ಸ್ಕೀಂ | 26,535 | 13,048 | 39,583 | 15,892 | 8,607 | 24,499 | 61.89 |
| ನ್ಯೂ ಸ್ಕೀಂ | 2,232 | 674 | 2,906 | 613 | 229 | 842 | 29.97 |
| 1993-94 | | | | | | | |
| ಅಕ್ಟೋಬರ್ ಓಲ್ಡ್ ಸ್ಕೀಂ | 4,574 | 1,748 | 6,322 | 1,168 | 563 | 1,731 | 27.38 |
| ನ್ಯೂ ಸ್ಕೀಂ | 741 | 243 | 984 | 193 | 73 | 266 | 27.03 |

**ನವೋದಯ ವಿದ್ಯಾಲಯ** : ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವತಿಯಿಂದ ನೂತನ ಶಿಕ್ಷಣ ನೀತಿಯಡಿ 1986 ರಲ್ಲಿ ನವೋದಯ ವಿದ್ಯಾಲಯಗಳು ಜಿಲ್ಲೆಗೊಂದರಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರಾರಂಭವಾದವು.

ಧಾರವಾಡದಲ್ಲಿ ಈ ಸಂಸ್ಥೆ 1987ರಲ್ಲಿ 63 ವಿದ್ಯಾರ್ಥಿಗಳು ಮತ್ತು ಐದು ಮಂದಿ ಬೋಧಕ ಸಿಬ್ಬಂದಿಯೊಂದಿಗೆ ಪ್ರಾರಂಭವಾಯಿತು. ಸಹ ಶಿಕ್ಷಣ ನೀಡುವ ಈ ಶಾಲೆಗಳಲ್ಲಿ ವಸತಿ ಸೌಕರ್ಯ ಸಹ ಲಭ್ಯವಿದ್ದು, ಆರರಿಂದ ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ನೀಡಲಾಗುವುದು. ಗ್ರಾಮೀಣ ಮಕ್ಕಳಿಗೆ ಪ್ರವೇಶದಲ್ಲಿ ಆದ್ಯತೆ ಇದ್ದು, ಪ್ರವೇಶ ಬಯಸುವ ಮಕ್ಕಳು ಒಂದು ಪ್ರವೇಶ ಪರೀಕ್ಷೆ ಪಾಸು ಮಾಡಬೇಕಾಗುವುದು. ಮಕ್ಕಳ ಅನುಕೂಲಕ್ಕಾಗಿ ಮೊದಲೆರಡು ವರ್ಷ ಅವರ ಪ್ರಾಂತೀಯ ಭಾಷೆಯಲ್ಲಿ ಶಿಕ್ಷಣ ನೀಡಲಾಗುವುದು. ನಂತರ ಹಿಂದಿ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಮುಂದುವರೆಯುವುದು. ಧಾರವಾಡದ ಸರ್ವೋದಯ ಶಾಲೆಯಲ್ಲಿ 1993-94ನೇ ಸಾಲಿಗೆ ಒಟ್ಟು 475 ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಅವರಲ್ಲಿ 143 ಹೆಣ್ಣು ಮಕ್ಕಳಿದ್ದರು. ಇವರಲ್ಲಿ 78 ಪರಿಶಿಷ್ಟ ಜಾತಿ ಮತ್ತು 33 ಪರಿಶಿಷ್ಟ ವರ್ಗ ಹೆಣ್ಣು ಮಕ್ಕಳಿದ್ದು, ಈ ವರ್ಗಗಳ ಗಂಡು ಮಕ್ಕಳಿರಲಿಲ್ಲ. ಇದೇ ವರ್ಷಕ್ಕೆ ಬೋಧಕ ಸಿಬ್ಬಂದಿ ಸಂಖ್ಯೆ ಒಟ್ಟು 20 ಆಗಿದ್ದು ಇದರಲ್ಲಿ ಒಟ್ಟು ಒಂಬತ್ತು ಮಹಿಳೆಯರಿದ್ದರು.

## ಸ್ತ್ರೀ ಶಿಕ್ಷಣ

ಕಳೆದ ಶತಮಾನದ ಅಂತ್ಯಕ್ಕೆ ಶೇಕಡಾ ತೊಂಬತ್ತೈದು ಮಂದಿ ಹೆಣ್ಣುಮಕ್ಕಳಿಗೆ ಸಾಂಸಾರಿಕ ಮತ್ತು ಸಾಮಾಜಿಕ ಕಾರಣಗಳಿಂದ ಶಿಕ್ಷಣ ದೊರೆಯುತ್ತಿರಲಿಲ್ಲ. ಉಳಿದ ಶೇಕಡಾ ಐದರಷ್ಟು ಮಂದಿಗೆ ದೊರೆತ ಶಿಕ್ಷಣ ಸಾಮಾನ್ಯವಾಗಿ ಪ್ರಾಥಮಿಕ ಹಂತಕ್ಕೆ ಸೀಮಿತವಾಗುತ್ತಿತ್ತು. ಈ ಶತಮಾನದ ಆದಿಯಲ್ಲಿ ಪಾಶ್ಚಿಮಾತ್ಯ ಪ್ರಭಾವದಿಂದ ಶಿಕ್ಷಣದ ಪ್ರಾಮುಖ್ಯತೆಯ ಅರಿವಾಗಿ, ಪಾಶ್ಚಿಮಾತ್ಯ ಶಿಕ್ಷಣದೆಡೆಗೆ ಒಲವು ಮೂಡಿತು. ಹೆಣ್ಣು ಮಕ್ಕಳಿಗಾಗಿಯೇ ಪ್ರಾಥಮಿಕ ಹಂತದಿಂದ ಪ್ರೌಢ ಹಂತದವರೆಗೆ ಪ್ರತ್ಯೇಕ ಶಾಲೆಗಳು ತೆರೆಯಲ್ಪಟ್ಟವು. ಪ್ರಾರಂಭದಲ್ಲಿ ಪ್ರತೀ ಶಾಲೆಯಲ್ಲಿ ಐದರಿಂದ ಹತ್ತು ಹೆಣ್ಣು ಮಕ್ಕಳು ಮಾತ್ರ ದಾಖಲಾಗಿ, 1930ರ ನಂತರ ಇವರ ಸಂಖ್ಯೆಯಲ್ಲಿ ಹೆಚ್ಚಳ ಕಂಡಿತು. ಸಹ ಶಿಕ್ಷಣಕ್ಕೆ ಹಲವಾರು ಮಂದಿ ವಿರೋಧ ವ್ಯಕ್ತಪಡಿಸುತ್ತಿದ್ದುದೂ ಈ ಶಾಲೆಗಳ ಜನಪ್ರಿಯತೆಗೆ ಪ್ರಮುಖ ಕಾರಣವಾಗಿತ್ತು. ಸ್ತ್ರೀ ಶಿಕ್ಷಣದ ಬಗ್ಗೆ ಸಮಾಜದಲ್ಲಿ ಜಾಗೃತಿ ಉಂಟಾದ ಮೇಲೆ ಇವರಿಗಾಗಿ ಕಾಲೇಜುಗಳೂ ಪ್ರಾರಂಭವಾದವು.

ಜಿಲ್ಲೆಯಲ್ಲಿ ಬಾಸೆಲ್ ಮಿಷನ್ನಿನ ಪಾದ್ರಿಗಳು ಹೆಣ್ಣು ಮಕ್ಕಳಿಗಾಗಿಯೇ ಪ್ರಾರಂಭಿಸಿದ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳು ಸ್ತ್ರೀ ಶಿಕ್ಷಣಕ್ಕೆ ಉತ್ತೇಜನ ನೀಡಿದವು. ಧಾರವಾಡದಲ್ಲಿ ಮೊಟ್ಟಮೊದಲ ಬಾಲಕಿಯರ ಶಾಲೆ 1867 ರಲ್ಲಿ ಪ್ರಾರಂಭವಾಯಿತು. ಇದೇ ವರ್ಷ ಹಾನಗಲ್‌ನಲ್ಲಿಯೂ ಹೆಣ್ಣುಮಕ್ಕಳ ಪ್ರಾಥಮಿಕಶಾಲೆ ಪ್ರಾರಂಭವಾಯಿತು. ಮುಂದಿನ ಆರು ವರ್ಷಗಳಲ್ಲಿ ಬಾಲಕಿಯರ ಶಾಲೆಗಳ ಸಂಖ್ಯೆ 11ಕ್ಕೆ ಏರಿ, ಇವುಗಳಲ್ಲಿ ಒಟ್ಟು 429 ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಇವುಗಳಲ್ಲಿ ಎರಡು ಬಾಸೆಲ್ ಮಿಷನ್ನಿನಿಂದ ನಡೆಸಲ್ಪಡುತ್ತಿದ್ದು, ಉಳಿದವು ಸರಕಾರೀ ಶಾಲೆಗಳಾಗಿದ್ದವು. 1880ರ ವೇಳೆಗೆ ಶಾಲೆಗಳ ಸಂಖ್ಯೆ 20 ಮತ್ತು ವಿದ್ಯಾರ್ಥಿನಿಯರ ಸಂಖ್ಯೆ 979 ಆಯಿತು. ಮೂರು ವರ್ಷಗಳ ತರುವಾಯ ಒಟ್ಟು ಶಾಲೆಗಳು 24 ಆಗಿದ್ದು, ಇದರಲ್ಲಿ 17 ಸರಕಾರಿ, ಮೂರು ಮಿಷನ್ ಹಾಗೂ ನಾಲ್ಕು ಎಸ್ಟೇಟ್ ಶಾಲೆಗಳಾಗಿದ್ದವು. 1882ರಲ್ಲಿ ಸವಣೂರು ಮತ್ತು ಲಕ್ಷ್ಮೇಶ್ವರಗಳಲ್ಲಿನ ಹೆಣ್ಣುಮಕ್ಕಳ ಶಾಲೆಗಳಲ್ಲಿ ತಲಾ 50 ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಇವು ದಕ್ಷಿಣ ಪ್ರಾಂತ್ಯಕ್ಕೇ ಹೆಸರುವಾಸಿ ಶಾಲೆಗಳಾಗಿದ್ದವು. 1895ರ ವೇಳೆಗೆ ಉಪಾಧ್ಯಾಯಿನಿಯರ ತರಬೇತಿಗಾಗಿ ಹೆಣ್ಣು ಮಕ್ಕಳ ನಾರ್ಮಲ್ ಶಾಲೆಯಾಗಿ ಪ್ರಾರಂಭವಾದ ಹೆಣ್ಣುಮಕ್ಕಳ ಸರಕಾರಿ ಟ್ರೈನಿಂಗ್ ಕಾಲೇಜು ಇಂದಿಗೂ ಉತ್ತಮ ಸೇವೆ ಸಲ್ಲಿಸುತ್ತಿದೆ. ಈಗ ವಿಶ್ವವಿದ್ಯಾಲಯದ ಪಬ್ಲಿಕ್ ಸ್ಕೂಲ್ ಆಗಿರುವ ಸಂಸ್ಥೆಯೂ ದೀರ್ಘಕಾಲ ವಿದ್ಯಾರ್ಥಿನಿಯರಿಗೇ ಮೀಸಲಾದ ಆ್ಯಂಗ್ಲೋ-ಕರ್ನಾಟಕ್ ಗರ್ಲ್ಸ್ ಹೈಸ್ಕೂಲು ಎಂಬ ಹೆಸರಲ್ಲಿ (1977-78 ರವರೆಗೆ) ಧಾರವಾಡದಲ್ಲಿ ನಡೆಯುತ್ತಿತ್ತು. ಇವಲ್ಲದೆ ಜಿಲ್ಲೆಯಲ್ಲಿ ಮಹಿಳಾ ಶಿಕ್ಷಣಕ್ಕಾಗಿ ಪ್ರಶಿಕ್ಷಣ ಕೇಂದ್ರಗಳು, ವನಿತಾ ಸೇವಾ ಸಮಾಜದಂತಹ ಸಂಸ್ಥೆಗಳು, ಕರ್ನಾಟಕ ಟೈಲರಿಂಗ್ ಕಾಲೇಜು, ಮಾಡರ್ನ್ ಟೈಲರಿಂಗ್ ಕ್ಲಾಸ್‌ಗಳಂತಹ ವೃತ್ತಿ ಶಿಕ್ಷಣ ಕೇಂದ್ರಗಳು, ಕೈಗಾರಿಕಾ ತರಬೇತಿ ಕೇಂದ್ರಗಳು ಅಧಿಕ ಸಂಖ್ಯೆಯಲ್ಲಿ ಕಾರ್ಯ ಪ್ರವೃತ್ತವಾಗಿವೆ. ಅವುಗಳನ್ನು ಆಯಾಯ ವಿಭಾಗಗಳಡಿಯಲ್ಲಿ ಚರ್ಚಿಸಲಾಗಿದೆ.

## ಖಾಸಗಿ ಶಿಕ್ಷಣ ಸಂಸ್ಥೆಗಳು

ಹಲವಾರು ಖಾಸಗಿ ಸಂಸ್ಥೆಗಳು ಶಾಲಾ ಕಾಲೇಜುಗಳನ್ನು ತೆರೆಯುವ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಮಹತ್ತರ ಸೇವೆ ಸಲ್ಲಿಸಿವೆ. ಗಿಲಗಂಚಿ ಗುರುಸಿದ್ದಪ್ಪ ಹಾಗೂ ಅರಟಾಳ ರುದ್ರಗೌಡರು ಕೂಡಿ, 1883ರಲ್ಲಿ ಧಾರವಾಡದಲ್ಲಿ ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ

ಪ್ರಾರಂಭಿಸಿದರು. ವೀರಶೈವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವಿದೇಶವ್ಯಾಸಂಗ ವೇತನವನ್ನು ಇದು ಒದಗಿಸುತ್ತಿತ್ತು. ಈ ಸಂಸ್ಥೆ 1922 ರಲ್ಲಿ ಧಾರವಾಡದಲ್ಲಿ ಪ್ರಾರಂಭಿಸಿದ ಮಾಧ್ಯಮಿಕ ಶಾಲೆಯಲ್ಲಿ ಖ್ಯಾತ ವಿದ್ವಾಂಸ ಶಿ.ಶಿ. ಬಸವನಾಳರು ಪ್ರಥಮ ಮುಖ್ಯೋಪಾಧ್ಯಾಯರಾಗಿ, 1933 ರ ವರೆಗೆ ಮುಂದುವರೆದರು. ಬಾಡಿಗೆ ಕಟ್ಟಡದಲ್ಲಿ ಪ್ರಾರಂಭವಾದ ಈ ಶಾಲೆ ರಾಜಾ ಲಖಮಗೌಡರಂತಹವರಿಂದ ಧನ ಸಹಾಯ ಪಡೆದು ಸ್ವಂತ ಕಟ್ಟಡ ಹೊಂದಿ, ರಾಜಾಲಖಮನಗೌಡ ಸರ್ದೇದಾಯಿ (ಆರ್.ಎಲ್.ಎಸ್.) ಹೈಸ್ಕೂಲೆಂದು ಪ್ರಸಿದ್ಧವಾಯಿತು. 'ಮರಾಠಾ ವಿದ್ಯಾ ಪ್ರಸಾರದ ಮಂಡಳ' ಮರಾಠರಿಗಾಗಿ ಶೈಕ್ಷಣಿಕ ಸೌಲಭ್ಯ ನೀಡುವ ಉದ್ದೇಶದಿಂದ 1893 ರಲ್ಲಿ ಪ್ರಾರಂಭವಾಯಿತು. ಮರುವರ್ಷ ಇದರ ವತಿಯಿಂದ ಒಂದು ಪ್ರಾಥಮಿಕ ಶಾಲೆ ಸ್ಥಾಪನೆಯಾಯಿತು. ಪ್ಲೇಗ್‌ನಿಂದ (1891) ಇದು ಸ್ಥಾಪಿಸಿದ್ದ ಶಾಲೆ ಮುಚ್ಚಿತು. 1919 ರಲ್ಲಿ ಮಂಡಳ ಸ್ಥಾಪಿಸಿದ ಶ್ರೀ ಸಾಹು ಛತ್ರಪತಿ ಮರಾಠಾ ಬೋರ್ಡಿಂಗ್ ಮರಾಠಾ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ನೀಡಿತು.

'ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ' 1883 ರಲ್ಲಿ ಪ್ರಾರಂಭವಾಯಿತು. 1983 ರಲ್ಲಿ ತನ್ನ ಶತಮಾನೋತ್ಸವ ಆಚರಿಸಿದ ಈ ಸಂಸ್ಥೆ, ನೂರು ವರ್ಷಗಳ ಹಿಂದೆ ಧಾರವಾಡದಲ್ಲಿ ರಾವಬಹದ್ದೂರ್ ಗಿಲಗಂಜಿ ಮತ್ತು ರಾ.ಸಾ. ಅರಟಾಳರ 3,000 ರೂಪಾಯಿಗಳ ಪ್ರಾರಂಭಿಕ ಠೇವಣಿಯಲ್ಲಿ ಪ್ರಾರಂಭವಾಯಿತು. ಜನತಾ ಶಿಕ್ಷಣ ಸಮಿತಿ ಧಾರವಾಡದಲ್ಲಿ 1947 ರಲ್ಲಿ ಸ್ಥಾಪಿಸಲ್ಪಟ್ಟಿತು. ಆಚಾರ್ಯ ಬಿ.ಎಂ.ಶ್ರೀ. ಇಲ್ಲಿ ಪ್ರಿನ್ಸಿಪಾಲರಾಗಿದ್ದು ಇಲ್ಲೇ ದಿವಂಗತರಾದರು. ಕರ್ನಾಟಕದ ಎಜುಕೇಶನ್ ಬೋರ್ಡ್ (1944) ಆರಂಭಿಸಿದ್ದ ಈ ಕಾಲೇಜನ್ನು ಖ್ಯಾತ ಸ್ವಾತಂತ್ರ್ಯಯೋಧ ರಾಮರಾವ್ ಹುಕ್ಕೇರಿಕರರ ಆಡಳಿತಕ್ಕೆ ಒಪ್ಪಿಸಲು ಅವರು ಜನತಾ ಶಿಕ್ಷಣ ಸಮಿತಿ ಆರಂಭಿಸಿ ವಿದ್ಯಾರಣ್ಯ ಹೈಸ್ಕೂಲಿನ ವಠಾರದಿಂದ ವಿದ್ಯಾಗಿರಿಗೆ (ಮೈಲಾರ ಲಿಂಗನ ಗುಡ್ಡಕ್ಕೆ) ಕಾಲೇಜನ್ನು ವರ್ಗಾಯಿಸಿದರು. ಇದರ ವತಿಯಿಂದ ಒಂದು ಪದವಿ ಕಾಲೇಜು, ಒಂದು ತಾಂತ್ರಿಕ ಸಂಸ್ಥೆ (ಕಬ್ಬೂರ್ ಇನ್ಸ್‌ಟಿಟ್ಯೂಟ್) ಒಂದು ಆರ್ಥಿಕ ಸಂಶೋಧನಾ ಕೇಂದ್ರ, ಗ್ರಾಮೋದ್ಯೋಗ ಕೇಂದ್ರ, ಜನತಾ ಕರಕುಶಲ ಉತ್ಪಾದನಾ ಕೇಂದ್ರ, ಜನತಾ ಮುದ್ರಣಾಲಯ, ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ, ಮಂಜುಶ್ರೀ ಶಿಶುವಿಹಾರ, ಮಹಿಳೆಯರ ಪುನರ್ವಸತಿ ಕೇಂದ್ರ - ನಡೆಯುತ್ತಿವೆ. ಹುಕ್ಕೇರಿಕರರು ಇದರ ಸರ್ವತೋಮುಖ ಪ್ರಗತಿಗೆ ದುಡಿದರು. ಅವರ ನಿಧನಾನಂತರ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಇದನ್ನು ವಹಿಸಿಕೊಂಡಿದೆ (1973).

ಅಂಜುಮನ್ ಇಸ್ಲಾಂ ಸಂಸ್ಥೆ 1903 ರಲ್ಲಿ ಹುಬ್ಬಳ್ಳಿಯಲ್ಲಿ ಮೆಹಬೂಬ್ ಅಲಿಂಖಾನ್‌ರಿಂದ ಸ್ಥಾಪಿಸಲ್ಪಟ್ಟಿತು. ಮುಸ್ಲಿಂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಶಾಲಾ ಶುಲ್ಕ ಮತ್ತು ಉಚಿತ ಪಠ್ಯಪುಸ್ತಕಗಳನ್ನು ಒದಗಿಸಿದ ಈ ಸಂಸ್ಥೆ 1917 ರಲ್ಲಿ ಕರ್ನಾಟಕ ಉರ್ದು ಶಾಲೆಯನ್ನು ಪ್ರಾರಂಭಿಸಿತು. ಪ್ರಸ್ತುತ ಈ ಸಂಸ್ಥೆ ಆಂಗ್ಲೋ - ಉರ್ದು ಹೈಯರ್ ಸೆಕೆಂಡರಿ ಶಾಲೆ, ಆಂಗ್ಲೋ - ಉರ್ದು ಹೆಣ್ಣು ಮಕ್ಕಳ ಪ್ರೌಢಶಾಲೆ ಹಾಗೂ ನೆಹರು ಆರ್ಟ್ಸ್, ಸೈನ್ಸ್ ಮತ್ತು ಕಾಮರ್ಸ್ ಕಾಲೇಜುಗಳನ್ನು ನಡೆಸುತ್ತಿದೆ. ಮುಸ್ಲಿಂ ವಿದ್ಯಾರ್ಥಿಗಳೇ ಅಲ್ಲದೆ ಇತರರೂ ಸೇರಿದಂತೆ ಸುಮಾರು 3000 ಮಂದಿ ಸಂಸ್ಥೆಯ ವಿವಿಧ ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರಲ್ಲದೆ, ಸಿಬ್ಬಂದಿ ವರ್ಗದಲ್ಲಿಯೂ, ಜಾತ್ಯತೀತತೆ ಕಾಣಿಸುತ್ತದೆ.

ಗದುಗಿನ ಹುಲಕೋಟಿಯಲ್ಲಿ 1921 ರಲ್ಲಿ 'ಹುಲಕೋಟಿ ಶಿಕ್ಷಣ ಸಂಸ್ಥೆ' ಪ್ರಾರಂಭವಾಯಿತು. ಇದರ ವತಿಯಿಂದ ಗದಗ, ನವಲಗುಂದ, ರೋಣ ತಾಲೂಕುಗಳಲ್ಲಿ ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮಿಕ ಶಾಲೆಗಳೂ, ಒಂದು ಸಂಜೆ ಶಾಲೆ, ಹಿಂದಿ ವರ್ಗ ಮತ್ತು ಉಚಿತ ವಾಚನಾಲಯಗಳನ್ನು ತೆರೆಯಲಾಯಿತು. ಪ್ರಸ್ತುತ ಎರಡು ವಿದ್ಯಾರ್ಥಿನಿಲಯಗಳನ್ನೂ, ಬಾಲವಾಡಿ, ಮಾಧ್ಯಮಿಕ ಶಾಲೆ, ಹಿಂದುಳಿದ ವರ್ಗಗಳವರಿಗೆ ಉಚಿತ ಊಟ, ವಸತಿ ನಿಲಯಗಳನ್ನೂ, ಒಂದು ಕಿರಿಯ ಕಾಲೇಜನ್ನೂ ಈ ಸಂಸ್ಥೆ ನಡೆಸುತ್ತಿದೆ. 1958 ರಲ್ಲಿ ಮರಾಠಾ ವಿದ್ಯಾವರ್ಧಕ ಸಂಘ ಗದುಗಿನಲ್ಲಿ ಪ್ರಾರಂಭವಾಯಿತು. 'ಕನಕದಾಸ ಸಹಕಾರಿ ಶಿಕ್ಷಣ ಸಮಿತಿ' ಇಲ್ಲಿನ ಪ್ರಮುಖ ಸಂಸ್ಥೆಯಾಗಿ ಸಂಗೊಳ್ಳಿ ರಾಯಣ್ಣ ಪದವಿಪೂರ್ವ ಕಾಲೇಜು 1965 ರಲ್ಲಿ ಸ್ಥಾಪಿತವಾಯಿತಲ್ಲದೆ, ಇದರ ಆಶ್ರಯದಲ್ಲಿ ಒಂದು ಶಿಕ್ಷಣ ಕಾಲೇಜು, ಒಂದು ಕಲಾ ಮತ್ತು ವಿಜ್ಞಾನ ಕಾಲೇಜು, ಹೈಸ್ಕೂಲು, ಕಾಳಿದಾಸ ಸಾರ್ವಜನಿಕ ವಾಚನಾಲಯ ನಡೆಯುತ್ತಿದ್ದು ಮತಭೇದವಿಲ್ಲದೆ ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ಊಟ ವಸತಿ ಕಲ್ಪಿಸುವ ಕನಕದಾಸ ಪ್ರಸಾದನಿಲಯ ಕಾರ್ಯ ನಿರ್ವಹಿಸುತ್ತಿವೆ. ಪ್ರೊ॥ ದಂಡಿನ ಇದರ ಹಿಂದಿರುವ ಶಕ್ತಿಯಾಗಿದ್ದಾರೆ.

ಶಿಕ್ಷಣ ಕ್ಷೇತ್ರಕ್ಕೆ ಸೇವೆ ಸಲ್ಲಿಸುತ್ತಿರುವ ಇತರ ಪ್ರಮುಖ ಖಾಸಗಿ ಸಂಸ್ಥೆಗಳೆಂದರೆ, ನ್ಯೂ ಎಜುಕೇಷನ್ ಸಂಸ್ಥೆ ಹುಬ್ಬಳ್ಳಿ; ಶಿಗ್ಗಾಂವಿ ತಾಲೂಕು ಶಿಕ್ಷಣ ಸಮಿತಿ ಶಿಗ್ಗಾಂವಿ; ಕೆ.ಕೆ. ಸಂಘ ಗದಗ; ಮತಂಗ ಮಹರ್ಷಿ ಜಾಗೃತ ವೇದಿಕೆ ರಾಣೆಬೆನ್ನೂರ; ಬಸವೇಶ್ವರ ವಿದ್ಯಾ ಸಂಸ್ಥೆ ಶಿಗ್ಗಾಂವಿ; ಭಾರತೀಯ ಶಿಕ್ಷಣ ಸಂಸ್ಥೆ ಸವಣೂರು; ಭಾರತೀಯ ಶಿಕ್ಷಣ ಪ್ರಸಾರ ಸಮಿತಿ ಗದಗ; ಜೆ.ಎ.ವಿ. ಸಮಿತಿ ಮುಂಡರಗಿ; ಸರ್ವೋದಯ ಶಿಕ್ಷಣ ಟ್ರಸ್ಟ್ ಅಳ್ನಾವರ; ಮಾರುತಿ ವಿದ್ಯಾಸಂಸ್ಥೆ ಗೊಡಚಿಕೊಂಡ; ಕಲ್ಮೇಶ್ವರ ವಿದ್ಯಾ ಪ್ರಸಾರಕ ಸಮಿತಿ ಹೊಳೆಆಲೂರ; ಆಜಾದ್ ಎಜುಕೇಷನ್ ಸೊಸೈಟಿ, ಹುಬ್ಬಳ್ಳಿ; ಮುರುಘ ರಾಜೇಂದ್ರ ವಿದ್ಯಾಪೀಠ ಚಿತ್ರದುರ್ಗ; ವೀರಭದ್ರೇಶ್ವರ ಶಿಕ್ಷಣ ಸಮಿತಿ ಕಾರಡಗಿ; ಭುವನೇಶ್ವರಿ ವಿದ್ಯಾವರ್ಧಕ ಸಮಿತಿ ಮಾಸೂರ; ತೋಂಟದಾರ್ಯ ವಿದ್ಯಾಪೀಠ ಗದಗ; ಎಚ್.ಟಿ.ಇ. ಸೊಸೈಟಿ, ಹಾವೇರಿ; ಚನ್ನಬಸವೇಶ್ವರ ಗ್ರಾಮೀಣ ವಿದ್ಯಾ ಸಂಸ್ಥೆ ಕಲಕೇರಿ; ಜನತಾ ಶಿಕ್ಷಣ ಸಮಿತಿ ಎಸ್.ಜೆ.ಎಂ.ವಿ. ಸಂಘ, ಹಾವೇರಿ; ಸಂತ ಕವಿ ಕನಕದಾಸ ವಿದ್ಯಾ ಸಂಘ ವರದಾಹಳ್ಳಿ, ಬೀರೇಶ್ವರ ವಿದ್ಯಾದಾನ ಸಮಿತಿ, ಹೊನ್ನಾಪುರ; ಶರಣ ಬಸವೇಶ್ವರ ವಿದ್ಯಾಪೀಠ, ಮೋಟೆಬೆನ್ನೂರ; ಎಸ್.ಎಸ್.ಎಸ್. ಎಜುಕೇಷನ್ ಟ್ರಸ್ಟ್ ಆನಂದವನ, ಅಗಡಿ; ಕೀರ್ತಿ ವಿದ್ಯಾ ಸಂಸ್ಥೆ, ಬಂಕಾಪುರ; ವೀರಮಹೇಶ್ವರ ವಿದ್ಯಾವರ್ಧಕ ಸಂಘ, ಕುಡುಪಲಿ; ಲಯನ್ಸ್ ಎಜುಕೇಷನ್ ಸೊಸೈಟಿ; ಜಗದ್ಗುರು ಅಜಾತ ನಾಗಲಿಂಗ ವಿದ್ಯಾಪೀಠ ನವಲಗುಂದ; ಗ್ರಾಮ ಸೇವಾ ಮಂಟಪ ಹನುಮನಹಟ್ಟಿ; ಭಾರತೀ ವಿಶ್ವ ಸೇವಾ ಸದನ ಸೋಮಾಪುರ; ರಾಷ್ಟ್ರೀಯ ಶಿಕ್ಷಣ ಸಮಿತಿ ವಡವಿ; ಯು.ಎಫ್.ಇ.ಸೊಸೈಟಿ ಹುಬ್ಬಳ್ಳಿ; ಸಮಾಜ ಪರಿವರ್ತನ ಅಭಿವೃದ್ಧಿ ಸಂಸ್ಥೆ ಮೆಡವೇರಿ; ದುರ್ಗಾದೇವಿ ಶಿಕ್ಷಣ ಸಮಿತಿ; ಜೀವೇಶ್ವರ ಶಿಕ್ಷಣ ಸಮಿತಿ ಹುಬ್ಬಳ್ಳಿ; ರೂರಲ್ ಎಜುಕೇಷನ್ ಸೊಸೈಟಿ ಸಂಗೂರ; ಮಹಾತ್ಮಾ ಗಾಂಧಿ ಎಜುಕೇಷನ್ ಸೊಸೈಟಿ ರಾಣೆಬೆನ್ನೂರ; ಮಾತಾರವಿಂದ ಗ್ರಾಮೀಣ ವಿದ್ಯೋದಯ ಸಮಿತಿ ಬಿಲ್ಲಹಳ್ಳಿ; ಮಾಲತೇಶ ವಿದ್ಯಾವರ್ಧಕ ಸಂಘ ಬಾಳಂಬೀಡ; ಲಾಲ್ ಬಹದ್ದೂರ್ ಶಾಸ್ತ್ರಿ ಶಿಕ್ಷಣ ಸಮಿತಿ ಗರ್ಭಗುಡಿ, ಬಳ್ಳಾರಿ ಜಿ; ರೇಣುಕಾಂಬ ಶಿಕ್ಷಣ ಸಂಸ್ಥೆ ಕಿರವಾಡಿ; ವೇಮನ ವಿದ್ಯಾವರ್ಧಕ ಸಂಘ, ಹುಬ್ಬಳ್ಳಿ; ಗ್ರಾಮ ಭಾರತಿ ಶಿಕ್ಷಣ ಸಮಿತಿ ಶಿಗ್ಲಿ; ಶಿವಶರಣ ಹರಳಯ್ಯ ವಿದ್ಯಾಸಂಸ್ಥೆ ಡೊಂಬರಮತ್ತೂರ; ಕರ್ನಾಟಕ ಕೀರ್ತಿ ವಿದ್ಯಾ ಸಂಸ್ಥೆ ಬಂಕಾಪುರ; ಜ್ಞಾನಗಂಗಾಶಿಕ್ಷಣ ಸಮಿತಿ ಹಾವೇರಿ; ಭಾರತೀಯ ಶಿಕ್ಷಣ ಸಂಸ್ಥೆ ಹುಬ್ಬಳ್ಳಿ; ಕರ್ನಾಟಕ ಕುರುಬರ ಸಂಘ ಸಂಸ್ಥೆ ಕೊರ್ಲಹಳ್ಳಿ; ವೀರ ಮದಕರಿ ನಾಯಕ ವಿದ್ಯಾಸಂಸ್ಥೆ ರಾಣೆಬೆನ್ನೂರ; ಹಾಲೇಶ್ವರ ವಿದ್ಯಾಪೀಠ ಯರೇಬೇರಿ; ಚಳಗೇರಿ ಶಿಕ್ಷಣ ಸಂಸ್ಥೆ ಚಳಗೇರಿ; ಗಜಾನನ ವಿದ್ಯಾವರ್ಧಕ ಸಂಘ ತುಮೀನಕಟ್ಟಿ; ಹೊನ್ನಮ್ಮದೇವಿ ಮಹಿಳಾ ಮಂಡಳ ಹೊನ್ನತ್ತಿ; ಹಾಗೂ ತುಳಜಾ ಭವಾನಿ ಶಿಕ್ಷಣ ಸಮಿತಿ, ಹುಬ್ಬಳ್ಳಿ ಮುಂತಾದವು.

**ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ** : ಮದ್ರಾಸ್‌ನ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ಆಶ್ರಯದಲ್ಲಿ ಮೊದಲು ಸ್ಥಾಪನೆಗೊಂಡ ಈ ಸಂಸ್ಥೆ ಮುಂದೆ ಪ್ರತ್ಯೇಕವಾಗಿ ಕಾರ್ಯಾರಂಭಮಾಡಿತು. ಪ್ರಸ್ತುತ ಇದು ತನ್ನ ಕೇಂದ್ರಸ್ಥಾನವನ್ನು ಧಾರವಾಡದಲ್ಲಿ ಹೊಂದಿದ್ದು, ಇದರ ಪತಿಯಿಂದ ಮೊದಲನೆಯ ಬಿ.ಇಡಿ. ಕಾಲೇಜು ಬೆಂಗಳೂರಿನಲ್ಲಿಯೂ (1984), ಎರಡನೆಯ ಬಿ.ಇಡಿ. ಕಾಲೇಜು ಧಾರವಾಡದಲ್ಲಿಯೂ (1985)ಪ್ರಾರಂಭಗೊಂಡವು. ಇವಲ್ಲದೆ ರಾಜ್ಯದ ಇತರೆಡೆಗಳಲ್ಲಿ ಒಟ್ಟು 12ಇಂತಹ ಕಾಲೇಜುಗಳನ್ನು ಸಂಸ್ಥೆ ಹೊಂದಿದೆ. ಇದರ ಇತ್ತೀಚಿನ ಕಾಲೇಜು 1991 ರಲ್ಲಿ ಹುಬ್ಬಳ್ಳಿಯಲ್ಲಿ ಪ್ರಾರಂಭವಾಯಿತು. ಈ ಎಲ್ಲಾ ಕೇಂದ್ರಗಳಲ್ಲಿಯೂ 'ಶಿಕ್ಷಾಸ್ನಾತಕ್' ಪದವಿ ನೀಡಲಾಗುತ್ತದೆ. ಧಾರವಾಡದಲ್ಲಿ ಸಂಸ್ಥೆ 1987 ರಲ್ಲಿ ಸ್ಥಾಪಿಸಿದ ಸ್ನಾತಕೋತ್ತರ ಕೇಂದ್ರದಲ್ಲಿ ಹಿಂದಿ ಎಂ.ಎ. ಮತ್ತು ಎಂ.ಫಿಲ್‌ಗಳಿಗೆ ಶಿಕ್ಷಣ ನೀಡಲಾಗುತ್ತದೆ. ಇದೇ ವರ್ಷ ಇಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪ್ರಾರಂಭವಾಯಿತು. 1990 ರಲ್ಲಿ ಈ ಕೇಂದ್ರಕ್ಕೆ ಡಿ.ಲಿಟ್. ಪದವಿ ನೀಡುವ ಕೇಂದ್ರವೆಂದು ಮಾನ್ಯತೆ ನೀಡಲಾಯಿತು. 1989-90 ನೇ ಸಾಲಿನಲ್ಲಿ ಎಂ.ಎಡ್. ಶಿಕ್ಷಣ ಪ್ರಾರಂಭವಾದರೂ ಮರು ವರ್ಷವೇ ತಾಂತ್ರಿಕ ತೊಂದರೆಗಳಿಂದಾಗಿ ಮುಚ್ಚಲ್ಪಟ್ಟಿತು. 1992 ರಿಂದ ಇಲ್ಲಿ ಪ್ರಾಥಮಿಕ, ಮಧ್ಯಮಾ ಹಾಗೂ ರಾಷ್ಟ್ರಭಾಷಾ ಪರೀಕ್ಷೆಗಲ್ಲದೆ, ಪ್ರವೇಶಿಕ ಪರೀಕ್ಷೆಯನ್ನೂ ಸಭೆ ನಡೆಸುತ್ತಿದೆ.

## ಜಿಲ್ಲಾ ಸಾಕ್ಷರದೀಪ ಸಮಿತಿ

ಇದು 'ರಾಷ್ಟ್ರೀಯ ಸಾಕ್ಷರತಾ ಮಿಷನ್'ನ ಮಾರ್ಗದರ್ಶನದಲ್ಲಿ ಕೆಲಸ ಮಾಡುವ ಒಂದು ನೋಂದಾಯಿತ ಸಂಸ್ಥೆಯಾಗಿದ್ದು, 1992 ರಲ್ಲಿ ಧಾರವಾಡದಲ್ಲಿ ಪ್ರಾರಂಭವಾಯಿತು. ಲೋಕ ಶಿಕ್ಷಣ ಇಲಾಖೆಗೆ ಪೂರಕವಾಗಿ ಕೆಲಸ ಮಾಡುವ ಈ ಸಂಸ್ಥೆ 9 ರಿಂದ 14 ಮತ್ತು 15 ರಿಂದ 37 ವರ್ಷದ ವಯೋಮಿತಿಯವರಿಗೆ ಸಾಕ್ಷರತೆಯನ್ನು ನೀಡುವ ಗುರಿ ಹೊಂದಿದೆ. ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಕೆಲಸ ಮಾಡುವ ಇದರ ಕಾರ್ಯಾಧ್ಯಕ್ಷರು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯಾಗಿರುತ್ತಾರೆ.

ಜಿಲ್ಲೆಯ ಹುಬ್ಬಳ್ಳಿ, ಧಾರವಾಡ, ಕಲಘಟಗಿ, ಶಿಗ್ಗಾಂವಿ, ಹಾನಗಲ್, ಹಾವೇರಿ, ರಾಣೆಬೆನ್ನೂರು, ಬ್ಯಾಡಗಿ ಹಾಗೂ ಹಿರೇಕೆರೂರು- ಈ ಒಂಬತ್ತು ತಾಲೂಕುಗಳಲ್ಲಿ, ಒಂಬತ್ತರಿಂದ 37 ವರ್ಷ ವಯೋಮಿತಿಯಲ್ಲಿನ ಸುಮಾರು 3,50,000 ಅನಕ್ಷರಸ್ಥರನ್ನು ಕ್ರಿಯಾತ್ಮಕವಾಗಿ ಸಾಕ್ಷರರನ್ನಾಗಿ ಮಾಡುವ ಗುರಿ ಹೊಂದಿದೆ. ಇದರ ಅನುಷ್ಠಾನಕ್ಕಾಗಿ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳ ಸಹಕಾರದೊಂದಿಗೆ ಸಂಪೂರ್ಣ ಸಾಕ್ಷರತಾ ಆಂದೋಲನದ ಪ್ರಾರಂಭೋತ್ಸವ 1993 ರ ಸೆಪ್ಟೆಂಬರ್‌ನಲ್ಲಿ ನಡೆಯಿತು.

ಇದೇ ಸಾಲಿನ ಸಾಕ್ಷರತಾ ಗಣತಿಯ ಕಾಲಕ್ಕೆ ಮೇಲ್ಕಂಡ ತಾಲೂಕುಗಳಲ್ಲಿ 31,320 ಉರ್ದು ಅನಕ್ಷರಸ್ಥರನ್ನು ಗುರುತಿಸಿ ಇವರಲ್ಲಿ 11,000 ಮಂದಿಗೆ ಕನ್ನಡ ಪಠ್ಯಪುಸ್ತಕ ಓದಲು ತರಬೇತಿ ನೀಡಲಾಯಿತು. ಉಳಿದ ಸುಮಾರು 2,000 ಅನಕ್ಷರಸ್ಥರಿಗೆ ತರಬೇತಿ ಕೊಡಲು 43 ಸಂಪನ್ಮೂಲ ವ್ಯಕ್ತಿಗಳನ್ನೂ, ಅಧಿಕ ಸಂಖ್ಯೆಯಲ್ಲಿ ಮುಖ್ಯ ತರಬೇತುದಾರರನ್ನೂ ಹಾಗೂ ಸ್ವಯಂ ಸೇವಕರನ್ನೂ ಗುರುತಿಸಲಾಯಿತು. ಇದರೊಂದಿಗೆ ಒಂಬತ್ತರಿಂದ 12 ವರ್ಷ ವಯೋಮಿತಿಯ, ಓದಿನ ಮಧ್ಯದಲ್ಲಿ ಶಾಲೆ ಬಿಟ್ಟ ಒಟ್ಟು 54,567 ಮಕ್ಕಳನ್ನು ಗುರ್ತಿಸಿ, ಅವರ ಮುಂದಿನ ಶಿಕ್ಷಣಕ್ಕೂ ತಕ್ಕ ಏರ್ಪಾಡು ಮಾಡಲಾಯಿತು. ಜಿಲ್ಲೆಯಲ್ಲಿ ಶೇ.70 ರಷ್ಟು ಅನಕ್ಷರಸ್ಥ ಮಹಿಳೆಯರಿದ್ದು ಇವರಿಗಾಗಿ ಒಂದು ಪ್ರತ್ಯೇಕ ಸಮಿತಿ ಇದೆ. ತಾಲೂಕು ಮತ್ತು ಮಂಡಲ ಮಟ್ಟಗಳಲ್ಲಿ ಮಹಿಳಾ ಕಲಾ ತಂಡಗಳು ರಚನೆಯಾಗಿವೆ. ಹಾಗೂ ತಾಲೂಕು ಮಟ್ಟದಲ್ಲಿ ಮಹಿಳಾ ಜಾಗೃತಿ ವೇದಿಕೆಗಳು ರಚಿತವಾಗಿವೆ. ಹಲವು ಕಲಿಕಾ ಕೇಂದ್ರಗಳಲ್ಲಿ ವೃತ್ತಿ ಶಿಕ್ಷಣ ಸಹ ಅಳವಡಿಸಲಾಗಿದೆ.

ಸಮಿತಿಯು ಈವರೆಗೆ ಒಂಬತ್ತರಿಂದ 35 ವರ್ಷ ವಯೋಮಿತಿಯ ಒಟ್ಟು 3,72,121 ಮಂದಿ ಅನಕ್ಷರಸ್ಥರನ್ನು, ಒಂಬತ್ತರಿಂದ 14 ವರ್ಷ ವಯೋಮಿತಿಯ ಒಟ್ಟು 54,564 ಶಾಲೆ ಬಿಟ್ಟ ಮಕ್ಕಳು ಮತ್ತು ಬಾಲಕಾರ್ಮಿಕರನ್ನೂ ಗುರುತಿಸಿದೆ. ಹಾಗೂ ಒಟ್ಟು 34,401 ಕಲಿಕಾ ಕೇಂದ್ರಗಳನ್ನು ಹೊಂದಿದೆ. ಆಂತರಿಕ ಮೌಲ್ಯಮಾಪನಕ್ಕೆ ಹಾಜರಾದ ಒಟ್ಟು 2,87,568 ಮಂದಿಯಲ್ಲಿ 2,74,049 ಮಂದಿ ಶೇಕಡಾ 70 ಕ್ಕಿಂತಲೂ ಹೆಚ್ಚು ಅಂಕ ಗಳಿಸಿ ನವಸಾಕ್ಷರರೆಂದು ಘೋಷಿಸಲ್ಪಡಲು ತಾತ್ಕಾಲಿಕವಾಗಿ ಅರ್ಹತೆ ಪಡೆದಿದ್ದಾರೆ.

## ಪದವಿ ಪೂರ್ವ ಶಿಕ್ಷಣ

ರಾಜ್ಯದ ಎಲ್ಲೆಡೆಯಂತೆ ಜಿಲ್ಲೆಯ ಹಲವಾರು ಪ್ರೌಢಶಾಲೆಗಳು ಮೊದಲಿಗೆ ಹೈಯರ್ ಸೆಕೆಂಡರಿ ಶಾಲೆಗಳಾಗಿ ಮಾರ್ಪಟ್ಟು, ಹನ್ನೊಂದನೇ ತರಗತಿಯನ್ನು ಪ್ರಾರಂಭಿಸಿದವು. ಪದವಿ ಪೂರ್ವ ಶಿಕ್ಷಣ ಮೊದಲು ಒಂದೇ ವರ್ಷದ ಅವಧಿಯದಾಗಿದ್ದು, 1972 ರಲ್ಲಿ ಎರಡು ವರ್ಷದ ಪದವಿ ಪೂರ್ವ ಶಿಕ್ಷಣ ರೂಪುಗೊಂಡಿತು. ಈ ಶಿಕ್ಷಣವನ್ನು ಪ್ರೌಢಶಾಲೆಗಳಲ್ಲಿ ಹಾಗೂ ಪದವಿ ಕಾಲೇಜುಗಳಲ್ಲಿಯೂ ನೀಡಲಾಗುತ್ತಿದೆ. ಹಿಂದೆ ಮೆಟ್ರಿಕ್ ಪಾಸಾದವರು ಪಡೆಯಬೇಕಾಗಿದ್ದ ಇಂಟರ್‌ಮೀಡಿಯಟ್ ಶಿಕ್ಷಣಕ್ಕೆ ಇದು ಸಮನಾಗಿದೆ. ಇದಲ್ಲದೆ ಸರಕಾರ ಸ್ವತಂತ್ರ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಿ ಖಾಸಗಿ ಸಂಸ್ಥೆಗಳಿಗೂ ಇಂತಹ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಿತು. ಜಿಲ್ಲೆಯಲ್ಲಿ 1994-95 ರಲ್ಲಿ ಒಟ್ಟು 164 ಪದವಿ ಪೂರ್ವ ಕಾಲೇಜುಗಳಿದ್ದು ಅವುಗಳಲ್ಲಿ ಖಾಸಗಿ ಸ್ವತಂತ್ರ ಕಾಲೇಜುಗಳು - 19, ಸರಕಾರೀ ಸ್ವತಂತ್ರ ಕಾಲೇಜುಗಳು - ಎರಡು, ಸರಕಾರಿ ಕಾಂಪೊಸಿಟ್ ಕಾಲೇಜುಗಳು - 19, ಖಾಸಗಿ ಕಾಂಪೊಸಿಟ್ ಕಾಲೇಜುಗಳು - 105, ಖಾಸಗಿ ಪದವಿ ಕಾಲೇಜುಗಳಲ್ಲಿರುವ ಪದವಿ ಪೂರ್ವ ಕಾಲೇಜುಗಳು - 19 ಹೀಗೆ ಹಂಚಿವೆ. ಜಿಲ್ಲೆಯಲ್ಲಿ 1992-93 ನೇ ಸಾಲಿನ ಏಪ್ರಿಲ್‌ನಲ್ಲಿ ಒಟ್ಟು 31,040 (22,887 ಗಂಡು, 8,153 ಹೆಣ್ಣು) ಮಕ್ಕಳು ಪದವಿ ಪೂರ್ವ ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ 12,148 (8,281 ಗಂಡು, 3,867 ಹೆಣ್ಣು) ಮಕ್ಕಳು ಉತ್ತೀರ್ಣರಾದರು. ವಿದ್ಯಾರ್ಥಿಗಳಲ್ಲಿ ಶೇಕಡಾ 36.18 ಮತ್ತು ವಿದ್ಯಾರ್ಥಿನಿಯರಲ್ಲಿ ಶೇಕಡಾ 47.43 ಫಲಿತಾಂಶವಿತ್ತು. ಇದೇ ಸಾಲಿನ ಅಕ್ಟೋಬರ್ ಪರೀಕ್ಷೆಗೆ ಒಟ್ಟು 12,129 ಮಂದಿ (9,203 ಗಂಡು, 2,926 ಹೆಣ್ಣು) ಹಾಜರಾಗಿ, ಒಟ್ಟು 2,618 ಮಂದಿ (1,880 ಗಂಡು, 738 ಹೆಣ್ಣು) ಉತ್ತೀರ್ಣರಾದರು. ವಿದ್ಯಾರ್ಥಿಗಳಲ್ಲಿ ಶೇಕಡಾ 20.43 ಮತ್ತು ವಿದ್ಯಾರ್ಥಿನಿಯರಲ್ಲಿ ಶೇಕಡಾ 25.22 ಫಲಿತಾಂಶವಿತ್ತು. 1993-94 ನೇ ಸಾಲಿನ ಏಪ್ರಿಲ್ ಪರೀಕ್ಷೆಗೆ ಒಟ್ಟು 28,823 ಮಂದಿ (20,837 ಗಂಡು, 7,986 ಹೆಣ್ಣು) ಹಾಜರಾಗಿ, ಅವರಲ್ಲಿ ಒಟ್ಟು 12,224 (8,350 ಗಂಡು, 3,874 ಹೆಣ್ಣು) ಮಂದಿ ಉತ್ತೀರ್ಣರಾದರು. ವಿದ್ಯಾರ್ಥಿಗಳ ಶೇಕಡಾ ಫಲಿತಾಂಶ 40.07 ಮತ್ತು ವಿದ್ಯಾರ್ಥಿನಿಯರ ಶೇಕಡಾ ಫಲಿತಾಂಶ 48.51 ಆಗಿತ್ತು. ಇದೇ ಸಾಲಿನ ಅಕ್ಟೋಬರ್‌ನಲ್ಲಿ ನಡೆದ ಪರೀಕ್ಷೆಗೆ ಒಟ್ಟು 10,538 ಮಂದಿ (7,776 ಗಂಡು, 2,762 ಹೆಣ್ಣು) ಹಾಜರಾಗಿದ್ದು, ಅವರಲ್ಲಿ ಒಟ್ಟು 2,843 (1,937 ಗಂಡು, 906 ಹೆಣ್ಣು) ಮಂದಿ

ಉತ್ತೀರ್ಣತೆ ಹೊಂದಿದರು. ವಿದ್ಯಾರ್ಥಿಗಳಲ್ಲಿ ಶೇಕಡಾ 24.91 ಮತ್ತು ವಿದ್ಯಾರ್ಥಿನಿಯರಲ್ಲಿ ಶೇಕಡಾ 32.80 ಫಲಿತಾಂಶ ಬಂದಿತ್ತು.(ಪದವಿಪೂರ್ವ ಶಿಕ್ಷಣ ಇಲಾಖೆ ನೀಡಿದ ಮಾಹಿತಿ).

**ವೃತ್ತಿ ಶಿಕ್ಷಣ :** ವೃತ್ತಿಶಿಕ್ಷಣವನ್ನು ಪದವಿಪೂರ್ವ ವರ್ಗಗಳಲ್ಲಿ ಅಳವಡಿಸುವ ಕಾರ್ಯಕ್ರಮವು ರಾಜ್ಯದ 13 ಕೇಂದ್ರಗಳಲ್ಲಿ 1977-78 ನೇ ಸಾಲಿನಿಂದ ಪ್ರಾರಂಭವಾಯಿತು. ಇವುಗಳ ಪೈಕಿ ನಾಲ್ಕು ಕೇಂದ್ರಗಳು ಧಾರವಾಡ ಜಿಲ್ಲೆಯಲ್ಲಿ ಇದ್ದವು. ಅವೆಂದರೆ, ಧಾರವಾಡದ ವಿದ್ಯಾರಣ್ಯ ಪದವಿ ಪೂರ್ವ ಕಾಲೇಜು, ಬಾಸೆಲ್ ಮಿಷನ್ ಪದವಿ ಪೂರ್ವ ಕಾಲೇಜು, ಜೆ.ಎಸ್.ಎಸ್. ಕಾಲೇಜು ಹಾಗೂ ಮುನಿಸಿಪಲ್ ಪದವಿ ಪೂರ್ವ ಕಾಲೇಜು, ಗದಗ. ಪ್ರಸ್ತುತ ಜಿಲ್ಲೆಯಲ್ಲಿ 38 ಕಾಲೇಜುಗಳಲ್ಲಿ 26 ವಿವಿಧ ವೃತ್ತಿ ಶಿಕ್ಷಣ ವಿಷಯಗಳಲ್ಲಿ ಕೋರ್ಸುಗಳು ನಡೆಯುತ್ತಿವೆ. ಪದವಿ ಪೂರ್ವ ಶಿಕ್ಷಣಕ್ಕೆ ಸಮಾನವಾದ ಈ ಶಿಕ್ಷಣ ಎರಡು ವರ್ಷ ಅವಧಿಯ ನಾಲ್ಕು ಸೆಮಿಸ್ಟರ್‌ಗಳನ್ನು ಉಳ್ಳದ್ದಾಗಿದ್ದು, ಹತ್ತನೇ ತರಗತಿ ಪಾಸಾದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುತ್ತದೆ. ಇತ್ತೀಚೆಗೆ ವೃತ್ತಿ ಶಿಕ್ಷಣ ನಿರ್ದೇಶನಾಲಯ ಒಂದು ಸ್ವತಂತ್ರ ಇಲಾಖೆಯಾಗಿ ಮಾರ್ಪಟ್ಟಿದೆ. ವೃತ್ತಿ ಶಿಕ್ಷಣವು ಜಿಲ್ಲೆಯಲ್ಲಿ ಒಬ್ಬ ಉಪ ನಿರ್ದೇಶಕರ ಮಾರ್ಗದರ್ಶನದಲ್ಲಿ ನಡೆಯುತ್ತಿದೆ. ಇವರ ವ್ಯಾಪ್ತಿಗೆ ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳೂ ಒಳಪಡುತ್ತವೆ. ಧಾರವಾಡ ಜಿಲ್ಲೆಯಲ್ಲಿ ವೃತ್ತಿ ಶಿಕ್ಷಣಕ್ಕೆ ಪ್ರಾರಂಭದಿಂದಲೂ ಶೇ.50 ಕೇಂದ್ರ ಹಾಗೂ ಶೇ.50 ರಾಜ್ಯ ಸರಕಾರಗಳ ಅನುದಾನ ಸಂದಾಯವಾಗುತ್ತಿದೆ. ಜಿಲ್ಲೆಯ ಪದವಿ ಪೂರ್ವ ಕಾಲೇಜುಗಳಲ್ಲಿ ಸುಮಾರು 44 ವಿವಿಧ ವಿಷಯಗಳ ಕೋರ್ಸುಗಳು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ 13 ಕೋರ್ಸುಗಳು ನಡೆಯುತ್ತಿದ್ದು, ಎಲೆಕ್ಟ್ರಿಕಲ್ ವೈರಿಂಗ್ ಹಾಗೂ ಕ್ಲಾತಿಂಗ್ ಮತ್ತು ಎಂಬ್ರಾಯಿಡರಿ ಹೆಚ್ಚಿನ ವಿದ್ಯಾರ್ಥಿಗಳನ್ನು ಆಕರ್ಷಿಸಿ ಜನಪ್ರಿಯತೆ ಹೊಂದಿವೆ.

**ಎನ್.ಸಿ.ಸಿ. :** "ಫಸ್ಟ್ ಬಾಂಬೆ ಯೂನಿವರ್ಸಿಟಿ ಟ್ರೈನಿಂಗ್ ಕೋರ್" ಎಂಬ ಪದನಾಮದೊಂದಿಗೆ 1921 ರಲ್ಲಿ ಪ್ರಾರಂಭವಾದ ಜಿಲ್ಲೆಯ ಎನ್‌ಸಿಸಿ ದಳ, ಭಾರತದ ಅತೀ ಹಳೆಯ ಎನ್‌ಸಿಸಿ ದಳಗಳಲ್ಲಿ ಒಂದಾಗಿದೆ. ಪ್ರಾರಂಭಿಕ ವಿದ್ಯಾರ್ಥಿಗಳು ಧಾರವಾಡದ ಕರ್ನಾಟಕ ಕಾಲೇಜು ಮತ್ತು ಬೆಳಗಾವಿಯ ಲಿಂಗರಾಜ ಕಾಲೇಜಿನಿಂದ ಬಂದವರಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಕಮಾಂಡೆಂಟರೆಂದು ಕರೆಯಲ್ಪಡುತ್ತಿದ್ದ ದಳದ ಆದೇಶಾಧಿಕಾರಿಗಳು (ಕಮಾಂಡಿಂಗ್ ಆಫೀಸರ್) ಬ್ರಿಟಿಷರೇ ಆಗಿದ್ದು, 1940 ರಲ್ಲಿ ಲೆ॥ಕ॥ ಆರ್. ಕರಮರಕರ್ ಅವರು ಆ ಸ್ಥಾನಕ್ಕೆ ಮೊದಲ ಭಾರತೀಯರಾಗಿ ನೇಮಿಸಲ್ಪಟ್ಟರು. ಇವರು 1947 ರ ವರೆಗೆ ದಳದ ನಾಯಕತ್ವ ವಹಿಸಿದ್ದರು.

ಸ್ವಾತಂತ್ರ್ಯಾನಂತರ 'ನ್ಯಾಷನಲ್ ಕೆಡೆಟ್ ಕೋರ್' ಪದನಾಮ ಬಳಕೆಯಲ್ಲಿ ಒಂದು ದಳ 15 ನೇ ಬಾಂಬೆ ಬೆಟ್ಯಾಲಿಯನ್ ಎನ್‌ಸಿಸಿ ಎಂದು ನಾಮಕರಣಗೊಂಡಿತು. ರಾಜ್ಯ ಪುನರ್ ಸಂಘಟನೆಯ ನಂತರ ಇದನ್ನು 3 ನೇ ಮೈಸೂರು ಬೆಟ್ಯಾಲಿಯನ್ ಎನ್‌ಸಿಸಿ ಎಂದು ಕರೆಯಲಾಯಿತು. ಚೀನಾ ದಾಳಿಯ ನಂತರ ಕಾಲೇಜು ವಿದ್ಯಾರ್ಥಿಗಳಿಗೆ ಎನ್‌ಸಿಸಿ ಕಡ್ಡಾಯಗೊಳಿಸಲಾಯಿತು. ಆ ಸಮಯದಲ್ಲಿ ಹುಬ್ಬಳ್ಳಿ, ಗದಗ ಹಾಗೂ ಬೆಳಗಾವಿಯಲ್ಲಿ ರಾಯಲ್ ಬೆಟ್ಯಾಲಿಯನ್ ಪ್ರಾರಂಭವಾಯಿತು. 1972 ರಲ್ಲಿ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಟ್ಟಾಗ ಮೈಸೂರು ಬೆಟ್ಯಾಲಿಯನ್‌ಗಳು ಕರ್ನಾಟಕ ಬೆಟ್ಯಾಲಿಯನ್‌ಗಳಾದವು.

ಜಿಲ್ಲೆಯ ಎನ್‌ಸಿಸಿ ಬೆಳಗಾವಿಯ ಗ್ರೂಪ್ ಹೆಡ್‌ಕ್ವಾರ್ಟರ್ಸ್ ಆಡಳಿತಕ್ಕೆ ಒಳಪಟ್ಟಿದ್ದು, ಧಾರವಾಡದ 24 ನೇ ಕರ್ನಾಟಕ ಬೆಟ್ಯಾಲಿಯನ್, ಹುಬ್ಬಳ್ಳಿಯ 27 ಮತ್ತು 28 ನೇ ಕರ್ನಾಟಕ ಬೆಟ್ಯಾಲಿಯನ್‌ಗಳು ಮತ್ತು ಧಾರವಾಡದ 5 ನೇ ಕರ್ನಾಟಕ ಹೆಣ್ಣು ಮಕ್ಕಳ ಬೆಟ್ಯಾಲಿಯನ್‌ಗಳು ಜಿಲ್ಲೆಯ ವಿವಿಧ ಶಾಲಾ ಕಾಲೇಜುಗಳಲ್ಲಿ ಕೆಡೆಟ್‌ಗಳನ್ನು ಹೊಂದಿ ಕಾರ್ಯ ನಿರ್ವಹಿಸುತ್ತಿವೆ. 5 ನೇ ಕರ್ನಾಟಕ ಹೆಣ್ಣು ಮಕ್ಕಳ ಎನ್‌ಸಿಸಿ ಬೆಟ್ಯಾಲಿಯನ್ ಧಾರವಾಡದಲ್ಲಿ 1964 ರಲ್ಲಿ ಮೂರು ಸೀನಿಯರ್ ವಿಂಗ್ ಮತ್ತು ಆರು ಜ್ಯೂನಿಯರ್ ವಿಂಗ್ ಟ್ರೂಪ್‌ಗಳೊಂದಿಗೆ 2 ನೇ ಮೈಸೂರು ಹೆಣ್ಣುಮಕ್ಕಳ ಬೆಟ್ಯಾಲಿಯನ್ ಎಂದು ಪ್ರಾರಂಭವಾಯಿತು. ಪ್ರಸ್ತುತ ಧಾರವಾಡ, ಹುಬ್ಬಳ್ಳಿ, ಕಿತ್ತೂರು, ಬೆಳಗಾವಿ ಹಾಗೂ ದಾವಣಗೆರೆಯಲ್ಲಿನ ಏಳು ಕಾಲೇಜುಗಳಲ್ಲಿ ಹಾಗೂ ಧಾರವಾಡ, ಹುಬ್ಬಳ್ಳಿ, ಬೆಳಗಾವಿ ಮತ್ತು ಯಲ್ಲಾಪುರದ ಆರು ಶಾಲೆಗಳಲ್ಲಿ ಟ್ರೂಪ್‌ಗಳನ್ನೂ ಹೊಂದಿದೆ. 1993-94 ನೇ ಸಾಲಿಗೆ ಧಾರವಾಡದ ಕಿಟೆಲ್ ಕಾಲೇಜಿನಲ್ಲಿ 70, ಹುಬ್ಬಳ್ಳಿಯ ಪಿ.ಸಿ. ಜಬಿನ್ ಸೈನ್ಸ್ ಕಾಲೇಜಿನಲ್ಲಿ 65, ಧಾರವಾಡದ ಬಾಸೆಲ್ ಮಿಷನ್ ಹೈಸ್ಕೂಲಿನಲ್ಲಿ 100,

ಹುಬ್ಬಳ್ಳಿಯ ಗರ್ಲ್ಸ್ ಇಂಗ್ಲಿಷ್ ಸ್ಕೂಲ್‌ನಲ್ಲಿ 100, ಧಾರವಾಡದ ವನಿತಾ ಹೈಸ್ಕೂಲಿನಲ್ಲಿ 50, ಕೆಎನ್‌ಕೆ ಗರ್ಲ್ಸ್ ಹೈಸ್ಕೂಲಿನಲ್ಲಿ 50, ಕೆ.ಇ. ಬೋರ್ಡ್ ಹೈಸ್ಕೂಲಿನಲ್ಲಿ 50, ಕೆಡೆಟ್‌ಗಳನ್ನು ಈ ಬೆಟ್ಯಾಲಿಯನ್ ಹೊಂದಿತ್ತು.

ಆಂಧ್ರ, ಮಹಾರಾಷ್ಟ್ರ, ಬರೋಡ, ಊಟಿ, ದೆಹಲಿ, ಉತ್ತರಕಾಶಿ, ಅಹಮದಾಬಾದ್, ಕೇರಳ ಹಾಗೂ ಬೆಂಗಳೂರಿನಲ್ಲಿ ನಡೆದ ವಿವಿಧ ಕ್ಯಾಂಪುಗಳಲ್ಲಿ ಈ ಬೆಟ್ಯಾಲಿನ್ನಿನ ಒಟ್ಟು 191 ಜ್ಯೂನಿಯರ್ ಹಾಗೂ 232 ಸೀನಿಯರ್ ವಿಂಗ್‌ಗಳ ಕೆಡೆಟ್‌ಗಳು ಭಾಗವಹಿಸಿರುತ್ತಾರೆ. ಸೀನಿಯರ್ ವಿಂಗ್‌ನ 23 ಮಂದಿ ಹಾಗೂ ಜ್ಯೂನಿಯರ್ ವಿಂಗ್‌ನ ಒಬ್ಬ ಕೆಡೆಟ್ ದೆಹಲಿಯ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಂಡಿದ್ದಾರೆ. ಲೆಫ್ಟಿನೆಂಟ್ ಕರ್ನಲ್ ದರ್ಜೆಯ ಅಧಿಕಾರಿ ಇದರ ಆದೇಶಾಧಿಕಾರಿಯಾಗಿರುತ್ತಾರೆ.

ಇಪ್ಪತ್ತನಾಲ್ಕನೇಯ ಕರ್ನಾಟಕ ಬೆಟ್ಯಾಲಿಯನ್ ದೇಶದ ಹಳೆಯ ಎನ್‌ಸಿಸಿ ದಳಗಳಲ್ಲಿ ಒಂದಾಗಿದ್ದು, ಧಾರವಾಡದಲ್ಲಿ ಬಾಂಬೆ ಯೂನಿವರ್ಸಿಟಿ ಟ್ರೈನಿಂಗ್ ಕೋರ್ ಎಂದು 1921 ರಲ್ಲಿ ಪ್ರಾರಂಭಗೊಂಡಿತು. 1993-94 ನೇ ಸಾಲಿಗೆ ಧಾರವಾಡದ ಕರ್ನಾಟಕ ಸೈನ್ಸ್ ಕಾಲೇಜ್, ಆರ್ಟ್ಸ್ ಕಾಲೇಜ್, ಕಿಟೆಲ್ ಕಾಲೇಜ್, ಕೃಷಿ ಕಾಲೇಜ್ ಹಾಗೂ ವಿದ್ಯಾರಣ್ಯ ಜ್ಯೂನಿಯರ್ ಕಾಲೇಜಿನಲ್ಲಿ ತಲಾ 160 ಸೀನಿಯರ್ ವಿಂಗ್ ಕೆಡೆಟ್‌ಗಳನ್ನೂ, ಧಾರವಾಡದ ಯು.ಪಿ.ಶಾಲೆ, ಕರ್ನಾಟಕ ಹೈಸ್ಕೂಲ್, ಕೆ.ಇ. ಬೋರ್ಡ್ ಹೈಸ್ಕೂಲು, ಬಾಸೆಲ್ ಮಿಷನ್ ಹೈಸ್ಕೂಲ್, ವಿದ್ಯಾರಣ್ಯ ಹೈಸ್ಕೂಲ್, ಆರ್.ಎಲ್.ಎಸ್. ಹೈಸ್ಕೂಲ್‌ಗಳಲ್ಲಿ ತಲಾ 100 ಕೆಡೆಟ್‌ಗಳನ್ನು ಹೊಂದಿತ್ತು. ಜಿಲ್ಲೆಯ ವಿವಿಧೆಡೆ ನಡೆದ ವಾರ್ಷಿಕ ಕ್ಯಾಂಪುಗಳಲ್ಲಿ ಒಟ್ಟು 577 ಸೀನಿಯರ್ ಮತ್ತು 378 ಜ್ಯೂನಿಯರ್ ವಿಂಗ್‌ಗಳ ಕೆಡೆಟ್‌ಗಳು ಪಾಲ್ಗೊಂಡಿದ್ದರು. ಮೇಜರ್ ದರ್ಜೆಯ ಅಧಿಕಾರಿ ಇದರ ಆಡಳಿತಾಧಿಕಾರಿಯಾಗಿರುತ್ತಾರೆ. 27 ನೇ ಕರ್ನಾಟಕ ಬೆಟ್ಯಾಲಿಯನ್ ಎನ್‌ಸಿಸಿ 1963ರಲ್ಲಿ ಹುಬ್ಬಳ್ಳಿಯ ವಿದ್ಯಾನಗರದಲ್ಲಿ 69ನೇ ಮೈಸೂರು ಎನ್‌ಸಿಸಿ ರೈಫಲ್ ಬೆಟ್ಯಾಲಿಯನ್ ಎಂದು ಪ್ರಾರಂಭವಾಯಿತು. ಹುಬ್ಬಳ್ಳಿಯ ಕೆ.ಎಸ್.ಆರ್ಟ್ಸ್ ಮತ್ತು ಎಚ್.ಎಸ್.ಕೆ. ಸೈನ್ಸ್ ಕಾಲೇಜಿನಲ್ಲಿ 160, ನೆಹರು ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನಲ್ಲಿ 160, ಹಾವೇರಿಯ ಜಿ.ಎಚ್. ಕಾಲೇಜಿನಲ್ಲಿ 80, ಬ್ಯಾಡಗಿ ಸರ್ಕಾರಿ ಜ್ಯೂನಿಯರ್ ಕಾಲೇಜಿನಲ್ಲಿ 80, ರಾಣೆಬೆನ್ನೂರಿನ ಆರ್.ಟಿ.ಇ. ಸೈನ್ಸ್ ಮತ್ತು ಆರ್ಟ್ಸ್ ಕಾಲೇಜಿನಲ್ಲಿ 160, ಹಂಸಭಾವಿಯ ಮಹಾಂತಸ್ವಾಮಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನಲ್ಲಿ 160 ಸೀನಿಯರ್ ವಿಂಗ್ ಕೆಡೆಟ್‌ಗಳನ್ನೂ, ಹುಬ್ಬಳ್ಳಿಯ ಎಸ್.ಜೆ.ಜಿ.ಎಚ್. ಹೈಸ್ಕೂಲು, ಕುಂದಗೋಳದ ಹರಭಟ್ ಹೈಸ್ಕೂಲು, ಹುಬ್ಬಳ್ಳಿಯ ಆ್ಯಂಗ್ಲೋ ಉರ್ದು ಹೈಸ್ಕೂಲು, ಹಾವೇರಿಯ ಮುನಿಸಿಪಲ್ ಹೈಸ್ಕೂಲು, ಬ್ಯಾಡಗಿಯ ಎಸ್.ಜೆ.ಜೆ.ಎಂ. ಹೈಸ್ಕೂಲು ಮತ್ತು ಹುಬ್ಬಳ್ಳಿಯ ಕೇಂದ್ರೀಯ ವಿದ್ಯಾಲಯ ಶಾಲೆಗಳಲ್ಲಿ ತಲಾ 100 ಕೆಡೆಟ್‌ಗಳನ್ನೂ ಈ ಬೆಟ್ಯಾಲಿಯನ್ ಹೊಂದಿರುತ್ತದೆ. 1993-94 ನೇ ಸಾಲಿನ ವಾರ್ಷಿಕ ಕ್ಯಾಂಪಿನಲ್ಲಿ 486 ಸೀನಿಯರ್ ಡಿವಿಜನ್ ಕೆಡೆಟ್‌ಗಳು ಮತ್ತು 96 ಅಧಿಕಾರಿಗಳು ಜ್ಯೂನಿಯರ್ ಡಿವಿಷನ್ನಿನ 114 ಕೆಡೆಟ್‌ಗಳು ಮತ್ತು ಮೂರು ಮಂದಿ ಅಧಿಕಾರಿಗಳು ಭಾಗವಹಿಸಿದ್ದರು.

ಇಪ್ಪತ್ತೆಂಟನೇಯ ಕರ್ನಾಟಕ ಬೆಟ್ಯಾಲಿಯನ್ ಎನ್‌ಸಿಸಿ 1969 ರಲ್ಲಿ ಎಂಟು ಸೀನಿಯರ್ ಮತ್ತು ಎರಡು ಜ್ಯೂನಿಯರ್ ಡಿವಿಜನ್ನಿನ ಟ್ರೂಪ್‌ಗಳೊಂದಿಗೆ ಹುಬ್ಬಳ್ಳಿಯಲ್ಲಿ ಪ್ರಾರಂಭವಾಯಿತು. ಪ್ರಸ್ತುತ 480 ಸೀನಿಯರ್ ಡಿವಿಜನ್ನಿನ ಪೂರ್ಣ ಕಂಪೆನಿಗಳನ್ನು 320 ಸೀನಿಯರ್ ಡಿವಿಜನ್ನಿನ ಅರೆಕಂಪನಿಗಳನ್ನೂ, 400 ಜ್ಯೂನಿಯರ್ ಡಿವಿಷನ್ನಿನ ಕೆಡೆಟ್‌ಗಳನ್ನೂ ಹೊಂದಿರುತ್ತದೆ. ಇತರ ಸೀನಿಯರ್ ಡಿವಿಷನ್ ಕೆಡೆಟ್‌ಗಳನ್ನು ಹೊಂದಿರುವ ಸಂಸ್ಥೆಗಳೆಂದರೆ ಹುಬ್ಬಳ್ಳಿಯ ಪಿ.ಸಿ. ಜಬಿನ್ ಸೈನ್ಸ್ ಕಾಲೇಜ್ (160), ಜೆ.ಜಿ. ಕಾಮರ್ಸ್ ಕಾಲೇಜ್ (160), ಜೆ.ಎಸ್.ಎಸ್. ಕಾಲೇಜ್, ಧಾರವಾಡ (80), ಪಿ.ಸಿ. ಜಬಿನ್ ಸೈನ್ಸ್ ಕಾಲೇಜ್, ಹುಬ್ಬಳ್ಳಿ, (80), ಜ್ಯೂನಿಯರ್ ಡಿವಿಷನ್ನಿನ 100 ಕೆಡೆಟ್‌ಗಳನ್ನು ಹುಬ್ಬಳ್ಳಿಯ ಕೆ.ಎನ್.ಇ. ಹೈಸ್ಕೂಲು ಹೊಂದಿರುತ್ತದೆ.

**ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್** : ಈ ಜಿಲ್ಲಾ ಸಂಸ್ಥೆ 1920 ರಲ್ಲಿ ಧಾರವಾಡದಲ್ಲಿ ಪ್ರಾರಂಭವಾಯಿತು. ಇದೊಂದು ಸ್ವತಂತ್ರ ಸೇವಾ ಸಂಘಟನೆಯಾಗಿದ್ದು, ಅಂತರ ರಾಷ್ಟ್ರೀಯ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತದೆ. ಮಕ್ಕಳ ದೈಹಿಕ, ಸಾಮಾಜಿಕ, ಆಧ್ಯಾತ್ಮಿಕ ಬೆಳವಣಿಗೆಯೇ ಅಲ್ಲದೆ, ಅವರಲ್ಲಿ ರಾಷ್ಟ್ರಪ್ರೇಮ, ಕೋಮುಸೌಹಾರ್ದ, ಗ್ರಾಮೀಣ ಸೇವೆ, ಶಾಂತಿ ಹಾಗೂ ಏಕತೆಗಳನ್ನು ಮೈಗೂಡಿಸಿಕೊಳ್ಳಲು ಸಹಾಯ ಮಾಡುವ ಮೂಲ ಉದ್ದೇಶಗಳನ್ನು ಈ ಸಂಸ್ಥೆ ಹೊಂದಿದೆ. 1952 ರಲ್ಲಿ ಇದನ್ನು ಶೈಕ್ಷಣಿಕ ಸಂಸ್ಥೆ ಎಂದೂ ನೋಂದಾಯಿಸಲಾಗಿದೆ.

ಸ್ವಯಂಪ್ರೇರಿತರಾಗಿ ಸೇವಾಮನೋಭಾವದಿಂದ ಯಾವುದೇ ಫಲಾಪೇಕ್ಷೆ ಇಲ್ಲದೆ ದುಡಿಯುವ ಹಲವಾರು ಅಧಿಕಾರಿ ಹಾಗೂ ಅಧಿಕಾರೇತರ ವ್ಯಕ್ತಿಗಳನ್ನು ಮಾರ್ಗದರ್ಶಕರನ್ನಾಗಿ ಹೊಂದಿರುವ ಈ ಸಂಸ್ಥೆ, ತನ್ನ ಚಟುವಟಿಕೆಗಳನ್ನು ಸಾರ್ವಜನಿಕರ, ದಾನಿಗಳ, ಅಧಿಕಾರಿಗಳ ಮತ್ತು ಹಲವು ರಾಜ್ಯ ಸಂಸ್ಥೆಗಳ ಕಾಣಿಕೆಗಳಿಂದ ನಡೆಸುತ್ತದೆ.

ಮಕ್ಕಳ ಆಸಕ್ತಿಗೆ ತಕ್ಕಂತೆ ವಿವಿಧ ಪರೀಕ್ಷಾ ತರಬೇತಿ, ನಾಯಕತ್ವ ತರಬೇತಿ, ರಾಜ್ಯಪಾಲರ ಹಾಗೂ ರಾಷ್ಟ್ರಪತಿಗಳ ಪದಕಕ್ಕೆ ತರಬೇತಿ, ಸಮುದಾಯ ಮತ್ತು ಗ್ರಾಮ ಸೇವಾ ಶಿಬಿರಗಳು, ವಾರ್ಷಿಕ ಮೇಳಗಳನ್ನು ನಡೆಸಲಾಗುತ್ತದೆ. ಶಿಕ್ಷಕರಿಗಾಗಿ ವಿವಿಧ ಹಂತಗಳ ಶಿಕ್ಷಕ ತರಬೇತಿ, ವಿಚಾರ ಸಂಕಿರಣಗಳು, ಸಮ್ಮೇಳನಗಳೂ ನಡೆಸಲ್ಪಡುತ್ತವೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ತಾಲೂಕುಮಟ್ಟದ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದೆ ಹಾಗೂ ಆಸಕ್ತ ವ್ಯಕ್ತಿಗಳನ್ನು ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ರಾಷ್ಟ್ರಮಟ್ಟದ ಜಾಂಬೂರಿಗಳಲ್ಲಿಯೂ ಭಾಗವಹಿಸುವ ಈ ಸಂಸ್ಥೆಯಿಂದ 1993-94ಕ್ಕೆ 33 ಸ್ಕೌಟ್ಸ್ ಮತ್ತು 25 ಗೈಡ್ಸ್‌ಗಳು ರಾಷ್ಟ್ರಪ್ರಶಸ್ತಿ ಪಡೆದಿರುತ್ತಾರೆ. ಈ ಸಂಸ್ಥೆಯಿಂದ 25 ಮಕ್ಕಳನ್ನು ಮತ್ತು ಶಿಕ್ಷಕರನ್ನು ಜಪಾನ್, ಅಮೇರಿಕಾ, ಕೆನಡಾ, ಶ್ರೀಲಂಕಾ, ಇರಾನ್‌ಗಳಲ್ಲಿ ನಡೆದ ಜಾಗತಿಕ ಮತ್ತು ಅಂತರರಾಷ್ಟ್ರೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಕಳುಹಿಸಲಾಗಿದೆ. 1995 ಕ್ಕೆ ತನ್ನ ಅಮೃತ ಮಹೋತ್ಸವ ನಡೆಸಲಿರುವ ಈ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿಗಳಿಗೆ ಉತ್ತಮ ಸೇವೆಗಾಗಿ ರಾಷ್ಟ್ರಪತಿಗಳ 'ರಜತ ನಕ್ಷತ್ರ' ದೊರೆತಿದೆ.

## ಕಾಲೇಜು ಶಿಕ್ಷಣ

ಮುಂಬೈ ಕರ್ನಾಟಕದ ಪ್ರಥಮ ಉಚ್ಚ ವ್ಯಾಸಂಗ ಸಂಸ್ಥೆಯಾದ ಕರ್ನಾಟಕ ಕಾಲೇಜು ಧಾರವಾಡದಲ್ಲಿ 1917 ರಲ್ಲಿ ಪ್ರಾರಂಭವಾಯಿತು. ರೊದ್ದ ಶ್ರೀನಿವಾಸರಾವ್, ಅರಟಾಳ ರುದ್ರಗೌಡ ಹಾಗೂ ಸಿದ್ದಪ್ಪ ಕಂಬಳಿ ಇದರ ಸ್ಥಾಪನೆಗೆ ದುಡಿದವರು. ಇದಕ್ಕೆ ಮೊದಲು ಮೆಟ್ರಿಕ್ ಪಾಸಾದ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣಕ್ಕೆ ಪುಣೆ, ಮುಂಬೈ ಅಥವಾ ಕೊಲ್ಹಾಪುರಗಳಿಗೆ ಹೋಗಬೇಕಿತ್ತು. ಅನೇಕ ಖ್ಯಾತ ವಿದ್ವಾಂಸ ಅಧ್ಯಾಪಕರನ್ನೂ ಮುಂದೆ ಗಣ್ಯರಾದ ವಿದ್ಯಾರ್ಥಿಗಳನ್ನೂ ಹೊಂದಿದ್ದ ಕರ್ನಾಟಕ ಕಾಲೇಜು ಒಂದು ಸುಸಜ್ಜಿತ ಕಾಲೇಜಾಗಿ ಬೆಳೆದು ಸ್ನಾತಕೋತ್ತರ ತರಗತಿಗಳನ್ನು ಹೊಂದಿತ್ತು. ಆಗಿನ ವಿಕ್ಟೋರಿಯಾ ಹೈಸ್ಕೂಲು 1920ರಲ್ಲಿ ಕರ್ನಾಟಕ ಎಜುಕೇಷನ್ ಸೊಸೈಟಿ ಕಾಲೇಜ್ ಎಂಬ ನಾಮಾಂಕಿತದಲ್ಲಿ ಕಾಲೇಜಾಗಿ ಮಾರ್ಪಟ್ಟಿತಾದರೂ, ಅಸಹಕಾರ ಚಳವಳಿಯ ಕಾರಣ ಮರುವರ್ಷವೇ ಮುಚ್ಚಲ್ಪಟ್ಟಿತು. ಜಿಲ್ಲೆಯ ನಂತರದ ಕಾಲೇಜುಗಳೆಂದರೆ, ಕೆ.ಇ. ಬೋರ್ಡ್‌ನ ಕಲಾ ಕಾಲೇಜು, ಧಾರವಾಡ (1944 ಇದೇ ಮುಂದೆ ಜನತಾ ಶಿಕ್ಷಣ ಸಮಿತಿಯು ಸಾಯನ್ಸ್ ಮತ್ತು ಬನಶಂಕರಿ ಆರ್ಟ್ಸ್ ಕಾಲೇಜಾಯಿತು), ಜಗದ್ಗುರು ಗಂಗಾಧರ ವಾಣಿಜ್ಯ ಕಾಲೇಜು, ಹುಬ್ಬಳ್ಳಿ (1947), ಕೃಷಿ ಕಾಲೇಜು, ಧಾರವಾಡ (1947) ಬಿವಿಬಿ ಇಂಜನೀಯರಿಂಗ್ ಕಾಲೇಜು (1948), ಜನತಾ ಸಾಯನ್ಸ್ ಕಾಲೇಜು, ಧಾರವಾಡ (1949), ಕಾಡಸಿದ್ಧೇಶ್ವರ ಕಾಲೇಜು, ಹುಬ್ಬಳ್ಳಿ (1952) ಹಾಗೂ ಜನತಾ ಶಿಕ್ಷಣ ಸಮಿತಿಯ ಕಾನೂನು ಕಾಲೇಜು (1955).

ಮರಾಠಿ ಪ್ರಾಬಲ್ಯದ ಆಗಿನ ದಿನಗಳಲ್ಲಿ ಬಿ.ಎ. ಪಾಸು ಮಾಡಿದ ಪ್ರಥಮ ಕನ್ನಡಿತ ಭಾಸ್ಕರರಾವ್ ಜತಾರರನ್ನು ಬಿ.ಎ. ಜತಾರರೆಂದೂ, ರೆವಿನ್ಯೂ ವಿಭಾಗದಲ್ಲಿ ಎಂ.ಎ. ಪಾಸು ಮಾಡಿದ ಪ್ರಥಮ ಕನ್ನಡಿಗ ರಾ.ಹ. ದೇಶಪಾಂಡೆಯವರನ್ನು ಎಂ.ಎ. ದೇಶಪಾಂಡೆ ಎಂದೇ ಕರೆಯುತ್ತಿದ್ದರು. ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದ ಕರ್ನಾಟಕದ ಪ್ರಥಮ ಮಹಿಳೆ ಕಮಲಾಬಾಯಿ ಜಮಖಂಡಿ ಧಾರವಾಡದವರು.

1993-94ನೇ ಸಾಲಿಗೆ ಜಿಲ್ಲೆಯಲ್ಲಿ ಒಟ್ಟು 64 ಪ್ರಥಮ ದರ್ಜೆ ಕಾಲೇಜುಗಳಿದ್ದವು. ಇವುಗಳಲ್ಲಿ 10 ಸರಕಾರಿ, 26 ಅನುದಾನಿತ ಮತ್ತು 28 ಅನುದಾನ ರಹಿತ ಕಾಲೇಜುಗಳಾಗಿದ್ದವು. ಸರಕಾರಿ ಕಾಲೇಜುಗಳಲ್ಲಿ ಒಟ್ಟು 2,593 ಮಂದಿ (1,945 ಗಂಡು, 648 ಹೆಣ್ಣು) ವ್ಯಾಸಂಗ ಮಾಡುತ್ತಿದ್ದು, ಅವರ ಪೈಕಿ 217 ಪ.ಜಾತಿ ವಿದ್ಯಾರ್ಥಿಗಳು, 43 ಪರಿಶಿಷ್ಟ ಜಾತಿ ವಿದ್ಯಾರ್ಥಿನಿಯರು, 140 ಪರಿಶಿಷ್ಟ ವರ್ಗ ವಿದ್ಯಾರ್ಥಿಗಳು 10 ಪರಿಶಿಷ್ಟ ವರ್ಗ ವಿದ್ಯಾರ್ಥಿನಿಯರು ಸೇರಿದ್ದರು. ಅನುದಾನಿತ ಖಾಸಗಿ ಕಾಲೇಜುಗಳಲ್ಲಿ ಒಟ್ಟು 28,874 ಮಂದಿ (16,418 ಗಂಡು, 12,456 ಹೆಣ್ಣು) ವ್ಯಾಸಂಗ ಮಾಡುತ್ತಿದ್ದು, ಇವರ ಪೈಕಿ 1099 ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು, 869 ಪರಿಶಿಷ್ಟ ಜಾತಿ ವಿದ್ಯಾರ್ಥಿನಿಯರು, 613 ಪರಿಶಿಷ್ಟ ವರ್ಗ ವಿದ್ಯಾರ್ಥಿಗಳು, 354 ಪರಿಶಿಷ್ಟ ವರ್ಗ ವಿದ್ಯಾರ್ಥಿನಿಯರು ಸೇರಿದ್ದರು. ಅನುದಾನ ರಹಿತ ಖಾಸಗಿ ಕಾಲೇಜುಗಳಲ್ಲಿ ಒಟ್ಟು 6,786 ಮಂದಿ (5,163 ಗಂಡು, 1,623 ಹೆಣ್ಣು) ವ್ಯಾಸಂಗ

ಮಾಡುತ್ತಿದ್ದು, ಇವರ ಪೈಕಿ 475 ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು, 114 ಪರಿಶಿಷ್ಟ ಜಾತಿ ವಿದ್ಯಾರ್ಥಿನಿಯರು, 247 ಪರಿಶಿಷ್ಟ ವರ್ಗ ವಿದ್ಯಾರ್ಥಿಗಳು, 32 ಪ.ವರ್ಗ ವಿದ್ಯಾರ್ಥಿನಿಯರು ಸೇರಿದ್ದರು. ಜಿಲ್ಲೆಯ ಪ್ರಥಮ ದರ್ಜೆ ಕಾಲೇಜುಗಳಿಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 38,253 ಆಗಿತ್ತು. (ಅಂಕಿ ಅಂಶಗಳನ್ನು ಕಾಲೇಜು ಶಿಕ್ಷಣ ಇಲಾಖೆ ಒದಗಿಸಿದೆ).

**ಶಿಕ್ಷಕರ ತರಬೇತಿ ಕಾಲೇಜುಗಳು** : ಜಿಲ್ಲೆಯಲ್ಲಿ ಒಟ್ಟು ಐದು ಶಿಕ್ಷಕರ ತರಬೇತಿ ಕಾಲೇಜುಗಳಿದ್ದು, ಇವುಗಳಲ್ಲಿ ಒಂದು ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಟ್ಟರೆ, ಉಳಿದ ನಾಲ್ಕು ಖಾಸಗಿ ಅನುದಾನ ರಹಿತ ಸಂಸ್ಥೆಗಳಾಗಿರುತ್ತವೆ. ಅವೆಂದರೆ - ಜಗದ್ಗುರು ಪಂಚಾಚಾರ್ಯ ಶಿಕ್ಷಕರ ಕಾಲೇಜು ಗದಗ, ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ಕಾಲೇಜು ಹುಬ್ಬಳ್ಳಿ, ಜನತಾ ಎಜುಕೇಷನ್ ಕೊ-ಆಪರೇಟಿವ್ ಸಂಸ್ಥೆಯ ಶಿಕ್ಷಕರ ಕಾಲೇಜು ಹಾನಗಲ್, ಹಾಗೂ ವಿಜಯನಗರ ಶಿಕ್ಷಕರ ಕಾಲೇಜು ಹುಬ್ಬಳ್ಳಿ. ಮೇಲಿನ ಐದೂ ಸಂಸ್ಥೆಗಳಲ್ಲಿ 1992-92ನೇ ಸಾಲಿಗೆ ಕನ್ನಡ ಮಾಧ್ಯಮದಲ್ಲಿ 451 ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿ 84 ಮಂದಿ ವ್ಯಾಸಂಗ ಮಾಡಿದರೆ, 1992-93ನೇ ಸಾಲಿಗೆ ಕ್ರಮವಾಗಿ 246 ಮತ್ತು 274 ಮಂದಿ ವ್ಯಾಸಂಗ ಮಾಡಿದರು. ಮೇಲಿನ ಎರಡು ವರ್ಷಗಳಿಗೆ ವಿಶ್ವವಿದ್ಯಾಲಯ ಶಿಕ್ಷಕರ ಕಾಲೇಜಿನಲ್ಲಿ ಕ್ರಮವಾಗಿ 105 ಮಂದಿ (75 ಗಂಡು, 30 ಹೆಣ್ಣು) ಹಾಗೂ 100 ಮಂದಿ (66 ಗಂಡು, 34 ಹೆಣ್ಣು); ಮತ್ತು ಖಾಸಗಿ ಅನುದಾನ ರಹಿತ ಕಾಲೇಜುಗಳಲ್ಲಿ ಒಟ್ಟು 430 ಮಂದಿ (301 ಗಂಡು, 129 ಹೆಣ್ಣು) ಹಾಗೂ 520 ಮಂದಿ (306 ಗಂಡು, 114 ಹೆಣ್ಣು) ವ್ಯಾಸಂಗ ಮಾಡುತ್ತಿದ್ದರು. ಎಲ್ಲಾ ಐದು ಸಂಸ್ಥೆಗಳಿಂದ 1991-92ನೇ ಸಾಲಿಗೆ ಪರೀಕ್ಷೆಗೆ ಹಾಜರಾದ ಒಟ್ಟು 523 ಮಂದಿಯಲ್ಲಿ (364 ಗಂಡು, 159 ಹೆಣ್ಣು) ಒಟ್ಟು 476 ಮಂದಿ (350 ಗಂಡು, 126 ಹೆಣ್ಣು) ಅಥವಾ ಶೇಕಡಾ 9.10 ಉತ್ತೀರ್ಣರಾದರು. 1992-93ನೇ ಸಾಲಿಗೆ ಒಟ್ಟು 515 ಮಂದಿ (371 ಗಂಡು, 144 ಹೆಣ್ಣು) ಪರೀಕ್ಷೆಗೆ ಹಾಜರಾಗಿ, ಅವರಲ್ಲಿ ಒಟ್ಟು 385 ಮಂದಿ (298 ಗಂಡು, 87 ಹೆಣ್ಣು) ಅಥವಾ ಶೇಕಡಾ 74.76 ಮಂದಿ ಉತ್ತೀರ್ಣರಾದರು.

## ಕರ್ನಾಟಕ ವಿಶ್ವವಿದ್ಯಾಲಯ

ಜಸ್ಟಿಸ್ ಲೋಕೂರ ಅವರ ಅಧ್ಯಕ್ಷತೆಯಲ್ಲಿ 1947ರಲ್ಲಿ ನೇಮಿಸಿದ್ದ ಸಮಿತಿಯು ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗೆ ಶಿಫಾರಸು ಮಾಡಿತು. ಧಾರವಾಡ, ಬಿಜಾಪುರ, ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ವ್ಯಾಪ್ತಿ ಹೊಂದಿದ ಕರ್ನಾಟಕ ವಿಶ್ವವಿದ್ಯಾಲಯ 1949ರಲ್ಲಿ ಪ್ರಾರಂಭವಾಗಿ, ಇದರ ಕಚೇರಿ ಮೊದಲು ಮುಂಬೈಯಲ್ಲಿ ಇದ್ದು, ಅಕ್ಟೋಬರ್‌ನಲ್ಲಿ ಧಾರವಾಡದ ಟ್ರೇನಿಂಗ್ ಕಾಲೇಜ್ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಿತು. ಇದು ಕರ್ನಾಟಕ ರಾಜ್ಯದ ಎರಡನೇಯ ವಿಶ್ವವಿದ್ಯಾಲಯವಾಗಿದ್ದು ಆರ್.ಎ. ಜಾಗೀರ್‌ದಾರ್ ಇದರ ಪ್ರಥಮ ಕುಲಪತಿಗಳಾಗಿದ್ದರು. 1950ರ ಮಾರ್ಚ್ 1ಕ್ಕೆ ಇದು ಶಾಸನಬದ್ಧ ಸಂಸ್ಥೆಯಾಗಿ ರೂಪುಗೊಂಡಿತು. ಮುಂದೆ ರ‍್ಯಾಂಗ್ಲರ್ ಪಾವಟೆಯವರು ಮೂರನೇಯ ಕುಲಪತಿಗಳಾಗಿದ್ದಾಗ ಹೊಸ ನಿವೇಶನ ಛೋಟಾ ಮಹಾಬಲೇಶ್ವರ (ಈಗ ಪಾವಟೆ ನಗರ)ದಲ್ಲಿ ಕಟ್ಟಡಗಳ ರಚನೆಯಾಗಿ ವಿಶ್ವವಿದ್ಯಾಲಯಕ್ಕೆ ಆಕರ್ಷಕ ಕ್ಯಾಂಪಸ್ ನಿರ್ಮಾಣವಾಯಿತು. ಅವರು 13 ವರ್ಷ ಕುಲಪತಿಯಾಗಿ ಇದರ ಬಹುಮುಖ ಪ್ರಗತಿಗೆ ಕಾರಣರಾದರು. ಕಲೆ, ವಾಣಿಜ್ಯ, ವಿಜ್ಞಾನ, ಸಮಾಜ ವಿಜ್ಞಾನ, ಇಂಜನೀಯರಿಂಗ್, ವೈದ್ಯವಿಜ್ಞಾನ, ಕಾನೂನು, ಆಯುರ್ವೇದ ಮತ್ತು ಶಿಕ್ಷಣಗಳಂತಹ ಶಿಸ್ತುಗಳನ್ನು ಹೊಂದಿರುವ ಈ ವಿಶ್ವವಿದ್ಯಾಲಯ ನಾಲ್ಕೂ ಜಿಲ್ಲೆಗಳಲ್ಲಿ ಒಟ್ಟು 236 ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳನ್ನು ಹೊಂದಿದೆ. ಇವುಗಳಲ್ಲಿ 95 ಸಂಸ್ಥೆಗಳು ಧಾರವಾಡ ಜಿಲ್ಲೆಯಲ್ಲಿಯೇ ಇವೆ. ಸ್ನಾತಕೋತ್ತರ ಬೋಧನ ಹಾಗೂ ಸಂಶೋಧನೆಗಳಿಗಾಗಿ ವಿವಿಧ ಒಟ್ಟು 38 ವಿಭಾಗಗಳು ಧಾರವಾಡದಲ್ಲಿ ಕಾರ್ಯನಿರತವಾಗಿವೆ. ವಿಶ್ವವಿದ್ಯಾಲಯದ ಪರಿಸರದಲ್ಲಿ ತೋಟಗಳು, ಈಜುಕೊಳ, ಸಭಾಭವನ, ಮನರಂಜನಾ ಕೇಂದ್ರಗಳು ರೂಪುಗೊಂಡಿವೆ. ದೀರ್ಘಕಾಲ ಪ್ರೊ: ಸದಾಶಿವ ಒಡೆಯರ್ ಇದರ ರಿಜಿಸ್ಟ್ರಾರ್ ಆಗಿದ್ದು ಕೊನೆಗೆ ಕುಲಪತಿಗಳೂ ಆದರು. ಪಾವಟೆ, ಒಡೆಯರ್ ಜೋಡಿ ಈ ಸಂಸ್ಥೆಯ ಆರಂಭದ ವರ್ಷಗಳಲ್ಲಿ ಅಪೂರ್ವ ದುಡಿಮೆಯ ಕೊಡುಗೆ ನೀಡಿತು. ರಾಜ್ಯಪುನರ್ಘಟನೆಯ ನಂತರ ಹೈದರಾಬಾದ್ ಕರ್ನಾಟಕ ಮತ್ತು ಮಣಿಪಾಲದ ಸಂಸ್ಥೆಗಳೂ ಇದರ ಕಕ್ಷೆಯಲ್ಲಿ ಇದ್ದವು. ಗುಲ್ಬರ್ಗದಲ್ಲಿ ಸ್ನಾತಕೋತ್ತರ ಕೇಂದ್ರ ತೆರೆದು ಮುಂದೆ ಗುಲ್ಬರ್ಗ ವಿಶ್ವವಿದ್ಯಾಲಯವಾದಾಗ (1980) ಗುಲ್ಬರ್ಗಾ ವಿಭಾಗದ ಕಾಲೇಜುಗಳು ಆ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಹೊಂದಿದವು.

ಈಗ ಇದರ ವ್ಯಾಪ್ತಿಗೊಳಪಡುವ ಜಿಲ್ಲೆಯ 95 ಸಂಸ್ಥೆಗಳಲ್ಲಿ 1993-94ನೇ ಸಾಲಿಗೆ ಒಟ್ಟು 31,692 ಮಂದಿ (23,131 ಗಂಡು ಮತ್ತು 8,562 ಹೆಣ್ಣು) ವ್ಯಾಸಂಗ ಮಾಡುತ್ತಿದ್ದರು. ಇವರಲ್ಲಿ ಒಟ್ಟು 2,720 ಮಂದಿ (2141 ಗಂ. ಮತ್ತು 579 ಹೆ.)

ಪರಿಶಿಷ್ಟ ಜಾತಿ ಮತ್ತು ಒಟ್ಟು 1,121 ಮಂದಿ (916 ಗಂಡು ಮತ್ತು 205ಹೆಣ್ಣು) ಪರಿಶಿಷ್ಟ ವರ್ಗದವರು ಸೇರಿದ್ದರು. ಎಲ್ಲಾ ಸಂಸ್ಥೆಗಳ ಒಟ್ಟು ಬೋಧಕ ಸಿಬ್ಬಂದಿಯ ಸಂಖ್ಯೆ 2,147 ಆಗಿದ್ದು ಅವರಲ್ಲಿ 360 ಮಂದಿ ಹೆಂಗಸರಿದ್ದರು.

1992-93ನೇ ಶೈಕ್ಷಣಿಕ ಸಾಲಿನ ಹೊತ್ತಿಗೆ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ, ಎಂ.ಫಿಲ್ ಹಾಗೂ ಪಿ.ಎಚ್.ಡಿ. ತರಗತಿಗಳಿಗೆ ಒಟ್ಟು 4,033 ಮಂದಿ ದಾಖಲಾಗಿದ್ದು, ಇದರಲ್ಲಿ 2,896 ಗಂಡಸರು ಮತ್ತು 1,330 ಹೆಂಗಸರಿದ್ದರು. ಇವರಲ್ಲಿ ಒಟ್ಟು 413 ಪರಿಶಿಷ್ಟ ಜಾತಿ (358 ಗಂ, 55 ಹೆಂ.) ಹಾಗೂ ಒಟ್ಟು 83 ಪರಿಶಿಷ್ಟ ವರ್ಗ (73 ಗಂ, 10 ಹೆಂ.)ದವರಿದ್ದರು.

ವಿದ್ಯಾರ್ಥಿ ಸಮುದಾಯದ ಶೈಕ್ಷಣಿಕ ಅವಶ್ಯಕತೆಗಳಿಗೆ ಅನುಗುಣವಾಗಿ ಸುಮಾರು ಮೂರು ಲಕ್ಷ ಪುಸ್ತಕ ಹಾಗೂ ನಿಯತಕಾಲಿಕೆಗಳ ಸಾಮಾನ್ಯ ಗ್ರಂಥಾಲಯವು ಇಲ್ಲಿದೆ. ಕನ್ನಡ ಸಂಶೋಧನಾ ಸಂಸ್ಥೆಯ ಗ್ರಂಥಾಲಯ ಒಂದು ವಿಶಿಷ್ಟ ವಿಷಯಗಳ ಗ್ರಂಥಾಲಯವಾಗಿದ್ದು, ಕಲೆ, ಸಂಸ್ಕೃತಿ, ಶಾಸನಶಾಸ್ತ್ರ, ಇತಿಹಾಸ, ಭಾಷೆ ಹಾಗೂ ಸಂಸ್ಕೃತ ಜಾನಪದಗಳ ಬಗ್ಗೆ ಹಸ್ತಪ್ರತಿ, ಪುಸ್ತಕ ಮತ್ತು ನಿಯತಕಾಲಿಕೆಗಳನ್ನು ಹೊಂದಿದೆ. ವಿಶ್ವವಿದ್ಯಾಲಯದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶಿಕ್ಷಣ ಶಾಸ್ತ್ರ ಗ್ರಂಥಾಲಯ, ಕಾಯಿದೆ ಮಹಾವಿದ್ಯಾಲಯದಲ್ಲಿ ಕಾಯಿದೆ ಸಂಬಂಧ ಸಮಕಾಲೀನ ಬೆಳವಣಿಗೆಗಳ ಗ್ರಂಥಗಳನ್ನು ಹೊಂದಿದ ಗ್ರಂಥಾಲಯಗಳಿವೆ.

ಇಲ್ಲಿನ ಪ್ರಸಾರಾಂಗವು 1000 ಕ್ಕೂ ಮೇಲ್ಪಟ್ಟು ಪುಸ್ತಕಗಳನ್ನು ಪ್ರಕಟಿಸಿದ್ದು ಖ್ಯಾತಕವಿ ಚನ್ನವೀರ ಕಣವಿ ಇದರ ನಿರ್ದೇಶಕರಾಗಿದ್ದರು. ವಿಶೇಷ ಉಪನ್ಯಾಸ ಮಾಲೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಇದು ನಡೆಸುತ್ತ ಬಂದಿದೆ. ಜ್ಞಾನವನ್ನು ಗ್ರಾಮೀಣರಿಗೆ ಮುಟ್ಟಿಸುವ ಕಾರ್ಯವನ್ನು ಯಶಸ್ವಿಯಾಗಿ ಮಾಡುತ್ತಿದೆ.

ಅಖಿಲಭಾರತ ಮಟ್ಟದ ಸಂಸ್ಥೆಗಳು ನಡೆಸುವ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಿಗೆ ವಿಶ್ವವಿದ್ಯಾಲಯದಲ್ಲಿ ವಿಶೇಷ ತರಬೇತಿ ತರಗತಿಗಳು ನಡೆಯುತ್ತವೆ. ಶೈಕ್ಷಣಿಕ ಸಮುದಾಯ ಮತ್ತು ಸಮಾಜದ ನಡುವೆ ಉತ್ತಮ ಸಂಬಂಧವೇರ್ಪಡಲು ವಿಶ್ವವಿದ್ಯಾಲಯ ಫೌಂಡೇಷನ್ ಕೋರ್ಸ್ ಉಪನ್ಯಾಸಮಾಲೆ ಆರಂಭಿಸಿದೆ. ಪ್ರತಿವರ್ಷ ಅಂತರ ಕಾಲೇಜು ಕ್ರೀಡೆಗಳನ್ನೂ ನಡೆಸಲಾಗುತ್ತದೆ. ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಉತ್ತಮ ಮಟ್ಟದ ಸಂಶೋಧನೆ ನಡೆದಿದ್ದು ಕನ್ನಡ ಸಂಶೋಧನ ಸಂಸ್ಥೆ (ಕೆ.ಆರ್.ಐ.) ಕಾನಾಳಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಕ್ರಿಮಿನಾಲಜಿ ವಿಭಾಗ, ವಿದೇಶೀ ಭಾಷೆಗಳ ವಿಭಾಗ ಹಾಗೂ ಯೋಗ ಅಧ್ಯಯನ ವಿಭಾಗಗಳು ದೇಶವಿದೇಶಗಳ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿವೆ.

ಪ್ರಾರಂಭದಲ್ಲಿ ಮುಂಬಯಿ ಪ್ರಾಂತ್ಯದ ರಾಜ್ಯಪಾಲರು ಕುಲಾಧಿಪತಿಗಳಾಗಿದ್ದು ಈಗ ಕರ್ನಾಟಕ ರಾಜ್ಯಪಾಲರೇ ಆ ಸ್ಥಾನವನ್ನಲಂಕರಿಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಕುಲಪತಿ, ಸೆನೆಟ್ ಸದಸ್ಯರು, ಸಿಂಡಿಕೇಟ್ ಮತ್ತು ಅಕೆಡೆಮಿಕ್ ಕೌನ್ಸಿಲ್ ಸದಸ್ಯರು ಕಾರ್ಯನಿರ್ವಹಿಸುತ್ತಾರೆ.

ವಿಶ್ವವಿದ್ಯಾಲಯದ ಗ್ರಂಥಾಲಯವು ಮುಧೋಳ ಸಂಸ್ಥಾನಿಕರ ಕಾಣಿಕೆಯಾದ 2,514 ಗ್ರಂಥಗಳು ಸೇರಿದಂತೆ, ಒಟ್ಟು 10,000 ಮೂಲ ಗ್ರಂಥ ಸಂಗ್ರಹದೊಂದಿಗೆ, 1950ರಲ್ಲಿ ಧಾರವಾಡದ ಪುರುಷರ ಸರಕಾರಿ ಟ್ರೈನಿಂಗ್ ಕಾಲೇಜಿನಲ್ಲಿ ಆರಂಭವಾಯಿತು.

**ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ :** ಈ ಸಂಸ್ಥೆ ಹುಬ್ಬಳ್ಳಿಯಲ್ಲಿ ಕರ್ನಾಟಕ ರಾಜ್ಯ ಸರಕಾರದಿಂದ 1957ರ ಸೆಪ್ಟೆಂಬರ್‌ನಲ್ಲಿ ಸ್ಥಾಪಿಸಲ್ಪಟ್ಟಿತು. ಈಗಿನ ವಿದ್ಯಾಲಯದ ಮತ್ತು ಆಸ್ಪತ್ರೆಯ ಕಟ್ಟಡಗಳು 1960ರಲ್ಲಿ ಪ್ರಾರಂಭಿಸಲ್ಪಟ್ಟವು. ಹಲವು ಹತ್ತು ವಿಷಯಗಳಲ್ಲಿ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ, ವೈದ್ಯಕೀಯ ಪದವಿ ಪೂರ್ವ ಹಾಗೂ ಸ್ನಾತಕೋತ್ತರ ವೃತ್ತಿ ತರಬೇತಿಗಳನ್ನು ನಡೆಸುತ್ತದೆ. ಪ್ರತೀ ವರ್ಷ ವೈದ್ಯ ಪದವಿಗೆ 130 ಹಾಗೂ ಇತರೆ ವಿಷಯಗಳ ಸ್ನಾತಕೋತ್ತರ ವ್ಯಾಸಂಗಕ್ಕೆ 150 ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶಾವಕಾಶವಿದೆ. ಇವರ ಅನುಕೂಲಕ್ಕಾಗಿ ನಾಲ್ಕು ವಿದ್ಯಾರ್ಥಿನಿಲಯಗಳಿವೆ. ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯವು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಿದ್ದು, ಭಾರತೀಯ ವೈದ್ಯಕೀಯ ಕೌನ್ಸಿಲ್‌ನಿಂದ ಮಾನ್ಯತೆ ಪಡೆದಿದೆ. ಇಲ್ಲಿ ಒಂದು ಸುಸಜ್ಜಿತ ಗ್ರಂಥಾಲಯವಿದ್ದು, 20 ಸಾವಿರಕ್ಕೂ ಹೆಚ್ಚಿನ ಗ್ರಂಥಗಳು ಹಾಗೂ ನಿಯತಕಾಲಿಕೆಗಳಿಂದ ಸಜ್ಜಿತವಾಗಿದೆ. ಇಲ್ಲಿನ ಆಸ್ಪತ್ರೆ ಕರ್ನಾಟಕದ ಒಂದು ಗಣ್ಯ ಆಸ್ಪತ್ರೆಯಾಗಿದ್ದು ಸುಮಾರು 800 ಹಾಸಿಗೆಗಳನ್ನು ಹೊಂದಿದೆ. ಒಂದೇ ಆವರಣದಲ್ಲಿ ಆಸ್ಪತ್ರೆ, ಕಾಲೇಜು, ಹಾಸ್ಟೆಲ್‌ಗಳು ಹಾಗೂ ಗ್ರಂಥಾಲಯವನ್ನು ಹೊಂದಿರುವುದು ಈ ಸಂಸ್ಥೆಯ ವೈಶಿಷ್ಟ್ಯವಾಗಿದೆ.

ಇದಲ್ಲದೆ ಧಾರವಾಡದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಡೆಂಟಲ್ ಕಾಲೇಜು ದಂತ ಚಿಕಿತ್ಸಾ ಶಿಕ್ಷಣ ನೀಡುತ್ತಿದೆ. ಇದು ಪದವಿ ಕಾಲೇಜಾಗಿದೆ.

**ಕಾನೂನು ಶಿಕ್ಷಣ :** ಧಾರವಾಡದಲ್ಲಿ ಸುಮಾರು 45 ವಿದ್ಯಾರ್ಥಿಗಳೊಂದಿಗೆ 1955ರಲ್ಲಿ ಪ್ರಾರಂಭವಾದ ಜೆ.ಎಸ್.ಎಸ್. ಕಾನೂನು ಕಾಲೇಜು ಜಿಲ್ಲೆಯ ಪ್ರಥಮ ಸಂಸ್ಥೆ. ವಿಶ್ವವಿದ್ಯಾಲಯ ಕಾನೂನು ಕಾಲೇಜು 1962ರಲ್ಲಿ ಪ್ರಾರಂಭವಾದಾಗ ಈ ಕಾಲೇಜನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಲಾಯಿತು. ಧಾರವಾಡದಲ್ಲಿ ಮೂರು (ಈ ಪೈಕಿ ಒಂದು ವಿಶ್ವವಿದ್ಯಾಲಯದ ಆಡಳಿತಕ್ಕೆ ಸೇರಿದೆ), ಹುಬ್ಬಳ್ಳಿಯಲ್ಲಿ ಎರಡು, ಗದಗ, ರಾಣೆಬೆನ್ನೂರುಗಳಲ್ಲಿ ತಲಾ ಒಂದು - ಹೀಗೆ ಜಿಲ್ಲೆಯಲ್ಲಿ ಒಟ್ಟು ಏಳು ಕಾನೂನು ಕಾಲೇಜುಗಳಿವೆ.

**ತಾಂತ್ರಿಕ ಶಿಕ್ಷಣ :** ರಾಜ್ಯ ಪುನರ್ಘಟನೆ ಕಾಲಕ್ಕೆ ಜಿಲ್ಲೆಯಲ್ಲಿ ವಿಶ್ವವಿದ್ಯಾಲಯ ಆಡಳಿತಕ್ಕೆ ಒಳಪಡದ, ಡಿಪ್ಲೊಮೊ ಪದವಿ ನೀಡುವ ಧಾರವಾಡದ ವನಿತಾ ಸೇವಾ ಸಮಾಜ, ಕರ್ನಾಟಕ ಟೈಲರಿಂಗ್ ಕಾಲೇಜು, ಹುಬ್ಬಳ್ಳಿಯ ಸರ್ಟಿಫೈಡ್ ಶಾಲೆ, ಸ್ಕೂಲ್ ಆಫ್ ಇಂಡಸ್ಟ್ರಿ, ಮಾಡರ್ನ್ ಲೇಡೀಸ್ ಟೈಲರಿಂಗ್ ಕ್ಲಾಸ್ ಹಾಗೂ ಬಿವಿಬಿ ಇಂಜನೀಯರಿಂಗ್ ಕಾಲೇಜು ಮುಂತಾದ ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ಮುಂಬೈಯಿನ ತಾಂತ್ರಿಕ ಶಿಕ್ಷಣ ಇಲಾಖೆಯ ಹತೋಟಿಯಲ್ಲಿ ಇದ್ದವು. ಹುಬ್ಬಳ್ಳಿಯ ತಿಮ್ಮಸಾಗರದ ತಾಂತ್ರಿಕ ಶಿಕ್ಷಣ ಶಾಲೆ ಮತ್ತು ಕೈಗಾರಿಕಾಶಾಲೆ 1950ರಲ್ಲಿ ಸ್ಥಾಪಿಸಲ್ಪಟ್ಟಿದ್ದವು. ತಾಂತ್ರಿಕ ಶಿಕ್ಷಣ ಶಾಲೆಯಲ್ಲಿ ಇಂಗ್ಲಿಷ್, ಕನ್ನಡ, ಭೌತ ಹಾಗೂ ರಸಾಯನ ಶಾಸ್ತ್ರಗಳು, ಗಣಿತ, ಭೂಗೋಳ, ವರ್ಕ್‌ಶಾಪ್ ಟೆಕ್ನಾಲಜಿ, ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜನೀಯರಿಂಗ್, ಮುಂತಾದ ವಿಷಯಗಳು ಬೋಧಿಸಲ್ಪಡುತ್ತಿದ್ದವು. ಇಲ್ಲಿ ವಿದ್ಯಾರ್ಥಿಗಳನ್ನು ಎಸ್.ಎಸ್.ಸಿ. ಪರೀಕ್ಷೆಗೆ ತಯಾರು ಮಾಡಲಾಗುತ್ತಿತ್ತು. ಕೈಗಾರಿಕಾ ಶಾಲೆಯಲ್ಲಿ ಮೆಕ್ಯಾನಿಕಲ್ ಅಪ್ರೆಂಟಿಸ್, ಬಡಗಿ, ಕೃಷಿಬಡಗಿ ಮತ್ತು ಕುಲುಮೆ ಕೆಲಸ - ಈ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಪರೀಕ್ಷೆಗಳನ್ನು ಮುಂಬೈ ವಿಶ್ವವಿದ್ಯಾಲಯ ನಡೆಸಿ, ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್‌ಗಳನ್ನು ನೀಡುತ್ತಿತ್ತು.

**ಕೈಗಾರಿಕಾ ತರಬೇತಿ ಸಂಸ್ಥೆಗಳು :** ಉದ್ಯೋಗ ವಿನಿಮಯ ತರಬೇತಿ ಇಲಾಖೆಯ ಆಡಳಿತ ವ್ಯಾಪ್ತಿಗೊಳಪಡುವ ಈ ಸಂಸ್ಥೆಗಳ ಸಂಖ್ಯೆ ಜಿಲ್ಲೆಯಲ್ಲಿ ಒಟ್ಟು 26. ಇವುಗಳಲ್ಲಿ 24 ಖಾಸಗಿ ಸಂಸ್ಥೆಗಳಾಗಿದ್ದರೆ, ಗದಗಿನಲ್ಲಿರುವ ಮಹಿಳಾ ವಿದ್ಯಾಪೀಠ ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ಹುಬ್ಬಳ್ಳಿಯ ಪುರುಷರ ಕೈಗಾರಿಕಾ ತರಬೇತಿ ಸಂಸ್ಥೆ ಮಾತ್ರ ಸರಕಾರೀ ಸಂಸ್ಥೆಗಳು. ಹುಬ್ಬಳ್ಳಿಯ ಸಂಸ್ಥೆಯಲ್ಲಿ ಶೀಘ್ರಲಿಪಿ ತರಬೇತಿ ಒಂದು ಅಧ್ಯಯನ ವಿಷಯವಾಗಿದ್ದು ಇದಕ್ಕೆ ಮಾತ್ರ ಹೆಣ್ಣುಮಕ್ಕಳು ಸೇರಬಹುದಾಗಿದೆ. 1948ರಲ್ಲಿ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್ ಆಗಿ, ಬಿ.ವಿ.ಬಿ. ಕಾಲೇಜಿನ ಆಡಳಿತದಲ್ಲಿದ್ದ ಈ ಸಂಸ್ಥೆ 1962ರಲ್ಲಿ ಸ್ವಂತ ಕಟ್ಟಡದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಯಾಗಿ ಮಾರ್ಪಟ್ಟಿತು. ಇದರ ವಾರ್ಷಿಕ ವಿದ್ಯಾರ್ಥಿ ಸಂಖ್ಯೆ ಒಟ್ಟು 360 ಆಗಿದ್ದು, 1993-94ಕ್ಕೆ ಈ ಸಂಖ್ಯೆಯಲ್ಲಿ 50 ಮಂದಿ ಪರಿಶಿಷ್ಟ ಜಾತಿ ಮತ್ತು 13 ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳೂ ಸೇರಿದ್ದರು.

**ಸರಕಾರಿ ಪಾಲಿಟೆಕ್ನಿಕ್ ಸಂಸ್ಥೆ :** ಇದು ಹುಬ್ಬಳ್ಳಿಯಲ್ಲಿ 1962ರಲ್ಲಿ ಪ್ರಾರಂಭವಾಯಿತು. ಇದರಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್, ಸಿವಿಲ್, ಕಂಪ್ಯೂಟರ್ ಸೈನ್ಸ್, ಕಮರ್ಷಿಯಲ್ ಪ್ರ್ಯಾಕ್ಟೀಸ್, ಕಾಸ್ಟ್ಯೂಮ್ ಡಿಸೈನ್ ಮತ್ತು ಡ್ರೆಸ್ ಮೇಕಿಂಗ್ - ಈ ಐದು ವಿವಿಧ ವಿಷಯಗಳಲ್ಲಿ ಡಿಪ್ಲೊಮೊ ನೀಡಲಾಗುವುದು. ಪ್ರತೀ ವಿಷಯಕ್ಕೆ ವರ್ಷಕ್ಕೆ 40 ಅಭ್ಯರ್ಥಿಗಳು ಸೇರಬಹುದಾಗಿದ್ದು, ಕಮರ್ಷಿಯಲ್ ಪ್ರ್ಯಾಕ್ಟೀಸ್ ವಿಷಯಕ್ಕೆ ಮಾತ್ರ 30 ಗಂಡು ಮತ್ತು 30 ಹೆಣ್ಣು ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿದೆ. ಇಲ್ಲಿ 180 ಮಂದಿಗೆ ವಸತಿ ಕಲ್ಪಿಸುವ ಒಂದು ವಿದ್ಯಾರ್ಥಿ ನಿಲಯವೂ ಇದೆ.

**ಕಿರಿಯ ತಾಂತ್ರಿಕ ಶಾಲೆಯು** ಹುಬ್ಬಳ್ಳಿಯಲ್ಲಿ 1950ರಲ್ಲಿ 'ತಾಂತ್ರಿಕ ಶಾಲೆ' ಎಂಬ ಹೆಸರಿನಿಂದ ಪ್ರಾರಂಭವಾಯಿತು. ರಾಜ್ಯದಲ್ಲಿರುವ ಆರು ಇಂತಹ ಶಾಲೆಗಳಲ್ಲಿ ಒಂದಾದ ಈ ಶಾಲೆಗೆ ಏಳನೇ ತರಗತಿ ತೇರ್ಗಡೆ ಹೊಂದಿದ ಮಕ್ಕಳು ಪ್ರವೇಶ ಪಡೆಯಬಹುದು. ಇತರೆ ಶಾಲೆಗಳ ಸಾಮಾನ್ಯ ಪಠ್ಯಕ್ರಮದೊಂದಿಗೆ ಇಲ್ಲಿ ತಾಂತ್ರಿಕ ವಿಷಯಗಳಾದ ಟರ್ನರ್, ಫಿಟ್ಟರ್, ಎಲೆಕ್ಟ್ರಿಕಲ್ ಮತ್ತು ಬಡಗಿ ಇವುಗಳನ್ನು ಬೋಧಿಸಲಾಗುವುದು. ಈ ನಾಲ್ಕೂ ವಿಷಯಗಳು 8ನೇ ತರಗತಿ ಸೇರುವ ಎಲ್ಲರಿಗೂ ಕಡ್ಡಾಯವಾಗಿದ್ದು ಎರಡನೇ ವರ್ಷದಿಂದ ಮಕ್ಕಳು ತಮಗೆ ಆಸಕ್ತಿ ಇರುವ ವಿಷಯಗಳನ್ನು ಆರಿಸಿಕೊಳ್ಳಬಹುದು. ಹತ್ತನೇ ತರಗತಿ ಪಾಸಾದ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಕಾಲೇಜುಗಳಲ್ಲಿ ಮುಂದುವರೆಸಬಹುದು. (ಇದು ಹೈಸ್ಕೂಲು ಮಟ್ಟದ ಸಂಸ್ಥೆಯಾಗಿದೆ).

ಇವರಿಗೆ ಪಾಲಿಟೆಕ್ನಿಕ್ ಪ್ರವೇಶದಲ್ಲಿ ಆದ್ಯತೆ ಇದೆ. ವಾರ್ಷಿಕ ಪ್ರವೇಶ 60 ಮಂದಿಗೆ ಸೀಮಿತವಾಗಿದ್ದು 8 ಮತ್ತು 9 ನೇ ತರಗತಿಯ ಮಕ್ಕಳಿಗೆ ತಿಂಗಳಿಗೆ 10 ರೂ.ನಂತೆ ಹಾಗೂ 10ನೇ ತರಗತಿಯ ಮಕ್ಕಳಿಗೆ ತಿಂಗಳಿಗೆ 15 ರೂ.ನಂತೆ ಹತ್ತು ತಿಂಗಳ ಕಾಲ ಶಿಷ್ಯವೇತನ ದೊರೆಯುತ್ತದೆ.

**ನೆಟ್ಟೂರ್ ಟೆಕ್ನಿಕಲ್ ಟ್ರೈನಿಂಗ್ ಫೌಂಡೇಷನ್ :** ತಾಂತ್ರಿಕ ಪರಿಣತಿಯ ಮೂಲಕ ವಿದ್ಯಾರ್ಥಿಗಳು ಜೀವನದಲ್ಲಿ ನೆಲಗೊಳ್ಳಲು ಸಹಾಯ ಮಾಡುವ ಉದ್ದೇಶದಿಂದ ಈ ಸಂಸ್ಥೆ ಸ್ವಿಟ್ಜರ್‌ಲೆಂಡಿನ ಸಹಯೋಗದೊಂದಿಗೆ 1963ರಲ್ಲಿ ಧಾರವಾಡದಲ್ಲಿ 21 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾಯಿತು. ಈಗ ಇದು ಒಂದು ಸ್ವಾಯತ್ತದತ್ತಿಯಾಗಿ ಕೆಲಸ ಮಾಡುತ್ತಿದೆ. ರಾಜ್ಯ ಹಾಗೂ ಕೇಂದ್ರ ಸರಕಾರಗಳ ಧನಸಹಾಯದಿಂದ ನಡೆಯುವ ಇಲ್ಲಿ ವರ್ಷಂಪ್ರತಿ ಸೇರಿಸಿಕೊಳ್ಳಲ್ಪಡುವ ಒಟ್ಟು ವಿದ್ಯಾರ್ಥಿ ಸಂಖ್ಯೆಯಲ್ಲಿ ಶೇ. 50 ರಷ್ಟು ಕನ್ನಡ ಮಾಧ್ಯಮದ ಗ್ರಾಮೀಣ ವಿದ್ಯಾರ್ಥಿಗಳಿಗೆ ಮೀಸಲಾಗಿದೆ. ತಮ್ಮ ಸ್ವಂತ ಪ್ರತಿಭೆಯ ಮೂಲಕ ಸಂಸ್ಥೆಯ ಪ್ರವೇಶ ಪರೀಕ್ಷೆ ಪಾಸು ಮಾಡಿದ ನಂತರವೇ ಇಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತದೆ. ಸರಕಾರದ ರೋಸ್ಟರ್ ಪದ್ಧತಿ ಇಲ್ಲಿ ಅನ್ವಯವಾಗುವುದಿಲ್ಲ. ಟೂಲ್ ಮತ್ತು ಡೈ ಮೇಕಿಂಗ್ ವಿಷಯದಲ್ಲಿ ಮೂರು ವರ್ಷದ ಡಿಪ್ಲೊಮೊ ಮತ್ತು ಸರ್ಟಿಫಿಕೇಟ್ ತರಗತಿಗಳಿಗೆ ಪ್ರತೀ ವರ್ಷ ಕ್ರಮವಾಗಿ 30ಹಾಗೂ 15ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ಇವುಗಳಿಗೆ ಶಿಕ್ಷಣ ಉಚಿತ. ಇದಲ್ಲದೆ, ಡಿಪ್ಲೊಮೊ ಪದವೀಧರರಿಗಾಗಿ ಶುಲ್ಕ ಸಹಿತವಾದ ಟೂಲ್ ಡಿಸೈನ್ ಥಿಯರಿ ಮತ್ತು ಟೂಲ್ ಡಿಸೈನ್ ಡ್ರಾಯಿಂಗ್ ತರಗತಿಗಳನ್ನು ವಾರದಲ್ಲಿ ಎರಡು ದಿನ ಸಂಜೆ ಸಮಯದಲ್ಲಿ ನಡೆಸಲಾಗುವುದು. ಇಲ್ಲಿನ ಬೋಧಕ ಸಿಬ್ಬಂದಿ ಸಂಖ್ಯೆ 15. ಅನೌಪಚಾರಿಕ ಶಿಕ್ಷಣದಡಿಯಲ್ಲಿ ಒಂದೂವರೆ ವರ್ಷ ಅವಧಿಯ ಮೆಷಿನಿಸ್ಟ್, ಒಂದು ವರ್ಷ ಅವಧಿಯ ಕಂಪ್ಯೂಟರ್ ಅಪ್ಲಿಕೇಷನ್ ಮತ್ತು ವಿವಿಧ ಕೈಗಾರಿಕೆಗಳ ಬೇಡಿಕೆಗಳಿಗೆ ಅನುಗುಣವಾಗಿ ಅವುಗಳಿಂದ ಕಳುಹಿಸಲ್ಪಟ್ಟ ಅಭ್ಯರ್ಥಿಗಳಿಗೆ ಇತರೆ ಕೋರ್ಸುಗಳನ್ನೂ ಸಂಸ್ಥೆ ನಡೆಸುತ್ತದೆ. ಸಂಸ್ಥೆಗೆ ಹೊಂದಿಕೊಂಡಂತೆ ಒಂದು ವಿದ್ಯಾರ್ಥಿನಿಲಯವಿದ್ದು, ರಾಜ್ಯದ ಇತರೆಡೆಗಳಿಂದ ಬರುವ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆ ಇದೆ.

**ತಾಂತ್ರಿಕ ಪದವಿ ಶಿಕ್ಷಣ :** ಹುಬ್ಬಳ್ಳಿಯಲ್ಲಿರುವ ಬಿ.ವಿ.ಬಿ ತಾಂತ್ರಿಕ ಮಹಾವಿದ್ಯಾಲಯವು ರಾಜ್ಯದ ಅತ್ಯಂತ ಹಳೆಯ ತಾಂತ್ರಿಕ ಪದವಿ ಸಂಸ್ಥೆಗಳಲ್ಲಿ ಒಂದಾಗಿದ್ದು ಕೆ.ಎಲ್.ಇ. ಸೊಸೈಟಿಯಿಂದ 1946ರಲ್ಲಿ ಗದಗಿನಲ್ಲಿ ಆರಂಭವಾಯಿತು. 1947ರಲ್ಲಿ ಇದು ಹುಬ್ಬಳ್ಳಿಗೆ ವರ್ಗಾಯಿಸಲ್ಪಟ್ಟಿತು. ಆರಂಭದಲ್ಲಿ ಸಿವಿಲ್ ಮತ್ತು ಮೆಕ್ಯಾನಿಕಲ್ ವಿಭಾಗಗಳ ಶಿಕ್ಷಣಮಾತ್ರ ನೀಡುತ್ತಿದ್ದ ಈ ಕಾಲೇಜು ನಂತರ ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಟ್ಟಿತು. ಮುಂದೆ ಇಲೆಕ್ಟ್ರಾನಿಕ್ಸ್, ಆರ್ಕಿಟೆಕ್ಚರ್, ಇಂಡಸ್ಟ್ರಿಯಲ್ ಇಂಜನಿಯರಿಂಗ್, ಪ್ರೊಡಕ್ಷನ್ ಇಂಜನಿಯರಿಂಗ್ ವಿಭಾಗಗಳೂ ಸಂಜೆ ಕಾಲೇಜೂ, ಸ್ನಾತಕೋತ್ತರ ವಿಭಾಗಗಳೂ ಆರಂಭವಾದವು.

ಧಾರವಾಡದ ಧವಳಗಿರಿಯಲ್ಲಿ 1979ರಲ್ಲಿ 90 ವಿದ್ಯಾರ್ಥಿಗಳು ಮತ್ತು ಒಂಬತ್ತು ಅಧ್ಯಾಪಕರೊಂದಿಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತಾಂತ್ರಿಕ ಮಹಾವಿದ್ಯಾಲಯವು ಪ್ರಾರಂಭವಾಯಿತು. 25 ವರ್ಷಗಳ ತನ್ನ ಅಸ್ತಿತ್ವದ ನಂತರ ಈಗ ಮಹಾವಿದ್ಯಾಲಯದಲ್ಲಿ 119 ಮಂದಿ ಹೆಣ್ಣುಮಕ್ಕಳೂ ಸೇರಿದಂತೆ ಒಟ್ಟು 1,495 ವಿದ್ಯಾರ್ಥಿ ಸಂಖ್ಯೆ ಇದ್ದು, ಇವರಲ್ಲಿ ಒಟ್ಟು 17 ಮಂದಿ ಪರಿಶಿಷ್ಟ ಜಾತಿ ಮತ್ತು ಏಳುಮಂದಿ ಪರಿಶಿಷ್ಟ ವರ್ಗದವರಿದ್ದಾರೆ. ಅಧ್ಯಾಪಕರ ಸಂಖ್ಯೆ ಒಟ್ಟು 88 ಆಗಿದ್ದು, ಇವರಲ್ಲಿ 10 ಮಂದಿ ಮಹಿಳೆಯರಿದ್ದಾರೆ.

ಇದಲ್ಲದೆ ರಾಣೆಬೆನ್ನೂರಿನಲ್ಲಿ ತಾಂತ್ರಿಕ ಮಹಾವಿದ್ಯಾಲಯವು ತರಳಬಾಳು ವಿದ್ಯಾಸಂಸ್ಥೆ (ಚಿತ್ರದುರ್ಗ ಜಿಲ್ಲೆ) ಇವರಿಂದ ನಡೆಸಲ್ಪಡುತ್ತಿದೆ. ಜಿಲ್ಲೆಯಲ್ಲಿ ಹೀಗೆ ಒಟ್ಟು ಮೂರು ತಾಂತ್ರಿಕ ಪದವಿ ಶಿಕ್ಷಣ ಸಂಸ್ಥೆಗಳಿವೆ.

## ಕೃಷಿ ವಿಜ್ಞಾನ ವಿಶ್ವವಿದ್ಯಾಲಯ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಧಾರವಾಡದಲ್ಲಿ 1947ರಲ್ಲಿ 75 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಕೃಷಿ ವಿಜ್ಞಾನ ಕಾಲೇಜು, 1965ರಲ್ಲಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಟ್ಟಿತು. ಅಕ್ಟೋಬರ್ 1, 1986ರಲ್ಲಿ ರಾಜ್ಯದ ಎರಡನೇ ಸ್ವತಂತ್ರ ಕೃಷಿ ವಿಶ್ವವಿದ್ಯಾಲಯವಾಗಿ ಅಸ್ತಿತ್ವಗೊಂಡಿತು. ಉತ್ತರ ಕರ್ನಾಟಕದ ರೈತರಿಗೂ, ಕೃಷಿ ಅಭಿವೃದ್ಧಿಗೆ ದುಡಿಯುವವರೆಲ್ಲರಿಗೂ ಅವರವರ ಮಟ್ಟದಲ್ಲಿ ಅವಶ್ಯ ಶಿಕ್ಷಣ, ತರಬೇತಿ ನೀಡುವುದು, ಕೃಷಿ ಕ್ಷೇತ್ರದ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಸಂಶೋಧನೆ ನಡೆಸುವುದು, ಇವೇ ಮುಂತಾದ ಧ್ಯೇಯೋದ್ದೇಶಗಳನ್ನು ಹೊಂದಿರುವ ಈ ವಿಶ್ವವಿದ್ಯಾಲಯ, ಇವುಗಳ ಸಾಧನೆಗಾಗಿ

ಬೋಧನೆ, ಸಂಶೋಧನೆ ಹಾಗೂ ಕೃಷಿ ವಿಜ್ಞಾನ ವಿಸ್ತರಣಾ ಚಟುವಟಿಕೆಗಳ ಮೂಲಕ ಕಾರ್ಯ ನಿರ್ವಹಿಸುತ್ತದೆ. ಇದರ ವ್ಯಾಪ್ತಿಗೆ ಧಾರವಾಡ, ಕಾರವಾರ, ಬಿಜಾಪುರ, ಬೆಳಗಾವಿ, ಬಳ್ಳಾರಿ, ರಾಯಚೂರು, ಬೀದರ್ ಹಾಗೂ ಗುಲ್ಬರ್ಗಾ ಜಿಲ್ಲೆಗಳು ಸೇರುತ್ತವೆ. ಧಾರವಾಡದ ಸ್ನಾತಕೋತ್ತರ ಕೇಂದ್ರ, ರಾಯಚೂರು ಮತ್ತು ಧಾರವಾಡಗಳ ಎರಡು ಕೃಷಿ ಮಹಾವಿದ್ಯಾಲಯಗಳು, ಬೀದರ್‌ನ ಪಶುವೈದ್ಯಕೀಯ ಮಹಾವಿದ್ಯಾಲಯ, ರಾಯಚೂರಿನ ಕೃಷಿ ತಾಂತ್ರಿಕ ಸಂಸ್ಥೆ ಮತ್ತು ಧಾರವಾಡದ ಅರಣ್ಯ ಮಹಾವಿದ್ಯಾಲಯ - ಇವು ಇದರ ಅಧೀನ ಸಂಸ್ಥೆಗಳು.

ಧಾರವಾಡದ ಕೃಷಿ ಮಹಾವಿದ್ಯಾಲಯದಲ್ಲಿ ಕೃಷಿ, ಕೃಷಿ ಮಾರುಕಟ್ಟೆ ಮತ್ತು ಸಹಕಾರ ಹಾಗೂ ಅರಣ್ಯ ವಿಜ್ಞಾನ ವಿಷಯಗಳಲ್ಲಿ ಪದವಿ ಶಿಕ್ಷಣವನ್ನು, ಗ್ರಾಮೀಣ ಗೃಹವಿಜ್ಞಾನ ಮಹಾವಿದ್ಯಾಲಯದಲ್ಲಿ ಗೃಹವಿಜ್ಞಾನ ಪದವಿಯನ್ನು, ಕೃಷಿ ವಿಶ್ವವಿದ್ಯಾಲಯದಲ್ಲಿ ಕೃಷಿ ಮತ್ತು ಗೃಹ ವಿಜ್ಞಾನ ವಿಷಯಗಳಲ್ಲಿ ಹಾಗೂ, ಬೇಸಾಯ ಶಾಸ್ತ್ರ ಕೃಷಿ ಸಸ್ಯ ಶಾಸ್ತ್ರ ತೋಟಗಾರಿಕೆ, ಮಣ್ಣು ವಿಜ್ಞಾನ, ಕೀಟಶಾಸ್ತ್ರ ಸಸ್ಯ ರೋಗಶಾಸ್ತ್ರ, ಸೂಕ್ಷ್ಮಾಣು ಜೀವಿಶಾಸ್ತ್ರ, ಬೀಜ ತಾಂತ್ರಿಕ ಶಾಸ್ತ್ರ, ಕೃಷಿ ಅರ್ಥ ಶಾಸ್ತ್ರ, ಕೃಷಿ ಇಂಜನೀಯರಿಂಗ್, ರೇಷ್ಮೆ ಶಾಸ್ತ್ರ ಇವೇ ಮುಂತಾದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ನೀಡಲಾಗುತ್ತದೆ.

ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ 28 ಕೃಷಿ ಸಂಶೋಧನಾ ಕೇಂದ್ರಗಳು ಒಳಪಟ್ಟಿದ್ದು, ಈ ಪ್ರದೇಶದ ಪ್ರಮುಖ ಬೆಳೆಗಳಾದ ಭತ್ತ, ಜೋಳ, ಗೋಧಿ, ಹೊಗೆಸೊಪ್ಪು, ಎಣ್ಣೆಕಾಳು, ದ್ವಿದಳ ಧಾನ್ಯಗಳು ಹಾಗೂ ತೋಟಗಾರಿಕೆ ಬೆಳೆಗಳಾದ ಮೆಣಸಿನಕಾಯಿ, ಟೊಮೊಟೋ, ಬದನೆ, ಮೆಣಸು, ಏಲಕ್ಕಿ ಮುಂತಾದವುಗಳ ಬಗ್ಗೆ ಈ ಕೇಂದ್ರಗಳಲ್ಲಿ ಸಂಶೋಧನೆ ನಡೆಯುತ್ತದೆ. ಈ ಸಂಶೋಧನೆಗಳ ಫಲಿತಾಂಶ ವಿಸ್ತರಣಾ ವಿಭಾಗಗಳ ಮೂಲಕ ಸಕಾಲದಲ್ಲಿ ರೈತ ಸಮುದಾಯಕ್ಕೆ ತಲುಪುತ್ತದೆ.

ವಿಶ್ವವಿದ್ಯಾಲಯದ 1171 ಎಕರೆ ಪ್ರದೇಶದಲ್ಲಿ ರಾಜ್ಯದ ಹಲವೆಡೆಗಳ ವಿವಿಧ ರೀತಿಯ ಮಣ್ಣುಗಳನ್ನು ಸಂಶೋಧನೆಗೆ ಶೇಖರಿಸಲಾಗಿದೆ. ಇಲ್ಲಿಗೆ ಕೆಲಗೇರಿ ಕೆರೆಯಿಂದ ನೀರು ಪೂರೈಕೆಯಾಗುತ್ತದೆ.

1993-94ನೇ ಸಾಲಿಗೆ ಧಾರವಾಡದ ಕೃಷಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಒಟ್ಟು 471 ಮಂದಿ ವ್ಯಾಸಂಗ ಮಾಡುತ್ತಿದ್ದು, ಇವರಲ್ಲಿ ಒಟ್ಟು 39 ಮಹಿಳೆಯರಿದ್ದರು. ಇವರಲ್ಲಿ 47 ಪರಿಶಿಷ್ಟ ಜಾತಿ ಗಂಡು, 14 ಪರಿಶಿಷ್ಟ ವರ್ಗ ಗಂಡು, ಎರಡು ಪರಿಶಿಷ್ಟ ವರ್ಗ ಸ್ತ್ರೀಯರಿದ್ದರು. ಬೋಧಕ ಸಿಬ್ಬಂದಿ ಸಂಖ್ಯೆ 118 ಆಗಿದ್ದು, ಇವರಲ್ಲಿ ಎಂಟು ಮಂದಿ ಮಹಿಳೆಯರಿದ್ದರು.

ಇದೇ ಸಾಲಿಗೆ ಕೃಷಿ ಮಹಾವಿದ್ಯಾಲಯದಲ್ಲಿ ಬಿ.ಎಸ್‌.ಸಿ. (ಕೃಷಿ) ವರ್ಗದಲ್ಲಿ ಒಟ್ಟು 104 (88 ಗಂಡು, 16 ಹೆಣ್ಣು) ಮಂದಿ, ಬಿ.ಎಸ್‌.ಸಿ. (ಮಾರುಕಟ್ಟೆ) ವರ್ಗದಲ್ಲಿ 16 (ಎಲ್ಲಾ ಗಂಡು, ಒಂದು ಪರಿಶಿಷ್ಟ ಜಾತಿ); ಕೃಷಿ ಗೃಹ ವಿಜ್ಞಾನ ಮಹಾವಿದ್ಯಾಲಯದಲ್ಲಿ ಒಟ್ಟು 164 (18 ಪರಿಶಿಷ್ಟ ಜಾತಿ ಮತ್ತು ಆರು ಪರಿಶಿಷ್ಟ ವರ್ಗದ ಮಹಿಳೆಯರು ವ್ಯಾಸಂಗ ಮಾಡುತ್ತಿದ್ದು, 16 ಮಂದಿ ಬೋಧಕ ಸಿಬ್ಬಂದಿ ಇದ್ದರು. (ವಿವರಗಳಿಗೆ ಅಧ್ಯಾಯನ 4 ಸಹ ನೋಡಿ).

**ಸಂಸ್ಕೃತ ಪಾಠಶಾಲೆ :** ಗುರುನಾಥರಾವ್ ಪಾಠಕ್‌ರ ಪ್ರೇರಣೆಯಿಂದ ಧಾರವಾಡದಲ್ಲಿ 1887ರಲ್ಲಿ 'ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆ' ಎಂದು ಪ್ರಾರಂಭವಾಗಿ 1894ರಲ್ಲಿ "ಸಂಸ್ಕೃತ ಲಿಟರರಿ ಸೊಸೈಟಿ" ಎಂದು ಸರ್ಕಾರದಲ್ಲಿ ನೋಂದಾಯಿಸಲ್ಪಟ್ಟಿತು. ಪ್ರಾಚೀನ ಭಾರತೀಯ ಸಂಪ್ರದಾಯವನ್ನು ಎತ್ತಿ ಹಿಡಿಯುವ ಧ್ಯೇಯ ಹೊಂದಿರುವ ಈ ಸಂಸ್ಥೆಯಲ್ಲಿ ವೇದ, ಜ್ಯೋತಿಷ್ಯ, ಯಾಜ್ಞಿಕ, ನ್ಯಾಯ, ವೇದಾಂತ ಶಾಸ್ತ್ರಗಳನ್ನು ಅಭ್ಯಾಸ ಮಾಡುವ ಅನುಕೂಲವಿದೆ. ಇದರ ಸ್ಥಾಪನೆಗೆ ಶೃಂಗೇರಿ ಪೀಠಾಧಿಪತಿ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರು, ಶ್ರೀ ಕೂಡ್ಲಿ ಜಗದ್ಗುರುಗಳು ಅನುಗ್ರಹಿಸಿ, ಉದಾರ ಸಹಾಯ ಮಾಡಿರುತ್ತಾರೆ. ಖ್ಯಾತ ವಿದ್ವಾಂಸ ಬಾಲಚಂದ್ರ ಶಾಸ್ತ್ರಿಗಳು ದೀರ್ಘಕಾಲದಿಂದ ಇದರ ಮಾರ್ಗದರ್ಶನರಾಗಿದ್ದರು. ಈ ಸಂಸ್ಥೆಯ ಗ್ರಂಥಾಲಯದಲ್ಲಿ ಎಲ್ಲೂ ಸಿಗದ ಹಲವು ಕೃತಿಗಳ ಸಂಗ್ರಹವಿದೆ. 1993-94ನೇ ಸಾಲಿಗೆ ಈ ಪಾಠಶಾಲೆಯಲ್ಲಿ 20 ಮಂದಿ ವ್ಯಾಸಂಗ ಮಾಡುತ್ತಿದ್ದರು. ಇದಲ್ಲದೆ ಜಿಲ್ಲೆಯ ಇತರೆಡೆಗಳಲ್ಲಿ 27 ಖಾಸಗಿ ಅನುದಾನಿತ ಸಂಸ್ಕೃತ ಪಾಠಶಾಲೆಗಳು ಕೆಲಸ ಮಾಡುತ್ತಿವೆ.

## ಶೈಕ್ಷಣಿಕ ಸಂಘ ಸಂಸ್ಥೆಗಳು

**ಕರ್ನಾಟಕ ವಿದ್ಯಾವರ್ಧಕ ಸಂಘ :** ಸಾಂಸ್ಕೃತಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಯ ಧ್ಯೇಯೋದ್ದೇಶಗಳನ್ನು ಹೊಂದಿ, ರಾಮಚಂದ್ರ ಹನುಮಂತ ದೇಶಪಾಂಡೆಯವರ ಪ್ರಯತ್ನದಿಂದ 1889ರಲ್ಲಿ ಧಾರವಾಡದಲ್ಲಿ ಪ್ರಾರಂಭವಾಯಿತು. ಇದು ಕರ್ನಾಟಕದ ಪ್ರಥಮ ಸಾಂಸ್ಕೃತಿಕ ಸಂಸ್ಥೆ. ದೇಶಪಾಂಡೆಯವರೇ ಪ್ರಥಮ ಕಾರ್ಯದರ್ಶಿಯಾಗಿದ್ದ ಈ ಸಂಘಕ್ಕೆ ಶ್ಯಾಮರಾವ್ ಕಾಯ್ಕಿಣಿ ಪ್ರಥಮ ಅಧ್ಯಕ್ಷರಾದರು. ನಂತರ ಜಿಗ್ಳರ್, ರೊದ್ದ ಶ್ರೀನಿವಾಸರಾಯರು, ಆಲೂರು ವೆಂಕಟರಾಯರು, ಡೆಪ್ಯುಟಿ ಚೆನ್ನಬಸಪ್ಪನವರು ಮುಂತಾದವರು ಇಲ್ಲಿ ಸಕ್ರಿಯ ಪಾತ್ರ ವಹಿಸಿದರು. ಪ್ರಥಮ ಗ್ರಂಥಕರ್ತರ ಸಾಹಿತ್ಯ ಸಮ್ಮೇಳನವನ್ನು 1907ರಲ್ಲಿ ಸಂಘಟಿಸಿದ ಕೀರ್ತಿ ಈ ಸಂಘಕ್ಕೆ ಸಲ್ಲುತ್ತದೆ. ಕರ್ನಾಟಕದ ಜಾಗೃತಿಗೆ ಈ ಸಂಸ್ಥೆ ನೀಡಿದ ಕೊಡುಗೆ ಅದ್ವಿತೀಯ.

**ಕರ್ನಾಟಕ ಹಿಸ್ಟಾರಿಕಲ್ ರಿಸರ್ಚ್ ಸೊಸೈಟಿ :** ಐತಿಹಾಸಿಕ ಪರಂಪರೆ, ಸಾಂಸ್ಕೃತಿಕ ಹಿರಿಮೆ, ಪ್ರಾಚೀನ ಕಲೆ ಹಾಗೂ ಶಿಲ್ಪಕಲೆಗಳ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಿ, ಅವುಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಈ ಸಂಸ್ಥೆ 1914ರಲ್ಲಿ ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟಿತು. ಇದರ ಸ್ಥಾಪನೆ ಮತ್ತು ಬೆಳವಣಿಗೆಯಲ್ಲಿ ಆಸಕ್ತಿ ಹಾಗೂ ಪರಿಶ್ರಮ ವಹಿಸಿದವರಲ್ಲಿ ಆಲೂರು ವೆಂಕಟರಾಯರು, ಆರ್.ಎಸ್. ನರಗುಂದಕರ್, ಎಸ್.ಆರ್. ದೇಶಪಾಂಡೆ, ಎನ್.ಎಸ್. ರಾಜಪುರೋಹಿತ, ಹಾಲಬಾವಿ, ಮುಂತಾದ ಗಣ್ಯವಿದ್ವಾಂಸರು ಪ್ರಮುಖರು. ಇದರ ವಜ್ರಮಹೋತ್ಸವ 1978ರಲ್ಲಿ ನಡೆಯಿತು. ಆರ್.ಎಸ್. ಪಂಚಮುಖಿಯವರೂ ಇದರ ಜೊತೆ ಸಂಬಂಧ ಹೊಂದಿದ್ದರು. ಇಲ್ಲಿ 3000 ಅಪರೂಪದ ಕೃತಿಗಳ ಗ್ರಂಥಾಲಯ, ಒಂದು ಮ್ಯೂಸಿಯಂ ಮತ್ತು ಆರ್ಟ್ ಗ್ಯಾಲರಿಗಳು ಇವೆ.

**ವಿಶ್ವಸಂಸ್ಥೆಯ ಪ್ರಕಟಣಾ ಕೇಂದ್ರ :** 1967ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಸುಮಾರು ಹತ್ತು ಸಾವಿರ ಪುಸ್ತಕಗಳೊಂದಿಗೆ ಪ್ರಾರಂಭಗೊಂಡಿತು. ಇಲ್ಲಿ ಈಗ 30 ಸಾವಿರಕ್ಕೂ ಹೆಚ್ಚು ಪುಸ್ತಕಗಳಿವೆ. ವಿಶೇಷವಾಗಿ ಅರ್ಥಶಾಸ್ತ್ರ, ಕೃಷಿ ವಿಜ್ಞಾನ, ಆಹಾರ ಶಾಸ್ತ್ರ, ಸಸ್ಯ ವಿಜ್ಞಾನ, ವಾಣಿಜ್ಯ ಶಾಸ್ತ್ರ ಹೀಗೆ ಹಲವು ಹತ್ತು ವಿಷಯಗಳಲ್ಲಿ ವಿಶ್ವನೀತಿಯನ್ನು ಅರಿತುಕೊಳ್ಳಲು ಈ ಕೇಂದ್ರ ನೆರವಾಗುತ್ತದೆ. ವರ್ಷಂಪ್ರತಿ ಇಲ್ಲಿಗೆ ಮೇಲ್ಕಂಡ ವಿಷಯಗಳ ಅಧಿಕೃತ ವರದಿಗಳು ಬರುತ್ತವೆ. ವಿಶ್ವ ಸಂಸ್ಥೆಯ ಅಂಗ ಸಂಸ್ಥೆಯಾದ ಯುನಿಸೆಫ್ ಸೇರಿದಂತೆ, ಅನೇಕ ಪ್ರತಿಷ್ಠಿತ ಅಂತರಾಷ್ಟ್ರೀಯ ಸಂಸ್ಥೆಗಳ ವಾರ್ಷಿಕ ವರದಿಗಳೂ ಇಲ್ಲಿ ಲಭ್ಯವಾಗಿವೆ. ದೇಶದ ಎಲ್ಲಾ ವಿಶ್ವವಿದ್ಯಾಲಯಗಳು ಇಲ್ಲಿಂದ ಪ್ರಕಟಣೆಗಳನ್ನು ಎರವಲು ಪಡೆಯಬಹುದು. ಸಂಶೋಧನಾ ವಿದ್ಯಾರ್ಥಿಗಳು ತಮಗೆ ಬೇಕಾದ ಅಂಕಿ ಅಂಶಗಳನ್ನು ಇಲ್ಲಿಂದ ಪಡೆಯಬಹುದಾಗಿದೆ.

### ವಿದ್ಯಾರ್ಥಿ ನಿಲಯಗಳು

ಶಿಕ್ಷಣದ ಅವಿಭಾಜ್ಯ ಅಂಗವಾದ ವಿದ್ಯಾರ್ಥಿನಿಲಯಗಳು ಜಿಲ್ಲೆಯಲ್ಲಿ ಶೈಕ್ಷಣಿಕ ಅಭಿವೃದ್ಧಿಯಾದಾಗಿನಿಂದ ಅಸ್ತಿತ್ವದಲ್ಲಿವೆ. ಇವುಗಳಲ್ಲಿ ಕೆಲವು ಶಾಲೆಗಳಿಗೆ ಹೊಂದಿಕೊಂಡಿದ್ದು, ಕೆಲವು ಪ್ರತ್ಯೇಕವಾಗಿಯೂ ಇದ್ದುವು. ಕ್ರೈಸ್ತ ಪಾದ್ರಿಗಳು ಶಿಕ್ಷಣ ಕೇಂದ್ರಗಳನ್ನೂ, ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವುದರ ಜೊತೆಗೆ, ಗ್ರಾಮಾಂತರ ಬಡ ವಿದ್ಯಾರ್ಥಿಗಳಿಗಾಗಿ ಸ್ಟೂಡೆಂಟ್ಸ್ ಹೋಂಗಳನ್ನೂ, ಅನಾಥಾಶ್ರಮಗಳನ್ನೂ ಪ್ರಾರಂಭಿಸಿದರು. ಧಾರವಾಡದಲ್ಲಿ 1846ರಲ್ಲಿ ಒಂದು ಹೆಣ್ಣು ಮಕ್ಕಳ ಬೋರ್ಡಿಂಗ್ ಶಾಲೆ ಇದ್ದು ಇದರಲ್ಲಿ ಒಟ್ಟು 14 ಮಂದಿ ಬಾಲಕಿಯರಿದ್ದರು. 1896ರಲ್ಲಿ ಸ್ಟೂಡೆಂಟ್ಸ್ ಹೋಂ ಎಂಬ ವಿದ್ಯಾರ್ಥಿನಿಲಯ ಪ್ರಾರಂಭಿಸಲ್ಪಟ್ಟು ಇದರಲ್ಲಿ ಹೈಸ್ಕೂಲಿನ ಕ್ರೈಸ್ತ ವಿದ್ಯಾರ್ಥಿಗಳಿದ್ದರೆಂದು ತಿಳಿದು ಬರುತ್ತದೆ. 1914ರಲ್ಲಿ ಧಾರವಾಡದಲ್ಲಿ ಬಾಸೆಲ್ ಮಿಷನ್ ಸ್ಥಾಪಿಸಿದ ಸ್ಟೂಡೆಂಟ್ಸ್ ಹೋಂ ನಲ್ಲಿ ಕೆ. ನಿದಾನಪ್ಪ ರಾಮತಾಳ 1925ರವರೆಗೆ ಹೌಸ್‌ಫಾದರ್ ಆಗಿದ್ದರು. ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿಗಳನ್ನು ಕಲ್ಪಿಸುವ ಉದ್ದೇಶದಿಂದ ಧಾರವಾಡದ ಹಾವೇರಿ ಪೇಟೆ ಮುರುಘಾಪುರದಲ್ಲಿ ಸ್ಥಾಪಿತವಾದ 'ಮುರುಘ ರಾಜೇಂದ್ರ ಪ್ರಸಾದ ನಿಲಯ' 1918ರಲ್ಲಿ ಪ್ರಾರಂಭವಾಯಿತು. ಇದೇ ಉದ್ದೇಶಗಳಿಂದ ಮರಾಠಾ ವಿದ್ಯಾಪ್ರಸಾರಕ ಮಂಡಳ 1919ರಲ್ಲಿಯೂ, ಟಿಕಾರೆ ಬೋರ್ಡಿಂಗ್ (1924), ಆದರ್ಶ ವಿದ್ಯಾರ್ಥಿನಿಲಯ (1946) ಪ್ರಾರಂಭವಾದವು. ಹುಬ್ಬಳ್ಳಿಯ ಸಂಗಮೇಶ್ವರ ಉಚಿತ ಪ್ರಸಾದ ನಿಲಯ, ಗದುಗಿನ ಅನ್ನದಾನೇಶ್ವರ ವಿದ್ಯಾವರ್ಧಕ ಸಂಘ ಹಾಗೂ ಸರ್ವೋದಯ ಆಶ್ರಮ, ಧಾರವಾಡದ ನಿಮ್ನ ವರ್ಗದ ಊಟ, ವಸತಿ ಗೃಹ ಹಾಗೂ ಲಮಾಣಿ ಉಚಿತ ಊಟ, ವಸತಿ ಗೃಹಗಳು ಈ ದಿಶೆಯಲ್ಲಿ ಕಾರ್ಯ ಪ್ರವೃತ್ತವಾಗಿರುವ ಇತರ ಸ್ವಯಂಸೇವಾ ಸಂಘಗಳು.

ಇದೇ ರೀತಿ ಸೇವೆ ಸಲ್ಲಿಸುತ್ತಿರುವ ಜಿಲ್ಲೆಯ ಇತರೆ ಪ್ರಮುಖ ವಿದ್ಯಾರ್ಥಿನಿಲಯಗಳೆಂದರೆ - ನಿಜಲಿಂಗಪ್ಪ ಹೆಂಗಸರ ಮತ್ತು ಗಂಡಸರ ಹಾಸ್ಟೆಲ್, ಕರ್ನಾಟಕ ಕಾಲೇಜಿನ ಉದಯ ಹಾಸ್ಟಲ್ ಮತ್ತು ಪಯೋನೀರ್ ಹಾಸ್ಟಲ್, ಜೆ.ಎಸ್.ಎಸ್. ಹಾಸ್ಟೆಲ್ ಮತ್ತು ಉದ್ಯೋಗಸ್ಥ ಮಹಿಳೆಯರ ಹಾಸ್ಟಲ್, ಡಾ. ಅಂಬೇಡ್ಕರ್ ಹಾಸ್ಟಲ್, ಜಿಗ್ಲರ್ ಹಾಸ್ಟಲ್, ಭಾವಸಾರ ಸಮಾಜದ ಹಾಸ್ಟಲ್, ಹಾಗೂ ಪ್ರಹ್ಲಾದ ವಿದ್ಯಾರ್ಥಿ ನಿಲಯ, ಮುಂತಾದವು.

## ಗ್ರಂಥಾಲಯಗಳು

ಧಾರವಾಡದಲ್ಲಿ 1854ರಲ್ಲಿ ಲಕ್ಷ್ಮಣ ಶ್ರೀಪಾದ ನಾಗ್‌ಪುರ್‌ಕರ್‌ರಿಂದ ಪ್ರಾರಂಭಿಸಲ್ಪಟ್ಟ 'ನೇಟಿವ್ ಜನರಲ್ ಲೈಬ್ರರಿ' ಜಿಲ್ಲೆಯ ಮೊಟ್ಟಮೊದಲ ಗ್ರಂಥಾಲಯವೆಂದು ತಿಳಿದು ಬರುತ್ತದೆ. ಉತ್ತಮ ಗ್ರಂಥಗಳ ಶೇಖರಣೆ ಇದ್ದ ಈ ಗ್ರಂಥಾಲಯದಲ್ಲಿ 414 ಇಂಗ್ಲಿಷ್, 30ಮರಾಠಿ ಮತ್ತು ಏಳು ಕನ್ನಡ ಭಾಷೆಯ ಗ್ರಂಥಗಳಿದ್ದವು. ಇದರ ನಂತರ ಹುಬ್ಬಳ್ಳಿಯಲ್ಲಿ 1865ರಲ್ಲಿ ಪ್ರಾರಂಭವಾದ ಗ್ರಂಥಾಲಯಕ್ಕೆ ಮುನಿಸಿಪಾಲಿಟಿ ಧನ ಸಹಾಯ ನೀಡುತ್ತಿತ್ತು. ಇದಕ್ಕೆ ಸ್ವಂತ ಕಟ್ಟಡವೂ ಇತ್ತು. ರಾಣೆಬೆನ್ನೂರಿನಲ್ಲಿ 1873ರಲ್ಲಿ ಪ್ರಾರಂಭವಾದ ಗ್ರಂಥಾಲಯ ಸಾರ್ವಜನಿಕರ ಧನಸಹಾಯದಿಂದ ನಡೆಯುತ್ತಿತ್ತು. ಧಾರವಾಡ, ಹುಬ್ಬಳ್ಳಿಗಳಲ್ಲಿ 1854 ಹಗೂ 1856ರಲ್ಲಿ ಕ್ರಮವಾಗಿ ಎರಡು ವಾಚನಾಲಯಗಳೂ, 1876, 1880, 1882 ಮತ್ತು 1893ರಲ್ಲಿ ಕ್ರಮವಾಗಿ ಗದಗ, ಹಾವೇರಿ, ನರಗುಂದ ಹಾಗೂ ನವಲಗುಂದಗಳಲ್ಲಿ ವಾಚನಾಲಯಗಳೂ ಪ್ರಾರಂಭವಾದವು. 1889ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಪ್ರಾರಂಭಿಸಿದ ಗ್ರಂಥಾಲಯದೊಂದಿಗೆ 'ಶಾಂತೇಶ ವಾಚನಾಲಯ' ವಿಲೀನವಾಯಿತು. (1947ರಲ್ಲಿ 'ಕರ್ನಾಟಕ ಗ್ರಂಥಾಲಯ'ವೂ ಇದರ ಆಡಳಿತಕ್ಕೇ ಒಳಪಟ್ಟಿತು). 1894ರಲ್ಲಿ ಗದುಗಿನಲ್ಲಿ ಕುರಡೋಜ್ ಗ್ರಂಥಾಲಯ ಪ್ರಾರಂಭವಾಯಿತು. 1919ರಲ್ಲಿ ಗದುಗಿನಲ್ಲಿ 'ವೀರಶೈವ ತರುಣ ವಾಚನಾಲಯ' ಪ್ರಾರಂಭವಾಗಿ, ಕೆಲಕಾಲ ಸ್ಥಗಿತವಾಗಿತ್ತು. 1930ರಲ್ಲಿ ಪುನಃ 'ಬಸವರಾಜ ವಾಚನಾಲಯ'ವೆಂಬ ಹೆಸರಿನಿಂದ ಮುಂದುವರೆಯಿತು. ಇದರ ಮಹಿಳೆಯರ ಶಾಖೆ 1961ರಲ್ಲಿ ಪ್ರಾರಂಭವಾಯಿತು. 1922ರಲ್ಲಿ ಹುಬ್ಬಳ್ಳಿಯಲ್ಲಿ 'ಸರಸ್ವತಿ ವಿದ್ಯಾರಣ್ಯ ಫ್ರೀ ಲೈಬ್ರರಿ' ಶುರುವಾಯಿತು. ಇದರ ಕಾರ್ಯಕರ್ತರು ಪ್ರತೀ ಮನೆಯಿಂದ ಅಕ್ಕಿ ಶೇಖರಿಸಿ, ಅದನ್ನು ಮಾರಿದ ಹಣದಿಂದ ಈ ಗ್ರಂಥಾಲಯ ಮತ್ತು ವಾಚನಾಲಯಗಳನ್ನು ನಡೆಸುತ್ತಿದ್ದರು. 'ವೀರಶೈವ ಜನರಲ್ ಲೈಬ್ರರಿ' 1923ರಲ್ಲಿ ಗದುಗಿನಲ್ಲಿ ಪ್ರಾರಂಭವಾಯಿತು. ತದನಂತರ ಗದುಗಿನಲ್ಲಿಯೇ ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಲೈಬ್ರರಿ (1934), ಇಕ್ಬಾಲ್ ವಾಚನಾಲಯ (1940), ಜೀವನಪ್ರಕಾಶ ವಾಚನಾಲಯ (1949), ಸೆಟ್ಲ್‌ಮೆಂಟ್ ವಾಚನಾಲಯ (1949), ಕ್ಷತ್ರಿಯ ವಾಚನಾಲಯ (1951), ಜ್ಞಾನೋದಯ ವಾಚನಾಲಯ (1960), ಅಂಬಾಭವಾನಿ ಜ್ಞಾನೋದಯ ಸಂಘ (1968) ಕಾಳಿದಾಸ ವಾಚನಾಲಯ (1968), ಸೋಮೇಶ್ವರ ವಾಚನಾಲಯ (1972), ಭಾರತಿ ಸಾಹಿತ್ಯ ಗ್ರಂಥಾಲಯ (1972), ವೀರಭದ್ರೇಶ್ವರ ವಾಚನಾಲಯ (1973), ಇಸ್ಲಾಮಿಕ್ ಲೈಬ್ರರಿ (1973) ಮುಂತಾದ ಖಾಸಗಿ ಗ್ರಂಥಾಲಯಗಳು ಪ್ರಾರಂಭಿಸಲ್ಪಟ್ಟವು. 1925ರ ನಂತರ ಹುಬ್ಬಳ್ಳಿಯಲ್ಲಿ ಸಾರ್ವಜನಿಕ ವಾಚನಾಲಯ, ಛತ್ರಪತಿ ಶಿವಾಜಿ ವಾಚನಾಲಯ, ನಗರ್‌ಕರ್ ಗ್ರಂಥಾಲಯ ಮತ್ತು ಜಿಲ್ಲೆಯ ಇತರೆಡೆಗಳಲ್ಲಿ ಇದೇ ರೀತಿಯ ಖಾಸಗಿ ವಾಚನಾಲಯಗಳೂ ಗ್ರಂಥಾಲಯಗಳೂ ಸ್ಥಾಪಿಸಲ್ಪಟ್ಟು, ಗ್ರಂಥಾಲಯ ಚಳವಳಿ ಒಂದು ಹೊಸ ಆಯಾಮವನ್ನೇ ಪಡೆಯಿತು. 1929ರಲ್ಲಿ ಗದುಗಿನಲ್ಲಿ ಡಾ. ಚಾಫೇಕರ್‌ರಿಂದ 'ಮರಾಠಿ ವಾಙ್ಮಯ ಪ್ರೇಮಿ ಮಂಡಳ' ಸ್ಥಾಪಿಸಲ್ಪಟ್ಟಿತು.

ಸಾಮಾಜಿಕ ಶಿಕ್ಷಣ ಯೋಜನೆಯಡಿ ಜಿಲ್ಲೆಯಲ್ಲಿ ಗ್ರಾಮ ಗ್ರಂಥಾಲಯ ಯೋಜನೆ 1956ರಲ್ಲಿ ಜಾರಿಗೆ ಬಂದಿತು. ಆಗ ಜಿಲ್ಲೆಯ ವಿವಿಧೆಡೆ 430ಗ್ರಾಮ ಗ್ರಂಥಾಲಯಗಳು ಪ್ರಾರಂಭವಾಗಿ, ಇವುಗಳ ಮೇಲ್ವಿಚಾರಣೆಯನ್ನು ಧಾರವಾಡದ ಉಪಶಿಕ್ಷಣಾಧಿಕಾರಿ ನಡೆಸುತ್ತಿದ್ದರು. ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965ರಲ್ಲಿ ಜಾರಿಗೆ ಬಂದು, ಜನತೆಗೆ ವ್ಯವಸ್ಥಿತ ಗ್ರಂಥಾಲಯ ಸೇವೆ ಸಮರ್ಪಕವಾಗಿ ದೊರೆಯಿತು. ಕೇಂದ್ರ ಗ್ರಂಥಾಲಯಗಳು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಲ್ಪಟ್ಟವು. ಧಾರವಾಡದಲ್ಲಿಯೂ ಈ ಸೇವೆ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಪ್ರತ್ಯೇಕ ಗ್ರಂಥಾಧಿಕಾರಿಗಳ ಆಡಳಿತದಲ್ಲಿ ದೊರಕಿತು.

ಧಾರವಾಡ ನಗರ ಕೇಂದ್ರ ಗ್ರಂಥಾಲಯದಲ್ಲಿ 1993-94ನೇ ಸಾಲಿಗೆ 4,27,102 ಗ್ರಂಥ ಸಂಗ್ರಹಣೆ ಇದ್ದು, 135 ನಿಯತಕಾಲಿಕೆಗಳ ಸರಬರಾಜು ಇದ್ದಿತು. ದಿನಂಪ್ರತಿ ಸರಾಸರಿ 8,700 ಓದುಗರು ಇಲ್ಲಿಗೆ ಭೇಟಿ ನೀಡುತ್ತಿದ್ದು, ಸರಾಸರಿ ದಿನಕ್ಕೆ 3,640 ಪುಸ್ತಕಗಳನ್ನು ಎರವಲು ನೀಡಲಾಯಿತು. ಸದಸ್ಯರ ಸಂಖ್ಯೆ ಒಟ್ಟು 29,027 ಆಗಿತ್ತು. ಇದರ ಶಾಖೆಗಳು ಧಾರವಾಡದಲ್ಲಿ

ಎಂಟು ಮತ್ತು ಹುಬ್ಬಳ್ಳಿಯಲ್ಲಿ 12 ಇದ್ದವು. ಇದಲ್ಲದೆ ಒಂದು ಸಂಚಾರಿ ಗ್ರಂಥಾಲಯ ಹಾಗೂ ಸ್ಥಳೀಯ ಯುವ ಮಂಡಳಿಗಳಿಂದ ನಡೆಸಲ್ಪಡುತ್ತಿದ್ದ ಏಳು ಸೇವಾ ಕೇಂದ್ರಗಳೂ (ಎರಡೂ ನಗರಗಳಿಗೆ ಸೇರಿ) ಕಾರ್ಯ ನಿರ್ವಹಿಸುತ್ತಿದ್ದವು.

## ಕ್ರೀಡೆ

ಕ್ರೀಡೆ ಮತ್ತು ದೈಹಿಕ ಶಿಕ್ಷಣಕ್ಕೆ ಧಾರವಾಡ ಜಿಲ್ಲೆಯಲ್ಲಿ ಆದ್ಯತೆ ಇರುವುದು ಕಂಡು ಬರುತ್ತದೆ. ಬಲು ಹಿಂದಿನಿಂದಲೂ ಹಳ್ಳಿಗಳಲ್ಲಿ ಗರಡಿ ಮನೆಗಳಿದ್ದವು. ಜಾತ್ರೆಗಳಲ್ಲಿ ಭಾರ ಎತ್ತುವ, ಕುಸ್ತಿ, ಎತ್ತಿನಿಂದ ಭಾರ ಎಳೆಸುವ ಸ್ಪರ್ಧೆಗಳು ನಡೆಯುತ್ತಿದ್ದವು. ಹುಯಿಲಗೋಳ ಶ್ರೀನಿವಾಸರಾಯರು ಗದುಗಿನಲ್ಲಿ 1887ರಲ್ಲಿ ಸ್ಥಾಪಿಸಿದ 'ಯಂಗ್ ಮೆನ್ಸ್ ಫುಟ್ಬಾಲ್ ಕ್ಲಬ್' ಜಿಲ್ಲೆಯ ಪ್ರಥಮ ಆಧುನಿಕ ಕ್ರೀಡಾ ಸಂಸ್ಥೆ ಎನ್ನಬಹುದು. 1916ರಲ್ಲಿ ಧಾರವಾಡದಲ್ಲಿ ಪ್ರಾರಂಭವಾದ 'ಬಾಲ ಮಾರುತಿ ವ್ಯಾಯಾಮ ಸಂಸ್ಥೆ' 1926ರಲ್ಲಿ ಕರ್ನಾಟಕ ವ್ಯಾಯಾಮ ವಿದ್ಯಾಪೀಠ ಎಂಬ ಹೆಸರಿನಲ್ಲಿ ಸ್ವಂತ ಕಟ್ಟಡದಲ್ಲಿ ಮುಂದುವರೆಯಿತು. ಧಾರವಾಡದ ಜಿಮ್‌ಖಾನಾ ಕ್ಲಬ್ 1986ರಲ್ಲಿ ಯುರೋಪಿಯನ್ ಅಧಿಕಾರಿಗಳಿಂದ ಸ್ಥಾಪಿಸಲ್ಪಟ್ಟಿತು. ಇದನ್ನು 1955ರಲ್ಲಿ ಜಿಲ್ಲಾ ಕಲೆಕ್ಟರ್ ಆಗಿದ್ದ ಸಾತೆ ಅಭಿವೃದ್ಧಿಪಡಿಸಿದರು. ಧಾರವಾಡದ ಬಸ್ ನಿಲ್ದಾಣದಲ್ಲಿ ಈಗಲೂ ಕಾಣುವ ಪೋಲಿಸ್ ಆಫಿಸರ್ಸ್ ಕ್ಲಬ್ 1940ರಲ್ಲಿ ಪ್ರಾರಂಭವಾಗಿ ಬಹಳ ವರ್ಷ ನಡೆಯಿತು. ಸವಣೂರಿನ ನವಾಬ ಅಬ್ದುಲ್ ಮಜೀದ್ ಖಾನ್ ಕ್ರಿಕೆಟ್ ಮತ್ತು ಪೋಲೋ ಆಟಗಳಲ್ಲಿ ರಾಷ್ಟ್ರಮಟ್ಟದ ಖ್ಯಾತಿಯ ಕ್ರೀಡಾಪಟುವಾಗಿದ್ದನಲ್ಲದೆ, ದೆಹಲಿಯಲ್ಲಿ 1911ರಲ್ಲಿ ನಡೆದ ಪೋಲೋ ಸ್ಪರ್ಧೆಯಲ್ಲಿ ಭಾಗವಹಿಸಿದ್ದನು. ಧಾರವಾಡದ ಕರ್ನಾಟಕ ಕಾಲೇಜಿಗೆ ಕ್ರಿಕೆಟ್ ಸ್ಪರ್ಧೆಗಳನ್ನು ನಡೆಸುವ ಸಲುವಾಗಿ ಬೆಳ್ಳಿಯ ರೋಲಿಂಗ್ ಷೀಲ್ಡ್ ಸಹ ನೀಡಿದ್ದನು. ಜಿಲ್ಲೆಯ ವಿದ್ಯಾವಂತ ತರುಣರು ಸ್ಥಾಪಿಸಿದ 'ಸರಸ್ವತಿ ಫುಟ್‌ಬಾಲ್ ತಂಡ' ರಾಷ್ಟ್ರಮಟ್ಟದ ಸ್ಪರ್ಧೆಗಳನ್ನೇರ್ಪಡಿಸಿತ್ತು. ವಿ.ಎಸ್. ಬದಾಮಿ ಗೆಳೆಯರು 1932ರಲ್ಲಿ ಗದುಗಿನಲ್ಲಿ ಯೋಗ ವ್ಯಾಯಾಮ ಶಾಲೆ ಆರಂಭಿಸಿದರು. 'ಮರ್ಚೆಂಟ್ಸ್ ಟೀಂ' ಜಿಲ್ಲೆಯ ಖ್ಯಾತ ಫುಟ್‌ಬಾಲ್ ತಂಡವಾಗಿತ್ತು. 1945ರಲ್ಲಿ ಸವಣೂರಿನ 'ಸೋಷಿಯಲ್ ಕ್ಲಬ್'ನಲ್ಲಿ ಒಂದು ಟೆನ್ನಿಸ್ ಕೋರ್ಟ್, ಒಂದು ಬಿಲಿಯರ್ಡ್ಸ್ ಟೇಬಲ್ ಇದ್ದು, ಇಲ್ಲಿ ಮನೋರಂಜನೆಗಾಗಿ ಒಂದು ರೇಡಿಯೋ ಸಹ ಇಡಲಾಗಿತ್ತು.

ಹಾಕಿ ಆಟಕ್ಕೆ ಜಿಲ್ಲೆ ಮೊದಲಿನಿಂದಲೂ ಹೆಸರುವಾಸಿಯಾಗಿದ್ದು, ಶಾಲಾ ಆಟಗಳಲ್ಲಿ 1925ರಿಂದಲೂ ಹಾಕಿ ಸೇರಿತ್ತು. ರಾಜ್ಯದ ಪ್ರಪ್ರಥಮ ಹಾಕಿ ಆಟಗಾರ ಸಾಳುಂಕೆ ಧಾರವಾಡದವರಾಗಿದ್ದು, 1936ರಲ್ಲಿ ಧ್ಯಾನಚಂದ್ರರ ನೇತೃತ್ವದಲ್ಲಿ ಬರ್ಲಿನ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. 1940 ರಿಂದ 1950ರವರೆಗೆ ಜಿಲ್ಲೆಯ ಪೋಲಿಸ್ ಹಾಕಿ ಟೀಂ ಹೆಸರುವಾಸಿಯಾಗಿತ್ತು. ಈ ವೇಳೆಗೆ ಪ್ರಾರಂಭವಾದ 'ಕ್ಯಾಂಪ್‌ಬೆಲ್ ಕಪ್' ಹಾಕಿ ಸ್ಪರ್ಧೆ 1956ರವರೆಗೂ ನಡೆಯಿತು. ಗದುಗಿನಲ್ಲಿ 1920ರ ಸುಮಾರಿಗೆ 'ಸೆಟಲ್‌ಮೆಂಟ್ ಏರಿಯಾ ಹಾಕಿ ಟೀಂ' ಜನಪ್ರಿಯವಾಗಿದ್ದು, ಹಲವಾರು ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗೆದ್ದಿತು. ಹುಬ್ಬಳ್ಳಿಯ ರೈಲ್ವೆ ಹಾಕಿ ಟೀಂ ಸಹ ಪ್ರಸಿದ್ಧಿ ಪಡೆದಿತ್ತು. ಇಲ್ಲಿನ ಗೋಕಾಕ್ ಸಹೋದರರು ಉತ್ತಮ ಹಾಕಿ ಪಟುಗಳಾಗಿದ್ದರು. ಬಟಾಡೆ ಸಹೋದರರು, ಸಿದ್ಧಲಿಂಗ, ಭಾನುಭಟ್, ಕಾಥವಟೆ ಸೋದರರು ಮುಂತಾದ ರಾಷ್ಟ್ರೀಯ ಆಟಗಾರರೇ ಅಲ್ಲದೆ, ಎಚ್.ಎಸ್.ಪ್ರಸಾದ್, ಸಿ.ವೈ.ಕೋರ್‌ವಾರ್, ಪಿ.ವೈ. ಹೊಸಮನಿ, ಬಿ. ಅರುಣ್‌ಕುಮಾರ್, ಎಸ್.ಎಸ್. ರಾಣೆಬೆನ್ನೂರ್, ಗೋಲ್‌ಕೀಪರ್ ಸಯ್ಯದ್ ಹಷಿಂ ಅಲಿ, ಖಾಜಿ ಬತೀಜ, ಹುಸೇನ್ ಸಾಬ್ ಸಿಂದಗಿ, ಸಯ್ಯದ್ ಸಾಹೆಬ್ ಸಿಂದಗಿ, ಬಿ.ಎಂ. ನರಗುಂದ ಮುಂತಾದವರು ಜಿಲ್ಲೆಯ ಉಲ್ಲೇಖನೀಯ ಹಾಕಿ ಆಟಗಾರರೆನಿಸಿದ್ದರು. ಮಹಿಳೆಯರ ವಿಭಾಗದಲ್ಲಿ ವೀಣಾ ಸೊರಟೂರ ಮತ್ತು ಪೂರ್ಣಿಮಾ ಖ್ಯಾತ ಆಟಗಾರ್ತಿಯರಾಗಿದ್ದರು. ಗೌಡ್ ಯೆಲ್ಲರ್ 1989ರ ಏಷಿಯನ್ ವಿಮೆನ್ಸ್ ಹಾಕಿಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

ಟೆನ್ನಿಸ್ ಆಟಕ್ಕೆ 1920ರ ದಶಕದಲ್ಲಿ ಒತ್ತು ಕೊಟ್ಟವರೆಂದರೆ ಐ.ಎ.ಎಸ್. ಅಧಿಕಾರಿಯಾಗಿದ್ದ ಚಿನ್ನಮುಳಗುಂದ. ಇದೇ ಸಮಯದಲ್ಲಿ ರಾವ್ ಸಾಹೇಬ್ ಅನಂತಗಿರಿಯವರ 'ಕಾಸ್ಮಾಸ್ ಕ್ಲಬ್' ಮತ್ತು 'ಮಿತ್ರ ಸಮಾಜ ಸ್ಟೂಡೆಂಟ್ಸ್ ಕ್ಲಬ್'ಗಳು ಪ್ರಸಿದ್ಧವಾಗಿದ್ದವು. ಆಗಿನ ಮುಖ್ಯ ಆಟಗಾರರಲ್ಲಿ ನರಸಾಪುರ, ಅಣ್ಣಾ ಶಿರಹಟ್ಟಿ, ಕೊಯಮತ್ತೂರು, ನರಸಿಜೋಷಿ, ಲಿಮೆಯೆ, ವಾಮನ ಜಮಖಂಡಿ, ಯಲಬುರ್ಗಿಮಠ, ಸತೀಶ್ ಟಗರ್‌ಪುರ್, ಹುಬ್ಬಳ್ಳಿ ರೇಲ್ವೆ ಟೆನ್ನಿಸ್ ಆಟಗಾರರಾದ ಜಾರ್ಜ್ ಮೀರಜ್‌ಕರ್ ಹಾಗೂ ಕೆ.ಪಿ.ಆರ್. ಶೆಟ್ಟಿ ಮುಂತಾದವರು ರಾಷ್ಟ್ರಮಟ್ಟದ ಆಟಗಾರರಾಗಿದ್ದರು. ಧಾರವಾಡದ ಟೆನ್ನಿಸ್ ಕೇಂದ್ರವಾದ ರಾಜ್ಯಾಧ್ಯಕ್ಷ ಕ್ರೀಡಾಂಗಣ ಒಂದು 'ಟೆನ್ನಿಸ್ ಅಕಾಡೆಮಿ'ಯಾಗಿ ಮಾರ್ಪಡುತ್ತಿದ್ದು, ಇದರ ಬೆನ್ನೆಲುಬಾಗಿ ಜಿಲ್ಲಾಧಿಕಾರಿ ಆರ್.ಬಿ. ಅಗವನೆ, ಪಿ. ಅರವಿಂದ ಜಾಧವ್ ಮತ್ತು ಸತೀಶ್ ಟಗರ್‌ಪುರ್ ಸೇವೆ ಸಲ್ಲಿಸಿರುತ್ತಾರೆ. ಈ ಟೆನ್ನಿಸ್ ಕ್ರೀಡಾಂಗಣದಲ್ಲಿ 1938ರಲ್ಲಿ

ವಿಶ್ವಚಾಂಪಿಯನ್‌ರಾಗಿದ್ದ ಬಿಲ್ ಟಿಲ್ಡನ್ ಮತ್ತು ಹೆನ್ರಿಕೋಶ್ ಆಡಿದ್ದರು. ಪ್ರಖ್ಯಾತ ವಿಜಯ್ ಹಾಗೂ ಆನಂದ ಅಮೃತ್‌ರಾಜ್ ಸಹ ಇಲ್ಲಿ ಟೆನ್ನಿಸ್ ಆಡಿರುತ್ತಾರೆ.

ಕ್ರಿಕೆಟ್ ಆಟ 1920ರ ದಶಕದಲ್ಲಿ ಯುರೋಪಿಯನ್ ಅಧಿಕಾರಿಗಳ ಉತ್ತೇಜನದಿಂದ ಪ್ರಸಿದ್ಧಿ ಪಡೆಯಿತು. ಜಿಲ್ಲಾ ಕಲೆಕ್ಟರಾಗಿದ್ದ ನಾರ್ತ್‌ಕೋರ್ಟ್ ಹೆಸರಿನಲ್ಲಿ 'ನಾರ್ತ್ ಕೋರ್ಟ್ ಫೀಲ್ಡ್ ಕಪ್'ಗಾಗಿ ಪಂದ್ಯಗಳು ನಡೆಯುತ್ತಿದ್ದವು. ಆ ಸಮಯದ ಜಿಲ್ಲೆಯ ಖ್ಯಾತ ಕ್ರಿಕೆಟ್ ಕಲಿ ಅಗ್ಗು ಭಾಸ್ಕರ್, ರೆಸ್ಟ್ ಆಫ್ ಇಂಡಿಯಾ ಪರವಾಗಿ ಇಂಗ್ಲೆಂಡ್ ವಿರುದ್ಧ 85 ರನ್ ಗಳಿಸಿದ್ದರು. ಕೆ.ಕೆ. ಲೇಲೆ ಖ್ಯಾತ ಕ್ರಿಕೆಟ್ ಆಟಗಾರರಾಗಿದ್ದರು. ಮತ್ತೊಬ್ಬ ಪ್ರಸಿದ್ಧ ಆಟಗಾರ ಕರ್ನಾಟಕ ಕಾಲೇಜ್ ಟೀಂ ನ ನಾಯಕ ಜಕ್ಕನಗೌಡರನ್ನು 'ಕರ್ನಾಟಕ ಮುಷ್ತಾಕ್ ಆಲಿ' ಎಂದು ಕರೆಯುತ್ತಿದ್ದರು. 1936ರಲ್ಲಿ ಕೊಪ್ಪಿಕರ್ ಮುಂಬೈ ಪ್ರಾಂತ್ಯದಲ್ಲಿ ಖ್ಯಾತಿ ಹೊಂದಿದ್ದರು. ಮೆಲ್ಲಿ ಮತ್ತು ವೆನ್ಸ್‌ಪಾಲ್ 1950ನೇ ದಶಕದ ಆಲ್‌ರೌಂಡರ್‌ಗಳೆಂದು ಖ್ಯಾತರಾಗಿದ್ದರು. ಧಾರವಾಡದ ಕ್ರಿಕೆಟ್ ಕ್ಲಬ್ ಆಫ್ ಕರ್ನಾಟಕ (ಸಿ.ಸಿ.ಕೆ.) 1949ರಲ್ಲಿ ಪ್ರಾರಂಭವಾಗಿ ಉತ್ತಮ ಕ್ರಿಕೆಟ್ ಪಟುಗಳನ್ನು ರಾಜ್ಯಕ್ಕೆ ನೀಡಿತು. ಹುಬ್ಬಳ್ಳಿ ಸ್ಪೋರ್ಟ್ಸ್ ಕ್ಲಬ್ 1950ರಲ್ಲಿ ಪ್ರಾರಂಭವಾಯಿತು. 1960ರ ದಶಕದ ಪ್ರಮುಖ ಆಟಗಾರರೆಂದರೆ, ಶಿರೂರ್, ಗಣು ಸಂಶಿ, ಕೇಸರಕೊಡಿ, ಹೆಮ್ಮಾಡಿ, ಮೌಲ್ವಿ, ಕಳಸವಾಡ, ದಿನೇಶ್ ತ್ರಿಕನ್ನಾಡ್, ಮತ್ತು ಸತೀಶ್ ಟಗರ್‌ಪುರ್. ದಿಲೀಪ್ ಫಡಕೆ ಮತ್ತು ಕಾಟಯ್ಯ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿ ಹೊಂದಿದ್ದರು. 1970ರಲ್ಲಿ ಪ್ರಾರಂಭವಾದ ಹುಬ್ಬಳ್ಳಿ ಕ್ರಿಕೆಟ್ ಕ್ಲಬ್ ಅನ್ನು ಈಗ 'ಬಿ.ಡಿ.ಕೆ. - 11' ಎಂದು ಕರೆಯಲಾಗುತ್ತಿದೆ. ಈ ದಶಕದ ಬಾಬಾ ಭೂಸರ, ಸುಧಾಕರ್ ರಾಯ್, ಹುಬ್ಬಳ್ಳಿ ರೈಲ್ವೆಯ ಸೀತಾರಾಂ ಮತ್ತು ಸಾಲಿಯಾನ್, ಖ್ಯಾತ ಕ್ರಿಕೆಟ್ ಆಟಗಾರರು. ಹುಬ್ಬಳ್ಳಿಯ ಕರ್ನಾಟಕ ಸ್ಟಾರ್ ಸ್ಪೋರ್ಟ್ಸ್ ಕ್ಲಬ್ ಪ್ರಸ್ತುತ ಪ್ರಮುಖ ಟೀಂಗಳಲ್ಲಿ ಒಂದಾಗಿದೆ.

ಟೇಬಲ್ ಟೆನ್ನಿಸ್ ಜಿಲ್ಲೆಯಲ್ಲಿ ಪ್ರಸಿದ್ಧಿಗೆ ಬಂದುದು 1950ರಿಂದ ಈಚೆಗೆ. ಹುಬ್ಬಳ್ಳಿಯ ರೇಲ್ವೆ ಟೀಂ ಮತ್ತು ಧಾರವಾಡದ ಕಾಸ್ಮಾಸ್ ಟೀಂ ಪ್ರಮುಖ ಟೇಬಲ್ ಟೆನ್ನಿಸ್ ಟೀಂ ಗಳೆಂದು ಖ್ಯಾತಿ ಹೊಂದಿದ್ದವು. ಈ ಕ್ರೀಡೆಯಲ್ಲಿ ಜಿಲ್ಲೆಯ ಪ್ರಾರಂಭಿಕ ಆಟಗಾರರೆಂದರೆ ಜಯಶೀಲನ್ ಮತ್ತು ಕರುಣಾಕರನ್. ಮುಂದಿನ ದಶಕದಲ್ಲಿ, 1960ರ ನಂತರ ಸುಧೀರ್ ಗೋಖಲೆ, ಜೆ. ಪುರುಷೋತ್ತಮರಾವ್, ಸತೀಶ್ ಟಗರ್‌ಪುರ್, ರವಿ ಕುಲಕರ್ಣಿ ರಾಷ್ಟ್ರೀಯ ಖ್ಯಾತಿಯ ಆಟಗಾರರಾಗಿದ್ದರು. ಇದೇ ವೇಳೆಗೆ ಸರಳಾ ಜಮಖಂಡಿ ಜಿಲ್ಲೆಯ ಮಹಿಳಾ ಚಾಂಪಿಯನ್ ಆಗಿದ್ದರು. ಜಾರ್ಜ್.ಎಸ್.ಹೆನ್ರಿ ಎಲ್.ಐ.ಸಿ.ಟೀಂ ನಿಂದ ದಕ್ಷಿಣವಿಭಾಗದ ಟೀಂ ಪ್ರತಿನಿಧಿಸಿದ್ದರಲ್ಲದೆ, ರಾಷ್ಟ್ರಖ್ಯಾತಿಯ ಟೇಬಲ್ ಟೆನ್ನಿಸ್ ರೆಫರಿ ಆಗಿದ್ದಾರೆ. ಚಾರ್ಲ್ಸ್ ಉಪಾಧ್ಯಾಯ ಜಿಲ್ಲಾ ಟೇಬಲ್ ಟೆನ್ನಿಸ್ ಸಂಸ್ಥೆಯ ಕಾರ್ಯದರ್ಶಿ ಮಾತ್ರವಲ್ಲದೆ ಉತ್ತಮ ಆಟಗಾರರು, ರಾಷ್ಟ್ರಖ್ಯಾತಿಯ ರೆಫರಿ ಆಗಿದ್ದಾರೆ. ಇತ್ತೀಚೆಗೆ ರವಿ ಒಡೆಯರ್, ಜೆಪೂರ್, ಸಾಗರ್, ನಂದಾ ದೇಶಪಾಂಡೆ, ರವಿಕುಮಾರ್ ನಾಯಕ್, ಸನದಿ ಬಂಧುಗಳು ಹಾಗೂ ಮಹಿಳಾ ಆಟಗಾರಲ್ಲಿ ಆರತಿ ವಾಸನ್ ಖ್ಯಾತನಾಮರಾಗಿದ್ದಾರೆ. ಸಬೀನ ಸನದಿ 1985ರಲ್ಲಿ ಜಿಲ್ಲೆಯಲ್ಲಿ ಸಬ್ ಜೂನಿಯರ್ ಟೀಂನಲ್ಲಿ ಪ್ರತಿನಿಧಿಸಿದ್ದರು.

ವಾಲಿಬಾಲ್ ಜಿಲ್ಲೆಯಲ್ಲಿ 1930ರ ದಶಕದಲ್ಲಿ ಜನಪ್ರಿಯವಾಯಿತು. ಪ್ರಾರಂಭಿಕ ಟೀಂಗಳಾದ 'ಮಂಗಳಗಟ್ಟಿ ಟೀಂ' 'ರಾಣೆಬೆನ್ನೂರ್ ಟೀಂ' ಮತ್ತು ಹುಬ್ಬಳ್ಳಿ 'ರೇಲ್ವೆ ಟೀಂ' ಗಳಲ್ಲಿ ಉತ್ತಮ ಆಟಗಾರರಿದ್ದರು. ವಾಲಿಬಾಲ್ ಕ್ರೀಡೆಗೆ ಉತ್ತಮ ಪ್ರೋತ್ಸಾಹ ಖಾನ್ ಸೋದರರಿಂದ ದೊರೆಯಿತು. ಬಷೀರ್‌ಖಾನ್ ವಿಶ್ವವಿದ್ಯಾಲಯ ಕ್ಯಾಪ್ಟನ್ ಆಗಿದ್ದರು ಮತ್ತು ಅವರ ಸಹೋದರ ಜಮೀರ್‌ಖಾನ್ ರೇಲ್ವೆ ಟೀಂ ನ ನಾಯಕರೂ ಆಗಿದ್ದರು. ಮಾಜಿ ಸಚಿವ ಹಿಂಡಸಗೇರಿ ಉತ್ತಮ ವಾಲಿಬಾಲ್ ಪಟುವಾಗಿದ್ದಾರೆ.

ಬ್ಯಾಡ್‌ಮಿಂಟನ್ 1945ರ ವೇಳೆಗೆ ಜನಪ್ರಿಯ ಆಟವಾಗಿದ್ದು, ಅದಂಖಾನ್ ಪಠಾನ್, ತಿಳೆ, ಜವಳಿ, ಫೋಟೆಗಾಳೆಕರ್, ಹಳದಿಪುರ್ ಉತ್ತಮ ಆಟಗಾರರಿದ್ದರು. 1950ರ ದಶಕದಲ್ಲಿ ಜೆ.ಎಸ್. ದೇಶಪಾಂಡೆ ರಾಷ್ಟ್ರೀಯ ಖ್ಯಾತಿ ಗಳಿಸಿದರು. ನಂದೂ ನಾಟೇಕರ್ ಪ್ರಾರಂಭದಲ್ಲಿ ಟೆನ್ನಿಸ್ ಆಟಗಾರರಾಗಿದ್ದು, ನಂತರ ಬ್ಯಾಡ್‌ಮಿಂಟನ್ ಆಟದಲ್ಲಿ ವಿಶ್ವಖ್ಯಾತಿ ಗಳಿಸಿದರು. ರವಿಫಡಕೆ, ವಿನಯ ಜವಳಿ, ಗುರುದೇಶಪಾಂಡೆ ಸಹ ಹೆಸರುವಾಸಿಯಾದ ಆಟಗಾರರಾಗಿದ್ದರು. ಮಹಿಳಾ ಆಟಗಾರರಲ್ಲಿ ಜೋಸೆಫ್ ಸಹೋದರಿಯರ ಹೆಸರು ಮನ್ನಣೆ ಪಡೆದಿತ್ತು. ಪದ್ಮ ಕಮಲಾನಿ 1950ರ ದಶದಕದ ಕೊನೆಗೆ ಮಹಿಳಾ ಚಾಂಪಿಯನ್ ಆಗಿದ್ದರು.

ಫುಟ್‌ಬಾಲ್ ಕ್ರೀಡೆಯೂ 1930ರ ನಂತರ ಖ್ಯಾತಿ ಹೊಂದಿತು. 'ಸರಸ್ವತಿ ಫುಟ್‌ಬಲ್ ಟೀಂ' 'ಮರ್ಚೆಂಟ್ಸ್ ಟೀಂ' ಹುಬ್ಬಳ್ಳಿಯ ರೇಲ್ವೆ ಟೀಂ ಮತ್ತು ಧಾರವಾಡದ ಪೋಲಿಸ್ ಟೀಂಗಳು ಉತ್ತಮ ಫುಟ್‌ಬಾಲ್ ಪಟುಗಳನ್ನು ಹೊಂದಿದ್ದವು. ಪ್ರಸ್ತುತ ಸೆಟ್ಲ್‌ಮೆಂಟ್

ಟೀಂ ಪ್ರಸಿದ್ಧವಾಗಿದ್ದು, ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡಾಪಟುಗಳನ್ನು ಹೊಂದಿರುತ್ತದೆ. ಜಿಲ್ಲೆಯ ಮೌಲ್ವಿ, ವೈಲ್ಸ್, ಫರ್ನಾಂಡಿಸ್, ಕರ್ನಲ್ ಕನಬರಗಿಮಠ ಈ ಕ್ರೀಡೆಯ ಖ್ಯಾತನಾಮ ಪಟುಗಳಾಗಿದ್ದಾರೆ.

ಅಥ್ಲೆಟಿಕ್ಸ್ ಜಿಲ್ಲೆಯಲ್ಲಿ ವಿಶ್ವವಿದ್ಯಾಲಯದ ಪ್ರಾರಂಭಕ್ಕೆ ಮೊದಲೇ ಜನಪ್ರಿಯತೆ ಗಳಿಸಿತ್ತು. ಹುಬ್ಬಳ್ಳಿಯ ಜಾರ್ಜ್ ಬನ್ಯನ್, ಧಾರವಾಡದ ಸಿಂಧೆ, ಮೇಜರ್ ಮಜುಂದಾರ್, ಕಳವಿಮಠ, ಶಾಲಿನಿ, ಗಟಿರಡಿಯಾಳ್ ಆಗಲೇ ಉತ್ತಮ ಅಥ್ಲೀಟ್‌ಗಳೆಂದು ಪ್ರಸಿದ್ಧಿ ಹೊಂದಿದ್ದು, ಹುಬ್ಬಳ್ಳಿಯ ಸಿಲಿನ್ ಓ ಕೊನೆಲ್ 1955ರಲ್ಲಿ ಡಿಸ್ಕಸ್ ಥ್ರೋ ಆಟದಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದರು. ಹುಬ್ಬಳ್ಳಿ ರೇಲ್ವೆಯ ಜಡ್.ಎ. ಖಿಲ್ಲೇದಾರ್ ಹ್ಯಾಮರ್ ಥ್ರೋ ಆಟದಲ್ಲಿ ರಾಷ್ಟ್ರಮಟ್ಟದ ಚಾಂಪಿಯನ್‌ಆಗಿದ್ದರು. ಇತರೆ ಆಟೋಟಗಳಲ್ಲಿ ಜಾರ್ಜ್ ಪೀಟರ್ಸ್, ಸುಸೇನಾದನ್, ಜಾರ್ಜ್ ಮಾಣಿಕ್ಯಂ, ಮಹಮ್ಮದ್ ಯುಸುಫ್ ಹೆಸರುವಾಸಿಯಾಗಿದ್ದರು. 1980ರಲ್ಲಿ ಹುಬ್ಬಳ್ಳಿ ತಾಲೂಕಿನ ಕಡಿಕೊಪ್ಪದ ಲಕ್ಷ್ಮಣ ಹರಿಯಪ್ಪ ಬೆನಕಣ್ಣನವರ್ ವಾಸ್ಕೋದಲ್ಲಿ ನಡೆದ ಅಖಿಲ ಭಾರತ ಮ್ಯಾರಥಾನ್ ಸ್ಪರ್ಧೆಯಲ್ಲಿ 46 ಕಿ.ಮೀ. ದೂರವನ್ನು 3 ಗಂಟೆ, 19 ನಿಮಿಷ, 50 ಸೆಕೆಂಡುಗಳಲ್ಲಿ ಕ್ರಮಿಸಿ, ರಜತಪದಕ ಪಡೆದರು. 1990ರ ನವೆಂಬರ್‌ನಲ್ಲಿ ಕೌಲಾಲಂಪುರದಲ್ಲಿ ನಡೆದ ಆರನೇ ಏಷಿಯನ್ ವೆಟರನ್ಸ್ ಅಥ್ಲೆಟಿಕ್ಸ್ ಮೀಟ್‌ನಲ್ಲಿ ಧಾರವಾಡದ ಹನುಮವ್ವ ಚುಲಕಿ ಹತ್ತು ಕಿ.ಮೀ. ದೂರದ ವೇಗ ನಡುಗೆ ಸ್ಪರ್ಧೆಯನ್ನು ಬರಿಗಾಲಲ್ಲಿ 32ನಿಮಿಷ 18ಸೆ.ಗಳಲ್ಲಿ ಗೆದ್ದು ವಿಶ್ವದಾಖಲೆ ಸ್ಥಾಪಿಸಿದರು. (ಹಿಂದಿನ ವಿಶ್ವದಾಖಲೆ 32 ನಿ - 36 ಸೆಕೆಂಡುಗಳು).

ಕಬಡ್ಡಿ ಆಟ 1960ರಿಂದ ಈಚೆಗೆ ಜನಪ್ರಿಯವಾಗುತ್ತಿದ್ದು, ಮುಳಗುಂದದ 'ನವರಂಗ' ಮತ್ತು ಬ್ಯಾಡಗಿ ಟೀಂಗಳು ಉತ್ತಮ ಆಟಗಾರರನ್ನು ಹೊಂದಿವೆ. ಕಡ್ಡಿ ಮತ್ತು ಕಾಳೆ ವಿಶ್ವವಿದ್ಯಾಲಯ ಟೀಂನ ಪ್ರಸಿದ್ಧ ಆಟಗಾರರು.

ಈಜು ಒಂದು ಕ್ರೀಡೆಯಾಗಿ ತಾಂತ್ರಿಕವಾಗಿ ಪ್ರಾರಂಭವಾದದ್ದು 1960ರ ದಶಕದಲ್ಲಿ. ಜಿಲ್ಲೆಯ ಮುಖ್ಯ ಈಜುಗಾರರಾದ ಜೆ.ವಿ.ಮುದ್ದೆಣ್ಣನವರ್ ಹಾಗೂ ಎಸ್.ರಾಘವನ್ 1990-91ರಲ್ಲಿ ತಿರುವನಂತಪುರದಲ್ಲಿ ನಡೆದ ಸ್ಪರ್ಧೆಗಳಲ್ಲಿ ಕ್ರಮವಾಗಿ ಎರಡನೇ ಹಾಗೂ ಮೂರನೇ ಸ್ಥಾನ ಪಡೆದರು. ದೈಹಿಕ ಶಿಕ್ಷಣಕ್ಕೆ ಜಿಲ್ಲೆಯಲ್ಲಿ ಹೊಸ ಆಯಾಮ ನೀಡಿದವರು ಕೃಷ್ಣರಾವ್ ನಾಡಗೀರ್ ಮಾಸ್ತರ್ 1928ರಲ್ಲಿ ಸ್ಥಾಪಿತವಾದ ಮಲ್ಲಸಜ್ಜ ವ್ಯಾಯಾಮ ಶಾಲೆಯಲ್ಲಿ 1931ರಿಂದ ದೈಹಿಕ ಶಿಕ್ಷಣವನ್ನು ವ್ಯವಸ್ಥಿತ ರೀತಿಯಲ್ಲಿ ಅಭಿವೃದ್ಧಿಗೊಳಿಸಲು ಇವರು ಕಾರಣಕರ್ತರು. ಇವರು ಜನತಾ ಕಾಲೇಜಿನಲ್ಲಿ ಕ್ರೀಡಾ ಅಧ್ಯಾಪಕರೂ ಆಗಿದ್ದರು.

ಖೋ - ಖೋ ಆಟ ಜಿಲ್ಲೆಯಲ್ಲಿ ಹೆಚ್ಚು ಜನಪ್ರಿಯವಲ್ಲದಿದ್ದರೂ ಕೆ.ಇ. ಬೋರ್ಡ್ ಸಂಸ್ಥೆಯ ಗೆಜ್ಜಿಯವರಿಂದ ಉತ್ತಮ ಪ್ರೋತ್ಸಾಹ ಈಚೆಗೆ ದೊರೆಯುತ್ತಿದೆ. ಪರ್ವತಾರೋಹಣ, ಶಿಲಾರೋಹಣಗಳಲ್ಲಿ ಎಂ.ಎಲ್. ಜೋಷಿ, ಸತೀಷ್ ಕನ್ನಯ್ಯ ತಮ್ಮ 'ಯೂತ್ ಕ್ಲಬ್' ಮೂಲಕ ಟ್ರೆಕ್ಕಿಂಗ್ ಶಿಬಿರಗಳನ್ನು ನಡೆಸಿದ್ದಾರೆ. ಮಾಲಾ ಹೊನ್ನತ್ತಿ ಜಿಲ್ಲೆಯ ಪ್ರಸಿದ್ಧ ಮಹಿಳಾ ಟ್ರೆಕ್ಕರ್ ಎನ್ನಿಸಿದ್ದಾರೆ. ಚದುರಂಗ ಅಂತರರಾಷ್ಟ್ರೀಯ ಆಟವೆನಿಸಿದ ಮೇಲೆ, ಮಂಗಳವೇಡೆ ಮತ್ತು ಭಟ್ ಈ ಆಟದಲ್ಲಿ ತರಬೇತಿ ನೀಡುತ್ತಿದ್ದು, ಲೈಟನಿಂಗ್ ಚೆಸ್ ಟೂರ್ನಮೆಂಟ್‌ಗಳನ್ನು ನಡೆಸುತ್ತಾರೆ.

**ಕರ್ನಾಟಕ ವಿಶ್ವವಿದ್ಯಾಲಯ ಕ್ರೀಡೆಗಳು**

ಆಟೋಟಗಳು : (ಅಥ್ಲೆಟಿಕ್ಸ್) : ಜಿಲ್ಲೆಯಲ್ಲಿ ವಿಶ್ವವಿದ್ಯಾಲಯದ ಸ್ಥಾಪನೆಯ ನಂತರ ವಿವಿಧ ಕ್ರೀಡೆಗಳಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡಾಪಟುಗಳು ತಯಾರಾದರು. ಪ್ರಾರಂಭಿಕ ಹೆಸರುಗಳಲ್ಲಿ ಎಲ್ಲಾ ಕ್ರೀಡೆಗಳಲ್ಲೂ ಭಾಗವಹಿಸಬಲ್ಲ ಚತುರತೆ ಹೊಂದಿದ್ದ ಬನ್ಯನ್ ಹಾಗೂ ಖ್ಯಾತನಾಮರಾದ ಕರ್ನಲ್ ಕಣಬರಗಿಮಠ, ಕಳವಿ ಮಠ, ಗಟ್ರಡಿಯಾಳ್, ಮೇಜರ್ ವಜನ್‌ದಾರ್, ಜವಳಿ ಮುಂತಾದ ಕ್ರೀಡಾಪಟುಗಳು 1930ರಿಂದ 1950ರವರೆಗೆ ಧಾರವಾಡದಿಂದ ಮುಂಬೈ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದರು. ಮೇಜರ್ ವಜನ್‌ದಾರ್ ವರ್ಲ್ಡ್ ಯೂನಿವರ್ಸಿಟೀಸ್ ಒಲಿಂಪಿಯಾಡ್‌ನಲ್ಲಿ ಭಾಗವಹಿಸಿದ್ದರು. ಎ.ಎಸ್. ಕಸಬೆ 1950ರಲ್ಲಿ 1500 ಮತ್ತು 5000 ಮೀಟರ್ ಓಟದಲ್ಲಿ ಗೋಲ್ಡನ್ ಡಬಲ್ ಪ್ರಶಸ್ತಿ ಗಳಿಸಿದರು. ಮಹಿಳಾ ಅಥ್ಲೀಟ್‌ಗಳ ಪೈಕಿ ಸೆಲ್ ಓ ಕೊನೆಲ್ 1951-52ರಲ್ಲಿ ಹರ್ಡಲ್ಸ್, ಷಾಟ್‌ಪುಟ್, ಡಿಸ್ಕಸ್ ಮತ್ತು ಜಾವೆಲಿನ್ ಸ್ಪರ್ಧೆಗಳಲ್ಲಿ ಒಟ್ಟಿಗೇ ಒಂಬತ್ತು ಪದಕಗಳನ್ನು ಗೆದ್ದ ಖ್ಯಾತಿ ಗಳಿಸಿದವರು. 800 ಮೀಟರ್ ಓಟದಲ್ಲಿ ಜಾಕಬ್ ಮತ್ತು ಸಿ.ಡಿ. ಸಮಗೊಂಡ್ ಖ್ಯಾತನಾಮರಾಗಿದ್ದರು. ತ್ರಿಕನ್ನಾಡ್ ಮತ್ತು ಡಿ.ಬಿ.

ಪಾಟೀಲ್ ಆಲ್‌ರೌಂಡ್ ಅಥ್ಲೀಟ್‌ಗಳೆಂದು ಹೆಸರು ಗಳಿಸಿದ್ದರು. ಜಾವೆಲಿನ್ ಆಟದಲ್ಲಿ 1954ರಲ್ಲಿ ಅಲಿಘಡದಲ್ಲಿ ನಡೆದ ಸ್ಪರ್ಧೆಯಲ್ಲಿ ಜೆ.ಜೆ. ಸ್ಯಾಮ್ಯುವೆಲ್ ಎರಡನೇ ಸ್ಥಾನ ಗಳಿಸಿದರು. ಜೆಡ್.ಎ. ಖಿಲ್ಲೇದಾರ್ 1956ರಲ್ಲಿ ಕಲ್ಕತ್ತಾದಲ್ಲಿ, 1957ರಲ್ಲಿ ಪೂನಾದಲ್ಲಿ ಮತ್ತು 1958ರಲ್ಲಿ ಜಬ್ಬಲ್‌ಪುರದಲ್ಲಿ ಸತತವಾಗಿ ಮೂರು ಬಾರಿ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಜಯಶಾಲಿಯಾದರು. ಉತ್ತಮ ಓಟಗಾರ ಕೆಲ್ವಿನ್ ಬ್ರಗಾಂಜಾ ಮತ್ತು ಹೈಜಂಪ್ ಆಟಗಾರ್ತಿ ಚೌಗುಲೆ ಪಾರಿತೋಷಕಗಳನ್ನು ಗಳಿಸಿದರು. ನಂತರ ಮೆರೆದ ಮಹಿಳಾ ಆಲ್ ರೌಂಡ್ ಅಥ್ಲೀಟ್ ಎಂದರೆ ಸಂಯುಕ್ತಾ ಕೇಸರಕೋಡಿ. 1960 ರಿಂದ 1970ರ ದಶಕ ಜಿಲ್ಲೆಯ ಕ್ರೀಡಾ ಚಟುವಟಿಕೆಗಳಲ್ಲಿ ಮಹತ್ವದ ದಶಕವಾಗಿರಲಿಲ್ಲ. ತದನಂತರ ಉದಯ್‌ಪ್ರಭು 'ಫ್ಲೈಯಿಂಗ್ ಸಿಖ್' ಎಂಬ ಪಟ್ಟಕ್ಕೇರಿದ ಮಿಲ್ಖಾಸಿಂಗ್‌ರಷ್ಟೇ ಖ್ಯಾತನಾಮರಾದರು. ಜಯ್‌ಪುರದಲ್ಲಿ 1971ರಲ್ಲಿ ಜಾವೆಲಿನ್ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಗಳಿಸಿದ ಎಸ್.ವಿ. ಕಾಮತ್ 1973ರಲ್ಲಿ ಗ್ವಾಲಿಯರ್ ಸ್ಪರ್ಧೆಗಳಲ್ಲಿ ಚಾಂಪಿಯನ್ ಎನಿಸಿದರು. ದೂರದ ಓಟಗಾರರಲ್ಲಿ ಪಿ.ಕೆ. ಗಾಯಕ್‌ವಾಡ್, ವೈ.ಆರ್. ಗೆಟಿಯವರ್ ಮತ್ತು ಮಹಿಳೆಯರಲ್ಲಿ ಕುಂದನ್ ಶಿಂಗೆ ಇದೇ ದಶಕದಲ್ಲಿ ಖ್ಯಾತಿ ಗಳಿಸಿದರು. ಜೇಮ್ಸ್ ವೆಲೆಂಟೈನ್ ಉತ್ತಮ ಪೋಲ್ ವಾಲ್ಟರ್ ಎಂದು ಜನಪ್ರಿಯರಾದರೆ, ಬಿ.ಜಿ. ಸುಣ್ಣಗಾರ್ 1979 ರಿಂದ 81ರ ಅವಧಿಯಲ್ಲಿ 5,000 ಮತ್ತು 10,000 ಮೀಟರ್ ಓಟ ಸ್ಪರ್ಧೆಯಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಗಳಿಸಿದರು. ಇವರಲ್ಲದೆ ಪಿ.ಐ.ನಾಯಕ್, ಸಿ. ಸಯಲಾಸ್, ಡೆಲ್ಲಾರೋಡಿಗ್ರ್ಸ್, ರಾಷ್ಟ್ರಖ್ಯಾತ ಅರ್ಜುನ್ ದೇವಯ್ಯ, ಗುರುದೇವ್ ಹಿರೇಮಠ, ಎ.ಬಿ. ಗಾಯಕ್‌ವಾಡ್, ಕುಮಾರಿ ಶಿಮ್ಲಾನಾಥ್, ಡೆನ್‌ಜಿಲ್ ಫರ್ನಾಂಡಿಸ್, ಜಿ.ಸಿ. ಹೆಗಡೆ, ಡಿ.ಎ. ಅಲಗೌಡನವರ್, ಎಂ.ಆರ್. ಜನಮಟ್ಟಿ, ಕುಮಾರಿ ಭಾರತಿ, ಆರ್. ಶೋಭಾ, ದಾಕ್ಷಾಯಿಣಿ ಅಸೂಟಿ ಮತ್ತು ರಂಜಿತಾ ಪ್ರಮುಖ ಅಥ್ಲೀಟ್‌ಗಳು. 1950ರಿಂದ 1980ರ ಮೂರು ದಶಕಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಹೊರಬಂದ ಪ್ರಸಿದ್ಧ ಕ್ರಿಕೆಟ್ ಆಟಗಾರರೆಂದರೆ ಎಸ್.ಆರ್. ಕಡ್ಲೆ, ಸುರೇಶ್ ಕಿತ್ತೂರ್, ತುಳಪುಳೆ, ಸಿ.ಎಸ್. ಪಾಟೀಲ್, ವಿ.ಬಿ. ಪಾಟೀಲ್ ವಿ.ಆರ್. ತೊಂಬತ್ತ್, ದಿನೇಶ್ ತ್ರಿಕನ್ನಾಡ್, ಸುರೇಶ್ ಕಳಸವಾಡ್, ಸತೀಶ್ ಟಗರ್‌ಪುರ್, ದಳವಿ, ಭೋಸ್ಲೆ, ತೇಜ್‌ಪಾಲ್, ಬಾಬಾ ಭುಸರ್, ಸುಧಾಕರ್ ರೇ, ಜಾರ್ಜ್ ಡಿ ಮಾಂಟೆ, ಜೆ.ಎಂ. ಶೆಟ್ಟಿ, ವಿಜಯ್ ಕಾಮತ್, ಬಾಪುಪಾಟೀಲ್, ಪ್ರಮೋದ್ ಕಾಮತ್, ಕೈಲಾಸ್, ಮುನಾವರ್, ಸುನೀಲ್ ಕುಲಕರ್ಣಿ, ಐಯ್ಯಂಗಾರ್ ಸಹೋದರರು, ನವಾಬ್ ಸಹೋದರರು, ಸಿಂಡಿಗೇರಿ, ಆನಂದ ಶ್ರಾಫ್ ಮುಂತಾದವರು. 1993ರಲ್ಲಿ ಈಶ್ವರ ನೂಲ್ವಿ ನೇತೃತ್ವದಲ್ಲಿ ವಿಶ್ವವಿದ್ಯಾಲಯ ಕ್ರಿಕೆಟ್ ಟೀಂ ಅಂತರವಾರ್ಸಿಟಿ ದಕ್ಷಿಣ ಜೋನ್ ಟೂರ್ನ್‌ಮೆಂಟ್ ಗೆದ್ದರು. ಜಿಲ್ಲೆಯ ಇತ್ತೀಚಿನ ವಿಶ್ವವಿದ್ಯಾಲಯದ ಕ್ರಿಕೆಟ್ ಆಟಗಾರರಲ್ಲಿ ಶಂಕರ್ ಶೋಲಾಪುರ, ಪಾರ್ಥಾಸ್ ಸಾತ್ವಳೇಕರ್, ಮದನ್ ಬಾಂದೇಕರ್, ಸುಪ್ರೀತ್ ಟಗರ್‌ಪುರ್, ಮುತಾಲಿಕ್ ದೇಸಾಯಿ, ಇರ್ಫಾನ್, ಸಂಜಯ ಘಾಟ್‌ಗೆ, ಸುರೇಶ್‌ಬಾಬು ಪ್ರಮುಖರು.

ಟೇಬಲ್ ಟೆನ್ನಿಸ್ ಆಟದಲ್ಲಿ ಸಂಪತ್‌ಕುಮಾರ್, ಸತೀಶ್ ಟಗರ್‌ಪುರ, ರವಿ ಕುಲಕರ್ಣಿ, ಸಂಗಂ ಬೈಲೂರ್, ರವಿ ಒಡೆಯರ್, ಸನದಿ ಹಾಗೂ ರವಿ ಕುಮಾರ್ ಜನಪ್ರಿಯ ಹೆಸರುಗಳಾದರೆ, ಮಹಿಳಾ ಪಟುಗಳಲ್ಲಿ ಜ್ಯೋತಿ ಕಾರ್ಬಾನೇಸ್, ಮಹಾಗಾವ್‌ಕರ್, ಕಾಮತ್, ವನಮಾಲಾ ಪರಬ್ ಮುಖ್ಯರು.

ಬ್ಯಾಡ್‌ಮಿಂಟನ್‌ನ ಕ್ರೀಡಾಪಟುಗಳಲ್ಲಿ ಜೆ.ಎಸ್. ಪಾಂಡೆ, ಸುಧೀರ್ ಖೋಟ್ ಪ್ರಮುಖರಾದರೆ, 1970ನೇ ದಶಕದಲ್ಲಿ ರವಿಘಡಕೆ, ಗುರುದೇಶಪಾಂಡೆ ಅಂತರ ವಿಶ್ವವಿದ್ಯಾಲಯ ಪಂದ್ಯಗಳಲ್ಲಿ ಜಯಗಳಿಸಿದರು. 1980ನೇ ದಶಕದಲ್ಲಿ ಸಂತೋಷ್ ಕಾಮತ್ ಮತ್ತು ವಿನಯ ಜವಳಿ ರನ್ನರ್ಸ್ ಅಫ್ ಎನಿಸಿದ್ದರು. ಬ್ಯಾಡ್‌ಮಿಂಟನ್ ಆಟಗಾರ್ತಿಯರಲ್ಲಿ ಸಂಯುಕ್ತಾ ಕೇಸರಕೋಡಿ, ಲತಾ ರೇವಣಕರ್ ಖ್ಯಾತನಾಮರು. ಉಮಾಮೂರ್ತಿ ಮತ್ತು ಸುಧಾ ಪದ್ಮನಾಭನ್ 'ಉಬರ್‌ಕಪ್'ಗಾಗಿ ಭಾರತವನ್ನು ಪ್ರತಿನಿಧಿಸಿದ್ದರು. ಕುಸ್ತಿ ಕ್ರೀಡೆಯಲ್ಲಿ ಬಿ. ಹವಲ್ದಾರ್ 1957ರಲ್ಲಿ ಬೆನಾರೆಸ್‌ನಲ್ಲಿ ರನ್ನರ್ ಅಪ್ ಆದರು. ನಂತರ ಮಂಟುರಗಿ 1990ರಲ್ಲಿ ಕಾನ್‌ಪುರ ಪಂದ್ಯದಲ್ಲಿ ಮೂರನೇ ಸ್ಥಾನ ಗಳಿಸಿದರು. ಭಾರ ಎತ್ತುವಿಕೆ ಮತ್ತು ಉತ್ತಮ ದೇಹದಾರ್ಢ್ಯ ಸ್ಪರ್ಧೆಗಳಲ್ಲಿ ಎಂ.ಎಂ. ಲೊಂಡೆ 1959ರಲ್ಲಿ ಕಾನ್ಪುರದ ಸ್ಪರ್ಧೆಯಲ್ಲಿ ಮೂರನೇ ಸ್ಥಾನ, ಪ್ರಭು 1971ರಲ್ಲಿ ಬೆಂಗಳೂರಿನ ಸ್ಪರ್ಧೆಯಲ್ಲಿ ಎರಡನೇಸ್ಥಾನ, ಎಂ.ಎಂ. ಬ್ಯಾಹಟ್ಟಿ 1973ರಲ್ಲಿ ಹೈದರಾಬಾದ್ ಸ್ಪರ್ಧೆಯಲ್ಲಿ ಮೊದಲನೇ ಸ್ಥಾನಗಳಿಸಿದರು. ಸುಧೀರ್ ದೇವದಾಸ್ 1987ರಲ್ಲಿ ಬಿಲಾಸ್‌ಪುರದಲ್ಲಿ ನಡೆದ ಜಿಮ್ನ್ಯಾಸ್ಟಿಕ್ಸ್ ಸ್ಪರ್ಧೆಯಲ್ಲಿ ಮೂರನೇ ಸ್ಥಾನ ಗಳಿಸಿದರು. ಟೆನ್ನಿಸ್ ಆಟದಲ್ಲಿ ಸುಗಂದಿ ಬಿಜಾಪುರ, ಸತೀಶ್ ಟಗರ್‌ಪುರ, ಡಾ. ಶೇರ್‌ಪಠಾಣ್ ಪ್ರಾರಂಭಿಕ ಖ್ಯಾತ ಆಟಗಾರರಾದರೆ, ರವಿ ಹುಯಿಲಗೋಳ್, ಕೆ.ಎಸ್. ವೆಂಕಟೇಶ್, ಹೊಸಮತ್, ಬೆಣ್ಣೆ ಜೋಷಿ ಸಹೋದರರು, ಇತ್ತೀಚಿನವರು. ಹಾಕಿ ಆಟದಲ್ಲಿ ಮೊದಲು ಬಂಡುಪಾಟೀಲ್ ಮತ್ತು ಎಸ್. ಲಕ್ಷ್ಮಣ್ ವಿಶ್ವವಿದ್ಯಾಲಯದ

ಖ್ಯಾತ ಗೋಲ್ ಕೀಪರ್ಸ್ ಆಗಿದ್ದರು. ಈಚೆಗೆ ಮಾಡಿವಾಲೆ, ಬೇಪಾರೆ ಸಹೋದರರು, ಸೈಮನ್ ಫರ್ನಾಂಡಿಸ್, ಗೋಕಾಕ್, ಮಾಂಜರೇಕರ್ ಹಾಗೂ ಗದುಗಿನ ಟೀಂ ಆಟಗಾರರು ಪ್ರಮುಖರು. ಬಾಸ್ಕೆಟ್‌ಬಾಲ್ ಕ್ರೀಡೆಯಲ್ಲಿ ಬಳ್ಳಾರಿ, ಪಾವಟೆ, ರಾಜ್ಯಮಟ್ಟದ ಆಟಗಾರರು. 'ರೋವರ್ಸ್ ಕ್ಲಬ್ ಬಾಸ್ಕೆಟ್‌ಬಾಲ್ ಟೀಂ' ಅಖಿಲಭಾರತ ಟೂರ್ನಿಗಳನ್ನು ನಡೆಸುತ್ತದೆ.

ಜಿಲ್ಲೆಯಲ್ಲಿ ಕ್ರೀಡಾಭಿವೃದ್ಧಿಗೆ ವಿಪುಲ ಅವಕಾಶಗಳನ್ನು ಕಲ್ಪಿಸಲಾಗಿದೆ. ಧಾರವಾಡದಲ್ಲಿ 30,000 ಆಸನ ವ್ಯವಸ್ಥೆ ಇರುವ ಕ್ರೀಡಾಂಗಣ 32 ಲಕ್ಷ ರೂ. ವೆಚ್ಚದಲ್ಲಿ ರೂಪುಗೊಂಡಿದೆ. ಹುಬ್ಬಳ್ಳಿಯಲ್ಲಿ 25,000 ಆಸನ ವ್ಯವಸ್ಥೆ ಇರುವ ಮಹಾನಗರ ಪಾಲಿಕೆಯ ಆಡಳಿತದ ನೆಹರೂ ಕ್ರೀಡಾಂಗಣ ಸ್ಥಾಪನೆಯಾಗಿದೆ. ಹುಬ್ಬಳ್ಳಿಯ ಸುಸಜ್ಜಿತ ರೇಲ್ವೆ ಕ್ರೀಡಾಂಗಣ ಈಗಲೂ ರೇಲ್ವೆ ಕ್ರೀಡಾಪಟುಗಳ ತಾಣವಾಗಿದೆ. ತಾಲೂಕು ಮಟ್ಟದಲ್ಲಿಯೂ ಕ್ರೀಡಾಂಗಣ ವ್ಯವಸ್ಥೆಯಾಗುತ್ತಿದ್ದು, ಹಾವೇರಿ, ಗದಗ, ರಾಣೆಬೆನ್ನೂರು ಹಾಗೂ ಹಾನಗಲ್‌ಗಳಲ್ಲಿ ಕ್ರೀಡಾಂಗಣಗಳು ಸಿದ್ಧವಾಗುತ್ತವೆ. ಈಜು ಸ್ಪರ್ಧೆ ಇತ್ತೀಚಿನ ದಿನಗಳಲ್ಲಿ ಜನಪ್ರಿಯವಾಗುತ್ತಿದ್ದು, ಇದರ ಅಭಿವೃದ್ಧಿಗಾಗಿ ಹುಬ್ಬಳ್ಳಿ ಮತ್ತು ಧಾರವಾಡಗಳಲ್ಲಿ ಮಹಾನಗರಪಾಲಿಕೆಯಿಂದ ನಡೆಸಲ್ಪಡುವ ಎರಡು ಈಜು ಕೊಳಗಳಿವೆ.

ಧಾರವಾಡದಲ್ಲಿ ಬ್ಯಾಂಕ್ ಅಧಿಕಾರಿ ಮೂರ್ತಗುಡೆ ಸುಸಜ್ಜಿತ ವ್ಯಾಯಾಮ ಶಾಲೆಯನ್ನು ಖಾಸಗಿಯಾಗಿ ನಡೆಸುತ್ತಾರೆ. ಧಾರವಾಡದ ಮಲ್ಲಸಜ್ಜನ ವ್ಯಾಯಾಮ ಶಾಲೆಯಂತೂ (1928) ಪ್ರಸಿದ್ಧವೇ ಆಗಿದೆ. ಇದು ಕ್ರೀಡೆಗೆ ಸಂಬಂಧಿಸಿದ ಒಳ್ಳೆಯ ಗ್ರಂಥಾಲಯವನ್ನು ಹೊಂದಿದೆ. ಕ್ರೀಡಾ ಇಲಾಖೆ 1994ರ ವರೆಗೆ ಧಾರವಾಡದಲ್ಲಿ ವಿವಿಧ ಕ್ರೀಡಾಪಟುಗಳ ಅನುಕೂಲಕ್ಕಾಗಿ ವಿದ್ಯಾರ್ಥಿ ನಿಲಯವನ್ನು ನಡೆಸಿ, ಉಚಿತ ಊಟ ವಸತಿಗಳನ್ನು ನೀಡಿದ್ದೇ ಅಲ್ಲದೆ, ಅವರಿಗೆ ಸ್ಪೋರ್ಟ್ಸ್ ಕಿಟ್ ಸಹ ನೀಡಿತು.

**ಜಾನಪದ ಕ್ರೀಡೆಗಳು ಮತ್ತು ಮನೋರಂಜನೆ :** ಕುಸ್ತಿ, ಮಲ್ಲಕಂಬಗಳಂತಹ ಕ್ರೀಡೆಗಳಿಂದ ಹಿಡಿದು, ಸೂರ್ಯನಮಸ್ಕಾರ, ತಿಳಲಿ, ಚಿಣಿಫಣಿ, ಕಬಡ್ಡಿ ಮುಂತಾದ ಪ್ರಾಚೀನ ಜಾನಪದ ಕ್ರೀಡೆಗಳೂ, ಚೌಕಾಬಾರಾದಂತಹ ಹಲವಾರು ಮಹಿಳೆಯರ ಕ್ರೀಡೆಗಳೂ ಜಿಲ್ಲೆಯಲ್ಲಿ ಪ್ರಚಲಿತವಿವೆ. ಈಗಲೂ ಜಿಲ್ಲೆಯ ತಾಲೂಕು ಹಾಗೂ ಮುಖ್ಯ ಹಳ್ಳಿಗಳಲ್ಲಿ ಗರಡಿ ಮನೆಗಳು ಕಾಣಸಿಗುತ್ತವೆ. ಇವುಗಳಲ್ಲಿ ಯುವಕರು ಪ್ರತೀದಿನ ಬೆಳಗಿನ ಹೊತ್ತು ತಮ್ಮ ದೇಹದಾರ್ಢ್ಯ ಉತ್ತಮಗೊಳಿಸಿಕೊಂಡು, ಕುಸ್ತಿ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾರೆ. ಜಗದೀಶ್ ಮತ್ತು ಆದರ್ಶ ಕುಸ್ತಿ ವಿಭಾಗದಲ್ಲಿ ಹೆಸರುವಾಸಿಯಾಗಿದ್ದಾರೆ. ಜಿಲ್ಲೆಯ ವಿಶೇಷ ಕ್ರೀಡೆಯಾದ 'ಅಟ್ಯಾ - ಪಾಟ್ಯಾ' ಈಗ ರಾಷ್ಟ್ರಮಟ್ಟದ ಖ್ಯಾತಿಹೊಂದಿದ್ದು, ಒಲಿಂಪಿಕ್ ಕ್ರೀಡೆಯಾಗಲು ಶಿಫಾರಸುಗೊಂಡಿದೆ. ಧಾರವಾಡದ ತಳವಾರ ಈ ಆಟದಲ್ಲಿ ಮುಖ್ಯರು. ಉಳವಿ ಬಸಪ್ಪನ ಗುಡಿಯಲ್ಲಿ ನಡೆಯುವ 'ಹೆಜ್ಜೆಮೇಳ' 1920ರ ಸುಮಾರಿಗೆ ಪ್ರಾರಂಭವಾದ ಧಾರ್ಮಿಕ ಕ್ರೀಡೆ. ಈಗಲೂ ಶ್ರಾವಣ ಮಾಸದಂದು ಇದು ಆಚರಿಸಲ್ಪಡುತ್ತದೆ. ಶ್ರಾವಣ ಸೋಮವಾರದ ಜಂಗು ಕುಣಿತ, ಕವಾಯಿತು, ಲಜೀಮು, ಕೋಲಾಟ, ಗೌರಿಹುಣ್ಣಿಮೆಯ ಹಿಂದಿನ ಬಸವಣ್ಣದ ಸಕ್ರಿ ಆರತಿ, ಮೊಹರಂ ಹಬ್ಬದ ವಿಶೇಷ ನೃತ್ಯ ಇಂದಿಗೂ ಜನರನ್ನು ರಂಜಿಸುತ್ತವೆ. ಇವಲ್ಲದೆ ಸಂಕ್ರಾಂತಿಯ ವಿಶೇಷ ಹಸು ಎತ್ತುಗಳ ಅಲಂಕಾರ ಮತ್ತು ಜಾನಪದ ಕ್ರೀಡೆಗಳಲ್ಲಿ ಜಾನುವಾರುಗಳ ಪಾಲ್ಗೊಳ್ಳುವಿಕೆ ಕಾಣಬರುತ್ತದೆ. ಹುಬ್ಬಳ್ಳಿ ತಾಲೂಕಿನ ರೇವಡಿಹಾಳಗ್ರಾಮದ ಅಲಂ ಸಾಬ್ ಜಮಖಾನೆವಾಲ ಹುರುಳಿ, ಗೋಧಿಯೊಂದಿಗೆ ಹಾಲು ಕುಡಿಸಿ ತಯಾರು ಮಾಡಿರುವ ಜೋಡಿ ಎತ್ತುಗಳು ಹಲವಾರು ಓಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ, ಬಹುಮಾನಗಳನ್ನು ಗಳಿಸಿವೆ.